UASB Library

Monthly Magazine Clipping Service

Vol. 01 (August) 2026

UASB Library

www.uasbagrilibindia.org
080 23636234
librarianuasb@gmail.com

ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ *ಆಗಸ್ಟ್ 6, 2026 ₹25

ತರಂಗ



ಮುದ್ರಾ ವಿಜ್ಞಾನ

ಪಂಚತತ್ವ ಸಮತೋಲನ
ತನು-ಮನ ಸ್ವಾಸ್ಥ್ಯ ಸಂವರ್ಧನ

KASB Library



'ಅನ್ನದ ಬಟ್ಟಲೆಂದೇ' ಹೆಸರಾಗಿರುವ ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ಕಂಡುಬರುತ್ತಿದ್ದ ಈ ದೃಶ್ಯ ಸತತ ಮೂರನೆಯ ವರ್ಷವೂ ಮರೀಚಿಕೆಯಾಗಲಿದೆ

ಅನ್ನದ ಬಟ್ಟಲಲ್ಲಿ ಬೆಲೆ ಏರಿಕೆ ಬಿಸಿ

ಮೂರನೆಯ ವರ್ಷವೂ ಭತ್ತ ಸಂಕಷ್ಟ

ರಾಜ್ಯದ ಮಾರುಕಟ್ಟೆಗಳಲ್ಲಿ ಅಕ್ಕಿಯ ಬೆಲೆ ಮತ್ತೆ ಏರಿಕೆ ಕಾಣುತ್ತಿದೆ. ಇದರ ಹಿಂದೆ ಇರುವುದು ಕೇವಲ ಮಾರುಕಟ್ಟೆಯ ಏರಿಳಿತವಲ್ಲ, 'ಅನ್ನದ ಬಟ್ಟಲೆಂದೇ' ಕರೆಸಿಕೊಳ್ಳುವ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಸತತ ಮೂರನೆಯ ವರ್ಷವೂ ಎದುರಾಗಿರುವ ಭತ್ತದ ಬೆಳೆ ಸಂಕಷ್ಟವೂ ಇದಕ್ಕೆ ಕಾರಣ. ಜಲಾಶಯದಲ್ಲಿ ನೀರಿನ ಕೊರತೆ, ನಾಟಿ ಕಾರ್ಯದಲ್ಲಿ ವಿಳಂಬ ಮತ್ತು ಉತ್ಪಾದನೆ ಕುಸಿತದ ಆತಂಕ ಈಗ ರೈತರನ್ನಷ್ಟೇ ಕಾಡುತ್ತಿರುವುದಲ್ಲ, ಇದು ಅಕ್ಕಿ ಮಿಲ್, ವ್ಯಾಪಾರ ಕ್ಷೇತ್ರ ಮತ್ತು ಗ್ರಾಹಕರ ಅಡುಗೆ ಮನೆಯವರೆಗೂ ತಟ್ಟತೊಡಗಿದೆ.

❑ ಚಾಮರಾಜ ಸವಡಿ

ರಾಜ್ಯದ ಮಾರುಕಟ್ಟೆಗಳಲ್ಲಿ ಅಕ್ಕಿಯ ಬೆಲೆ ಏರುತ್ತಿದೆ. ಇದು ಕೇವಲ ಋತುಮಾನಿಕ ಬೆಲೆ ಏರಿಕೆಯೇ ಅಥವಾ ಕರ್ನಾಟಕದ ಆಹಾರ ವ್ಯವಸ್ಥೆಗೆ ಎದುರಾಗುತ್ತಿರುವ ದೊಡ್ಡ ಸವಾಲಿನ ಮೊದಲ ಸೂಚನೆಯೇ ಎಂಬ ಪ್ರಶ್ನೆ ಈಗ ಎದುರಾಗಿದೆ.

ಅಕ್ಕಿಯ ಸಗಟು ವ್ಯಾಪಾರಿಗಳ ಪ್ರಕಾರ, ಖ್ಯಾತ ಸೋನಾ ಮಸೂರಿ ಅಕ್ಕಿಯ ಸಗಟು ದರ ಕಳೆದ 20 ದಿನಗಳಲ್ಲಿ ಪ್ರತಿ ಕ್ವಿಂಟಾಲಿಗೆ 200 ರಿಂದ 300 ರೂಪಾಯಿವರೆಗೆ ಏರಿಕೆಯಾಗಿದೆ. ಗಂಗಾವತಿ ಮತ್ತು ಸಿಂಧನೂರು ಭಾಗಗಳ ಸಗಟು ಮಾರುಕಟ್ಟೆಗಳಲ್ಲಿ 4,800 ರೂ. ಇದ್ದ ದರ ಈಗ 5,000 ರೂ.ಗಳಿಂದ 5,200 ರೂ.ಗಳ ವರೆಗೆ ತಲುಪಿದೆ. ಮುಂಗಾರು ವಿಫಲವಾಗಿರುವುದರಿಂದ, ಈ ಬೆಲೆ ಏರಿಕೆ ನಿರಂತರವಾಗಲಿದೆ ಎಂಬುದು ಅವರ ಮುನ್ಸೂಚನೆ.

ಸೋನಾ ಮಸೂರಿ ಮಾತ್ರವಲ್ಲ, ಇತರ ತಳಿಗಳ ಅಕ್ಕಿಯ ದರವೂ ಏರಿಕೆಯಾಗುತ್ತಿದೆ. ಸ್ಟೀಮ್ ಅಕ್ಕಿಯ ದರ ಕೆ.ಜಿ.ಗೆ 45 ರೂ.ಗಳಿಂದ 60 ರೂ.ಗಳಿಗೆ, ಕೊಲಂ ರೈಸ್ 66 ರೂ.ಗಳಿಂದ 80 ರೂ.ಗಳಿಗೆ, ರಾ ರೈಸ್ 70 ರೂ.ಗಳಿಂದ 83 ರೂ.ಗಳಿಗೆ ಏರಿದೆ. ಜೀರಾ ತಳಿಯ ಅಕ್ಕಿಯ ದರ 110 ರೂ.ಗಳಿಂದ 215 ರೂ.ಗಳಿಗೆ ಜಿಗಿದಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಸ್ಟೀಮ್ ಅಕ್ಕಿ 70 ರೂ., ಕೊಲಂ 90 ರೂ., ರಾ ರೈಸ್ 93 ರೂ. ಮತ್ತು ಜೀರಾ ಅಕ್ಕಿ 250 ರೂ.ಗಳನ್ನು ದಾಟಿದೆ.

ಈ ಬೆಳವಣಿಗೆಯನ್ನು ಕೇವಲ ಮಾರುಕಟ್ಟೆಯ ಬೇಡಿಕೆ-ಪೂರೈಕೆಯ ಸಾಮಾನ್ಯ ಏರಿಳಿತವಾಗಿ ನೋಡುವಂತಿಲ್ಲ. ಇದರ ಬೇರುಗಳು ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಹೊಲಗಳಲ್ಲಿ ಅಡಗಿವೆ.

ಭತ್ತದ ಕಣಜದ ಸಂಕಷ್ಟ

ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕಾರಟಗಿ, ರಾಯಚೂರಿನ ಸಿಂಧನೂರು, ಮಾನ್ವಿ ಮತ್ತು ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಭಾಗಗಳು ರಾಜ್ಯದ ಪ್ರಮುಖ ಭತ್ತ ಉತ್ಪಾದನಾ ವಲಯಗಳು. ವಿಶೇಷವಾಗಿ, ಸೋನಾ ಮಸೂರಿ ತಳಿಯ ಭತ್ತ ಬೆಳೆಯುವ ಪ್ರದೇಶವಾಗಿ ಈ ಭಾಗಗಳು ರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಿಕೊಂಡಿವೆ.

ಆದರೆ ಈ ಬಾರಿ ಚಿತ್ರಣ ಬದಲಾಗಿದೆ.

ಸಾಮಾನ್ಯವಾಗಿ ಜುಲೈ ತಿಂಗಳೊಳಗೆ ಭತ್ತದ ನಾಟಿ ಮುಗಿದು ಒಂದೂವರೆ ತಿಂಗಳಾಗಿರಬೇಕು. ಆದರೆ, ಭತ್ತ ಬೆಳೆಯುವ ಬಹುತೇಕ ಕಡೆಗಳಲ್ಲಿ ಇನ್ನೂ ನಾಟಿಯೇ ಆಗಿಲ್ಲ. ಕೆಲವು ರೈತರು ಸಸಿಮಡಿಯಲ್ಲಿ ಸಸಿಗಳನ್ನು ಬೆಳೆಸಿದ್ದರೂ, ಅವನ್ನು ಹೊಲದಲ್ಲಿ ನಾಟಿ ಮಾಡಲು ನೀರೇ ಇಲ್ಲ. ಮಳೆಯ ಅನಿಶ್ಚಿತತೆ ಹಾಗೂ ತುಂಗಭದ್ರಾ ಅಣೆಕಟ್ಟೆಯಿಂದ ನೀರು ಬಿಡುಗಡೆ ಅನುಮಾನಾಸ್ಪದವಾಗಿರುವುದರಿಂದ, ಬಹುತೇಕರು ಬಿತ್ತನೆಯನ್ನೇ ಕೈಬಿಟ್ಟಿದ್ದಾರೆ. ಸಸಿಮಡಿಗಳಿಗೆ ನೀರುಣಿಸುವುದು ಸಹ ಹಲವು ಕಡೆಗಳಲ್ಲಿ ದೊಡ್ಡ ಸವಾಲಾಗತೊಡಗಿದೆ.

ಇದರ ಪರಿಣಾಮವಾಗಿ, ರಾಜ್ಯದೊಳಗಿನ 12.5 ಲಕ್ಷ ಎಕರೆಗೂ ಹೆಚ್ಚಿನ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತದ ಉತ್ಪಾದನೆ ಈ ಹಂಗಾಮಿನಲ್ಲಿ ಗಣನೀಯವಾಗಿ ಕುಸಿಯುವ ಆತಂಕ ಎದುರಾಗಿದೆ. ಸತತ ಮೂರನೆಯ ವರ್ಷ ಈ ರೀತಿಯಾಗಿದ್ದು, ಭತ್ತದ ಕೊರತೆ ತೀವ್ರವಾಗುವ ಅಪಾಯ ತಲೆದೋರಿದೆ.

ಭತ್ತದ ಕೊರತೆ ಮೊದಲು ಕಂಡುಬರುವುದು ಮಾರುಕಟ್ಟೆಯಲ್ಲಿ, ಏಕೆಂದರೆ, ಉತ್ಪಾದನೆ ಕಡಿಮೆಯಾಗಲಿದೆ ಎಂಬ ಸೂಚನೆ ದೊರೆತ ಕ್ಷಣದಿಂದಲೇ ವ್ಯಾಪಾರಿಗಳು, ಅಕ್ಕಿ ಗಿರಣಿಗಳು ಮತ್ತು ಸಗಟು ಮಾರುಕಟ್ಟೆಗಳು ತಮ್ಮ ಖರೀದಿ ತಂತ್ರ ಬದಲಾಯಿಸುತ್ತವೆ. ಅದರ ಪರಿಣಾಮ ದರದಲ್ಲೂ ಗೋಚರಿಸುತ್ತದೆ.

ಜಲಾಶಯದಲ್ಲೇ ಆರಂಭವಾದ ಸಮಸ್ಯೆ

ಈ ಸಂಕಷ್ಟದ ಕೇಂದ್ರಬಿಂದುವಾಗಿರುವುದು ತುಂಗಭದ್ರಾ ಜಲಾಶಯ.

2024ರ ಆಗಸ್ಟ್‌ನಲ್ಲಿ ತುಂಗಭದ್ರಾ ಜಲಾಶಯದ 19ನೆಯ ಕ್ರೆಸ್ಟ್ ಗೇಟ್ ಕೊಚ್ಚಿಹೋದ ಪರಿಣಾಮ ಜಲಾಶಯದ ನೀರು ಸಂಗ್ರಹ ಸಾಮರ್ಥ್ಯಕ್ಕೆ ಭಾರೀ ಹೊಡೆತ ಬಿದ್ದಿತ್ತು. ಅದರ ಪರಿಣಾಮ, ಆಗ ಭತ್ತದ ಉತ್ಪಾದನೆಯ ಮೇಲೂ ಉಂಟಾಗಿತ್ತು. 'ಅಣೆಕಟ್ಟೆಯ ಎಲ್ಲಾ ಕ್ರೆಸ್ಟ್ ಗೇಟ್‌ಗಳನ್ನು ಇಪ್ಪತ್ತು ವರ್ಷಗಳ ಹಿಂದೆಯೇ ಬದಲಿಸಬೇಕಿತ್ತು. ಈಗ ಬಹುತೇಕ ಗೇಟ್‌ಗಳಲ್ಲಿ ಸಮಸ್ಯೆ ಇರುವುದರಿಂದ, ಎಲ್ಲಾ 33 ಕ್ರೆಸ್ಟ್ ಗೇಟ್‌ಗಳನ್ನೂ ಬದಲಿಸಬೇಕು' ಎಂದು ಕೇಂದ್ರದ ತಜ್ಞರ ಸಮಿತಿ ತನ್ನ ಪರಿಶೀಲನಾ ವರದಿಯಲ್ಲಿ ಸ್ಪಷ್ಟಪಡಿಸಿದ ಅನಂತರ, ಗೇಟ್ ಬದಲಿಸಲು ಮತ್ತೊಂದು ವರ್ಷವೇ ಹಿಡಿಯಿತು.

ಹೀಗಾಗಿ, ಸತತ ಎರಡು ವರ್ಷಗಳ ಕಾಲ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಭತ್ತದ ಬೆಳೆ ಪೂರ್ಣವಾಗಿ ಕೈಗೆ ಬರಲಿಲ್ಲ. ಈ ವರ್ಷದ ಜೂನ್ 25ರಂದು, ನೂತನ ಕ್ರೆಸ್ಟ್ ಗೇಟ್‌ಗಳು

UASP Library



ಕೊಪ್ಪಳ ತಾಲೂಕಿನ ಮುನಿರಾಬಾದ್‌ನಲ್ಲಿರುವ 105 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ ಜುಲೈ ತಿಂಗಳ ಮೂರನೆಯ ವಾರದಲ್ಲಿ ಕೇವಲ 26 ಟಿಎಂಸಿ ಅಡಿ ನೀರು ಬಂದಿದೆ.

ಲೋಕಾರ್ಪಣೆಯಾದ ಅನಂತರ, ಅಣೆಕಟ್ಟು ಈ ವರ್ಷವಾದರೂ ಎರಡು ಬೆಳೆಗಳಿಗೆ ಸಾಲುವಷ್ಟು ನೀರು ನೀಡಬಹುದು ಎಂದು ರೈತರೆಲ್ಲ ಆಶಾಭಾವನೆ ವ್ಯಕ್ತಪಡಿಸಿದ್ದರು.

ಆದರೆ ಮುಂಗಾರು ಮಳೆ ಕೈಕೊಟ್ಟುಬಿಟ್ಟಿದೆ.

ಸದ್ಯ 105 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯ ಉಳಿಸಿಕೊಂಡಿರುವ ತುಂಗಭದ್ರಾ ಜಲಾಶಯಕ್ಕೆ ಜುಲೈ ಮೂರನೆಯ ವಾರದ ಕೊನೆಯವರೆಗೆ ಕೇವಲ 26 ಟಿಎಂಸಿ ಅಡಿ ನೀರು ಮಾತ್ರ ಬಂದಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಜಲಾಶಯದಲ್ಲಿ 77 ಟಿಎಂಸಿ ಅಡಿಗೂ ಹೆಚ್ಚು ನೀರು ಇತ್ತು.

ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್)ದ ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಎಂಜಿನಿಯರ್ ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿ ಎಸ್. ಬಿ. ಮಲ್ಲಿಗವಾಡ ಅವರ ಪ್ರಕಾರ, ಜಲಾಶಯದ ಸಂಗ್ರಹ 40 ಟಿಎಂಸಿ ಅಡಿಗೆ ಏರುವವರೆಗೆ ಕಾಲುವೆಗಳಿಗೆ ನೀರು ಬಿಡಲು ನಿರ್ಬಂಧವಿದೆ.

ಇತ್ತ ಮಳೆಯೂ ಇಲ್ಲ, ಅತ್ತ ಜಲಾಶಯದ ನೀರೂ ಬರುವಂತಿಲ್ಲ, ಹೀಗಾಗಿ, ಅಚ್ಚುಕಟ್ಟು ಪ್ರದೇಶದ 12.5 ಲಕ್ಷ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಭತ್ತದ ನಾಟಿಗೆ ಸಿದ್ಧತೆ ಮಾಡಿಕೊಂಡಿರುವ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಹೊಲಗಳಲ್ಲಿ ಕಾಣುತ್ತಿರುವ ಆತಂಕ

ಅಚ್ಚುಕಟ್ಟು ಪ್ರದೇಶ ಮಾತ್ರವಲ್ಲ, ನದಿ ತೀರದ ಪಂಪ್‌ಸೆಟ್ ಆಧಾರಿತ ಕೃಷಿಯೂ ಸಂಕಷ್ಟ ಎದುರಿಸುತ್ತಿದೆ.

ಉದಾಹರಣೆಗೆ, ವಿಜಯನಗರ ಜಿಲ್ಲೆಯ ಕುರುಗೋಡು ತಾಲೂಕಿನ ನದಿ ಆಧರಿತ ಸಾವಿರಾರು ಎಕರೆಗಳಷ್ಟು ಪ್ರದೇಶದಲ್ಲಿ, ನದಿಯಲ್ಲಿ ಹರಿಯುತ್ತಿದ್ದ ಸಣ್ಣ ಪ್ರಮಾಣದ ನೀರು ನೆಚ್ಚಿಕೊಂಡು ಭತ್ತ ಬಿತ್ತನೆ ಮಾಡಲಾಗಿತ್ತು. ಒಂದು ಎಕರೆಗೆ ಗೊಬ್ಬರ ಸೇರಿದಂತೆ ಸುಮಾರು ರೂ. 25 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡಿದ್ದಾರೆ ರೈತರು.

ಆದರೆ, ಮಳೆಯ ತೀವ್ರ ಕೊರತೆಯಿಂದ, ತುಂಗಭದ್ರಾ ನದಿ ಬತ್ತಿಹೋಗಿದೆ. ನದಿಯಲ್ಲಿ ನೀರಿನ ಹರಿವು ಕ್ಷೀಣಿಸಿರುವುದರಿಂದ ಕೊಳವೆಬಾವಿಗಳಲ್ಲಿಯೂ ನೀರಿಲ್ಲ, ಇದರಿಂದಾಗಿ ಭತ್ತದ ಬೆಳೆ ಈಗ ಒಣಗತೊಡಗಿದೆ.

ನದಿಗೆ ನೀರು ಬಿಟ್ಟರೆ ಪಂಪ್‌ಸೆಟ್ ಬೆಳೆಗಳಿಗೆ ನೀರು ಒದಗಿಸಲು ಸಾಧ್ಯ ಎಂದು ಈ ಭಾಗದ ಸಾವಿರಾರು ರೈತರು ತುಂಗಭದ್ರಾ ಮಂಡಳಿಯ ಮೇಲೆ ಒತ್ತಡ ಹೇರುತ್ತಿದ್ದಾರೆ. ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ರೈತರು ಆಯಾ ಜಿಲ್ಲಾಧಿಕಾರಿಗಳನ್ನು ಆಂಗಲಾಚುತ್ತಿದ್ದಾರೆ.

ಅಕ್ಕಿ ಮಿಲ್‌ಗಳ ಮೇಲೂ ಪರಿಣಾಮ

ಹೊಲಗಳಲ್ಲಿ ಆರಂಭವಾದ ಈ ಸಮಸ್ಯೆ ಈಗ ಅಕ್ಕಿ ಗಿರಣಿಗಳ ಬಾಗಿಲನ್ನೂ ತಟ್ಟತೊಡಗಿದೆ.

ಗಂಗಾವತಿ, ಕಾರಟಗಿ, ಸಿಂಧನೂರು, ಸಿರುಗುಪ್ಪ ಮತ್ತು ರಾಯಚೂರಿನ ನೂರಾರು ಅಕ್ಕಿ ಗಿರಣಿಗಳು ಬತ್ತನೆ ಸಮಯದಲ್ಲಿ, ಹಳೆಯ ಭತ್ತ ಬಳಸಿ ಅಕ್ಕಿ ಸಿದ್ಧಪಡಿಸುತ್ತವೆ. ಆದರೆ, ಸತತ ಎರಡು ವರ್ಷಗಳಿಂದ ದಾಸ್ತಾನು ಕೊರತೆ ಉಂಟಾಗಿದ್ದರಿಂದ, ಅವುಗಳಿಗೆ ಸಾಕಷ್ಟು ಕಚ್ಚಾ ವಸ್ತು ದೊರೆಯುತ್ತಿಲ್ಲ. ಈ ವರ್ಷವೂ ಉತ್ಪಾದನೆ ಕೊರತೆಯಾಗುವುದು ಸ್ಪಷ್ಟವಾಗಿರುವುದರಿಂದ, ಗಿರಣಿ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೆಲವು ಮಿಲ್‌ಗಳು ನೆರೆಯ ರಾಜ್ಯಗಳಿಂದ ಭತ್ತ ಖರೀದಿಸಿ ಕಾರ್ಯಾಚರಣೆ ಮುಂದುವರಿಸುತ್ತಿವೆಯಾದರೂ, ಖರೀದಿ ವೆಚ್ಚದ ಜೊತೆಗೆ ಸಾರಿಗೆ ಮತ್ತು ಸಂಗ್ರಹಣೆ ವೆಚ್ಚವೂ ಹೆಚ್ಚುತ್ತಿದೆ. ಇದರ ಪರಿಣಾಮ ಉತ್ಪಾದನಾ ವೆಚ್ಚದ ಮೇಲೂ ಬೀಳುತ್ತಿದೆ.

''ಉತ್ಪಾದನೆ ಕುಸಿತದ ಜೊತೆಗೆ ಸಾರಿಗೆ ಮತ್ತು ಸಂಗ್ರಹಣೆ ವೆಚ್ಚ ಹೆಚ್ಚಳವೂ ಅಕ್ಕಿ ದರ ಏರಿಕೆಗೆ ಕಾರಣವಾಗಿದೆ'' ಎನ್ನುತ್ತಾರೆ ಗಂಗಾವತಿಯ ಅಕ್ಕಿ ಗಿರಣಿ ಮಾಲೀಕ ಸೂರ್ಯನಾರಾಯಣ ಚಿಲಕೂರಿ.

ಅಕ್ಕಿ ಉದ್ಯಮದವರು ಈಗಾಗಲೇ ಕಚ್ಚಾ ವಸ್ತು ಕೊರತೆಯ ಸಾಧ್ಯತೆಯನ್ನು ಲೆಕ್ಕ ಹಾಕಲು ಆರಂಭಿಸಿದ್ದಾರೆ. ಇದೇ ಕಾರಣಕ್ಕೆ ಮಾರುಕಟ್ಟೆಯಲ್ಲಿ ದರ ಏರಿಕೆಯ ಒತ್ತಡ ಕಂಡುಬರುತ್ತಿದೆ.

ಗ್ರಾಹಕರ ತಟ್ಟೆಯ ಮೇಲೆ ಪರಿಣಾಮ

ಅಕ್ಕಿಯ ಬೆಲೆ ಏರಿಕೆ ರೈತರ ಅಥವಾ ವ್ಯಾಪಾರಿಗಳ ಸಮಸ್ಯೆಯಷ್ಟೇ ಅಲ್ಲ ಅದರ ಅಂತಿಮ ಪರಿಣಾಮ ಗ್ರಾಹಕರ ಮೇಲೆ ಬೀಳುತ್ತದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ಅಕ್ಕಿ ಮತ್ತು ಬೇಳೆಗಳ ದರ ಈಗಾಗಲೇ ಏರಿಕೆ ಕಂಡಿವೆ. ಮುಂದಿನ ತಿಂಗಳುಗಳಲ್ಲಿ ಭತ್ತದ ಉತ್ಪಾದನೆ ಮತ್ತಷ್ಟು ಕುಸಿದರೆ, ಅದರ ಪರಿಣಾಮ ಇನ್ನಷ್ಟು ಸ್ಪಷ್ಟವಾಗಿ ಕಾಣಿಸಬಹುದು.

ಸೋನಾ ಮಸೂರಿ ಸೇರಿದಂತೆ ಹಲವು ತಳಿಗಳ ಅಕ್ಕಿಗಳು ರಾಜ್ಯದ ಗೃಹ ಬಳಕೆಯಲ್ಲಿ ಪ್ರಮುಖ ಸ್ಥಾನ ಹೊಂದಿವೆ. ಹೀಗಾಗಿ ದರ ಏರಿಕೆ ನೇರವಾಗಿ ಕುಟುಂಬಗಳ ಆಹಾರ ವೆಚ್ಚವನ್ನು ಹೆಚ್ಚಿಸುವ ಸಾಧ್ಯತೆ ಇದೆ.

ಇದು ಕೇವಲ ನಗರ ಪ್ರದೇಶಗಳ ಸಮಸ್ಯೆಯಲ್ಲ, ಗ್ರಾಮೀಣ ಪ್ರದೇಶಗಳಲ್ಲೂ ಅಕ್ಕಿ ಪ್ರಮುಖ ಆಹಾರ ಧಾನ್ಯವಾಗಿರುವುದರಿಂದ ಅದರ **ಪರಿಣಾಮ ವ್ಯಾಪಕವಾಗಿರಲಿದೆ.**

ಅಕ್ಕಿ ಬೆಲೆ ಏರಿಕೆಯನ್ನು ಕೇವಲ ಮಾರುಕಟ್ಟೆ ಬೆಳವಣಿಗೆಯಾಗಿ ನೋಡುವುದಕ್ಕಿಂತ ಆಹಾರ ಭದ್ರತೆಯ ದೃಷ್ಟಿಯಿಂದಲೂ ಪರಿಶೀಲಿಸುವ ಅಗತ್ಯವಿದೆ. ಏಕೆಂದರೆ ರಾಜ್ಯದ ಪ್ರಮುಖ ಭತ್ತ ಉತ್ಪಾದನಾ ವಲಯಗಳ ಪೈಕಿ ಒಂದರಲ್ಲಿ ಉತ್ಪಾದನೆ ಕುಸಿದರೂ ಅದರ ಪರಿಣಾಮ ಮಾರುಕಟ್ಟೆಯನ್ನು ಮೀರಿ ಆಹಾರ ವ್ಯವಸ್ಥೆಯ ಮೇಲೂ ಬೀಳುತ್ತದೆ.

ಸದ್ಯ ಎಲ್ಲರ ದೃಷ್ಟಿಯೂ ಮಳೆಯತ್ತ ನೆಟ್ಟಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ಜಲಾಶಯದ ನೀರಿನ ಮಟ್ಟ ಏರಿದರೆ, ಕೆಲವು ಪ್ರದೇಶಗಳಲ್ಲಿ ಪರಿಸ್ಥಿತಿ ಸುಧಾರಿಸುವ ಅವಕಾಶವಿದೆ. ಆದರೆ ಮಳೆ ಮತ್ತೆ ಕೈಕೊಟ್ಟರೆ ಈ ಸಲ ರಾಜ್ಯದ ಅನ್ನದ ಬಟ್ಟಲು ಖಾಲಿಯಾಗಲಿದೆ.



ತುಂಗಭದ್ರಾ ನದಿ ಬತ್ತಿರುವುದರಿಂದ, ಬಾಯಾರಿರುವ ಪಂಪ್‌ಸೆಟ್ ಪೈಪ್‌ಗಳು.

UASD Library

ಮರದ ಮೇಲೆ 'ಬೆಳೆಯುವ ತುಪ್ಪ'

□ಕಲಗಾರು ಲಕ್ಷ್ಮೀನಾರಾಯಣ ಹೆಗಡೆ



ಹಸುರು ಕಾಯಿ

ತುಪ್ಪ ಎಂದಾಕ್ಷಣ ನಮಗೆ ಘಟ್ಟಣೆ ನೆನಪಾಗುವುದು ಹಾಲಿನಿಂದ ಮಾಡಿದ ತುಪ್ಪ. ಆದರೆ, ಮರದ ಮೇಲೂ ತುಪ್ಪ ಬೆಳೆಯುತ್ತದೆ! ಮಲೆನಾಡಿನಲ್ಲಿ ಬೆಳೆಯುವ ಒಂದು ಬಗೆಯ ಮರ ಇದು. 'ಉಪ್ಪಾಗೆ/ಉಪ್ಪಗೆ' ಎಂಬ ಈ ಮರದಲ್ಲಿ ಅನೇಕ ಪ್ರಭೇದಗಳಿವೆ. ಸಾಂಪ್ರದಾಯಿಕ ರೀತಿಯಲ್ಲಿ ಈ ಮರದ ಬೀಜಗಳನ್ನು ಹುರಿದು ತಯಾರಿಸುವ ತುಪ್ಪ ಹೇಗಿರುತ್ತದೆ? ಇಲ್ಲಿದೆ ವಿವರ.



ಹಳದಿ ಹಣ್ಣು ಮತ್ತು ತುಪ್ಪ

ತುಪ್ಪ ಸಂಪೂರ್ಣ ಆಹಾರ. ಸಹಸ್ರ ಸಹಸ್ರ ಮಾನಗಳಿಂದಲೂ ತುಪ್ಪಕ್ಕೆ ತನ್ನದೇ ಘನತೆ ಇದೆ. 'ಸಾಲ ಮಾಡಿಯಾದರೂ ತುಪ್ಪ ಕುಡಿ' ಎಂಬ ಉಕ್ತಿ ಇದೆ. ಸಾಲ ಮಾಡಿಯಾದರೂ ಹಾಲು, ಮೊಸರು,ತುಪ್ಪಗಳಿಗಾಗಿಯೇ ದನ, ಎಮ್ಮೆ ಸಾಕುವ ಪರಿಪಾಠ ಗ್ರಾಮೀಣರಲ್ಲಿದೆ. ಹೀಗಿರುತ್ತ, ಆಹಾರ ಹಾಗೂ ಔಷಧಿಯಾಗಿ ಬಳಸುವ ತುಪ್ಪ ಮರದ ಮೇಲೆ ಬೆಳೆದರೆ ! ಆಶ್ಚರ್ಯವಲ್ಲವೇ ?

ಹೌದು , ಮಲೆನಾಡಿನ ಕಾಡಿನಲ್ಲಿ ತುಪ್ಪ ಬೆಳೆಯುವ ಮರವಿದೆ. ಸ್ಥಳೀಯವಾಗಿ 'ಉಪ್ಪಾಗೆ ಮರ' ಎಂದು ಕರೆಯುವ ಇದರ ಬೀಜದಿಂದ ಮರಳು ಮರಳಾದ ತುಪ್ಪ ತಯಾರಿಸುತ್ತಾರೆ.

ವೈಜ್ಞಾನಿಕ ಮಾಹಿತಿ

ಉಪ್ಪಾಗೆ ಅಥವಾ ಉಪ್ಪಗೆ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಬೆಳೆಯುವ ಔಷಧೀಯ ಗುಣಗಳುಳ್ಳ ಹಣ್ಣುಗಳನ್ನು ಬಿಡುವ ಮರ. ಸಸ್ಯಶಾಸ್ತ್ರದಲ್ಲಿ ಗಾರ್ಸಿನಿಯಾ ಕುಟುಂಬದ ವ್ಯಾಪ್ತಿಯಲ್ಲಿ ಬರುವ ಇದರ ವೈಜ್ಞಾನಿಕ ಹೆಸರು ಗಾರ್ಸಿನೀಯಾ ಗುಮ್ಮಿಗುಟ್ಟ. ಗಾಂಬೋಜ್, ಕಾಚ್ ಪುಳಿ, ಕಾಚಂಪುಳಿ, ಪಣಪ್ಪುಳಿ, ಮಂತುಹುಳಿ ಎಂಬ ವಿವಿಧ ಹೆಸರುಗಳು ಇದಕ್ಕೆ. ತುಳು ಮತ್ತು ಮಲೆಯಾಳದಲ್ಲಿ 'ಕೋಡಂಪುಳಿ' ಎಂದು ಕರೆಯಲಾಗುವ ಈ ಮರದ 35 ಪ್ರಭೇದಗಳು ಭಾರತದಲ್ಲಿವೆ. ಕರ್ನಾಟಕ ಮತ್ತು ಕೇರಳದ ಪಶ್ಚಿಮಘಟ್ಟದ ಕಾಡುಗಳಲ್ಲದೆ ಇಂಡೋನೇಷ್ಯಾ ಮತ್ತು ಆಫ್ರಿಕಾದಲ್ಲೂ ಬೆಳೆಯುತ್ತವೆ. ಕರ್ನಾಟಕದ ಪಶ್ಚಿಮಘಟ್ಟಗಳ ಪ್ರದೇಶದಲ್ಲಿ 10 ಪ್ರಭೇದಗಳು ಕಾಣಸಿಗುತ್ತಿದ್ದು, ಉತ್ತರ ಕನ್ನಡ ಜಿಲ್ಲೆಯ ಆರಣ್ಯಗಳಲ್ಲಿ ಉಪ್ಪಗೆ, ಮುರಗಲು, ಆರಿಸಿಣಗುರಗಿ, ಜಾಣಗೆ, ಕಾಡುಮುರಗಲು ಪ್ರಭೇದಗಳಿವೆ. ಫೆಬ್ರವರಿ-ಮಾರ್ಚ್ ಅವಧಿಯಲ್ಲಿ ಹೂ ಬಿಡುವ ಉಪ್ಪಾಗೆ ಹಣ್ಣಾಗುವುದು ಜೂನ್-ಜುಲೈ ತಿಂಗಳ ಮಳೆಗಾಲದಲ್ಲಿ. ಹಣ್ಣುಗಳು ತಿಳಿಹಳದಿ ಬಣ್ಣದಿಂದ ಕೂಡಿದ್ದು ಉಬ್ಬು- ತಗ್ಗಿನ ಮೇಲ್ಮೈ ಹೊಂದಿರುತ್ತವೆ. ಹಣ್ಣಿನ ಮೇಲ್ಭಾಗ 6ರಿಂದ 8 ಉಬ್ಬಿದ ಗೆರೆಗಳಿಂದ ಕೂಡಿದ್ದು ಒಂದು ಹಣ್ಣಿನಲ್ಲಿ 6ರಿಂದ 8 ಬೀಜಗಳಿರುತ್ತವೆ. ಉಪ್ಪಾಗೆ ಹಣ್ಣುಗಳನ್ನು ಆಹಾರ ಮತ್ತು ಔಷಧೀಯ ಕಾರಣಕ್ಕಾಗಿ ಬಳಸಲಾಗುತ್ತದೆ.

ಮಲೆನಾಡಿನ ಕಾಡಿನ ಉತ್ಪನ್ನಗಳಲ್ಲಿ ಒಂದಾದ ಉಪ್ಪಾಗೆ ಮಳೆಗಾಲದ ಆರಂಭದಲ್ಲಿ ಹುಳಿ ಹಣ್ಣು ಬಿಡುತ್ತದೆ. ಆಸಕ್ತರು ಕಾಡು ಅರಸಿ, ಉಪ್ಪಾಗೆ ಹಣ್ಣು ಹೆಕ್ಕುತ್ತಾರೆ. ಮರದ ಬುಡದಲ್ಲಿ ಹಣ್ಣಿನ ಓಡು ಒಡೆದು ಅದರೊಳಗಿನ ಕಿತ್ತಳೆ ಸೊಳೆಗಳಂತಿರುವ ಅಂಟು ಅಂಟಾದ ಬೀಜಗಳನ್ನು ಸಂಗ್ರಹಿಸುತ್ತಾರೆ. ಮನೆಗೆ ತಂದ ಬೀಜವನ್ನು ಬೂದಿಯಲ್ಲಿ ಕಲೆಸಿ ಅಂಗಳದಲ್ಲಿ ಪುಟ್ಟದೊಂದು ಗುಡ್ಡೆ ಮಾಡಿ ಇಡುತ್ತಾರೆ. ಬಿಸಿಲು – ಮಳೆಯಲ್ಲಿ ತೋಯ್ದು ಬೀಜಗಳ ಗುಡ್ಡೆಯನ್ನು ಬೇಸಿಗೆ ಬಂದಾಗ ಒಡೆದು ಬಿಸಿಲಲ್ಲಿ ಒಣಗಿಸುತ್ತಾರೆ. ಒಣಗಿದ ಬೀಜಗಳ ಗಟ್ಟಿ ಇರುವ ಮೇಲ್ಪದರ ಬಿಡಿಸಿದಾಗ ನಸುಗೆಂಪು ಬಣ್ಣದ ಹುಂಗು (ತಿರುಳು) ಸಿಗುತ್ತದೆ.

ತುಪ್ಪ ತಯಾರಿಸುವ ಸಾಂಪ್ರದಾಯಿಕ ಪದ್ಧತಿ

ಉಪ್ಪಾಗೆ ಹುಂಗನ್ನು ಹುರಿದು, ಒರಳಿನಲ್ಲಿ ರುಬ್ಬಿ ತೆಗೆದ ಮಡ್ಡಿಗೆ ನೀರು ಸೇರಿಸಿ ಕದಡಿ, ಒಲೆಯ ಮೇಲಿಟ್ಟು ಕುದಿಸುತ್ತಾರೆ. ಮಿಶ್ರಣ ಕುದ್ದಂತೆ ಕೊಬ್ಬಿನ ಅಂಶ (ತುಪ್ಪ) ಮೇಲಕ್ಕೆ ಬರುತ್ತದೆ. ಎಣ್ಣೆ ಮೇಲಕ್ಕೆ ಬಂದಂತೆಲ್ಲ ಸಣ್ಣ ಹುಟ್ಟಿನಿಂದ ತೆಗೆದು ಬೇರೊಂದು ಪಾತ್ರೆಗೆ ತುಂಬುತ್ತಾರೆ. ಮತ್ತೊಮ್ಮೆ ಕಾಸಿ ಶುಭ್ರವಾದ ಬಟ್ಟೆಯಲ್ಲಿ ಸೋಸಿ ಕಾಜಿನ ಭರಣಿಗಳಲ್ಲಿ ತುಂಬಿ ಇಡುತ್ತಾರೆ. ಹೀಗೆ ತಯಾರಿಸಲಾದ ಹಳದಿ ಬಣ್ಣದ ವನಸ್ಪತಿ ತುಪ್ಪ ಮರಳು ಮರಳಾಗಿ ಹೆಪ್ಪುಗಟ್ಟುತ್ತದೆ. ವರ್ಷಗಟ್ಟಲೆ ಇಟ್ಟರೂ ಕೆಡದ ತುಪ್ಪ ಇದಾಗಿದ್ದು ದೋಸೆ, ರೊಟ್ಟಿ ವಿಶೇಷವಾಗಿ ಕಾಯಿ ಹೋಳಿಗೆ ಜೊತೆಯಲ್ಲಿ ತಿನ್ನಲು ತುಂಬಾ ರುಚಿಯಾಗಿರುತ್ತದೆ.

ಇತ್ತೀಚೆಗೆ ಬೀಜವನ್ನು ಯಂತ್ರದಲ್ಲಿ ರುಬ್ಬಿ, ಮಡ್ಡನ್ನು ಕಾಯಿಸಿ ತುಪ್ಪ ತೆಗೆಯಲು ಪ್ರಾರಂಭಿಸಿದ್ದರೂ ಸಾಂಪ್ರದಾಯಿಕ ತಯಾರಿಕೆಗೆ ಒಲವು ಹೆಚ್ಚಿದೆ.

UASB Library

ಕೃಷಿ ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ
ಗ್ರಾ.ಕೃ.ವಿ.ಕೇ., ಬೆಂಗ
30 JUL
ಅನುಪೃದ್ದಿ ನಂ.

ಸುಧಾ
06 ಆಗಸ್ಟ್ 2026 ಬೆಲೆ: ₹ 25

U.A.S. UNIVERSITY LIBRARY
BANGALORE
560 065
G.K.V.K. CAMPUS

ಮಗಳಿಗೂ ಆಸ್ತಿ ಹಕ್ಕು

ಧಾರಾಳಿಯಾಗಲಿ ಸಮಾಜವೆಲ್ಲ

- ಸುರಪುರದ ಅರಸರು
- ಮಳೆಗಾಲದಲ್ಲಿ ಮೂತ್ರದ ಸೋಂಕು ಹೆಚ್ಚೇಕೆ?



UASBLibrary



ತಿಂದಷ್ಟೂ ರುಚಿ ಹತ್ತಿಸುವ ಕೊಡಗಿನ ಕಿತ್ತಳೆ

ಕಿತ್ತಳೆ ಎಂದರೆ ಕೊಡಗಿನ ಕಿತ್ತಳೆ ಎಂಬ ಮಾತಿದೆ. ಕೂರ್ಗ್ ಮ್ಯಾಂಡರಿನ್ ಕರ್ನಾಟಕದ ಹೆಮ್ಮೆಯ ಬೆಳೆಯಾಗಿದ್ದು, ತನ್ನದೇ ಆದ ವಿಶಿಷ್ಟ ರುಚಿ ಮತ್ತು ಸುವಾಸನೆಗೆ ಮನೆಮಾತಾಗಿದೆ. ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಾಫಿತೋಟಗಳ ನಡುವೆ ಬೆಳೆಯುವ ಈ ಬೆಳೆಯ ಕುರಿತು ಸಮಗ್ರ ಮಾಹಿತಿ ಇಲ್ಲಿದೆ.



ಸಿ.ಎಸ್. ಸುರೇಶ್

ಕೊಡಗು ಎಂದರೆ ಥಟ್ಟನೆ ನೆನಪಾಗುವುದು ಕಾಫಿ, ಕಿತ್ತಳೆ ಮತ್ತು ಜೇನು. 'ನಂಜನಗೂಡಿನ ರಸಬಾಳೆ, ತಂದಿಹೆ ಕೊಡಗಿನ ಕಿತ್ತಳೆ ..' ಎಂಬ ಕವಿಯ ಸಾಲು ಕಿತ್ತಳೆಯ ಘಮವನ್ನು ಸೂಸುತ್ತದೆ. ಹಾಗೆಯೇ ಕೊಡಗಿನತ್ತ ಹೆಜ್ಜೆ ಹಾಕುವ ಪ್ರವಾಸಿಗರನ್ನು ರಸ್ತೆ ಬದಿಗಳಲ್ಲಿ ಆಕರ್ಷಿಸುವುದು ರಂಗುರಂಗಿನ ಕಿತ್ತಳೆ. ಕೊಡಗಿನ ಕಿತ್ತಳೆ (ಕೂರ್ಗ್ ಮ್ಯಾಂಡರಿನ್) ಕರ್ನಾಟಕದ ಹೆಮ್ಮೆಯ ಬೆಳೆಯಾಗಿದ್ದು, ತನ್ನದೇ ಆದ ವಿಶಿಷ್ಟ ರುಚಿ ಮತ್ತು ಸುವಾಸನೆಗೆ ಮನೆಮಾತಾಗಿದೆ. ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಾಫಿತೋಟಗಳ ನಡುವೆ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಅತ್ಯುತ್ತಮ ಗುಣಮಟ್ಟಕ್ಕಾಗಿ ಇದಕ್ಕೆ 2006ರಲ್ಲಿ ಭೌಗೋಳಿಕ ಸೂಚ್ಯಂಕ (ಜಿಐ) ಸ್ಥಾನಮಾನ ದೊರೆತಿದೆ.

ಕುಶಾಲನಗರದಿಂದ ಮಡಿಕೇರಿಯತ್ತ ಸಾಗುವಾಗ ರಸ್ತೆ ಬದಿಗಳಲ್ಲಿ ಕಿತ್ತಳೆ ರಾಶಿ, ರಾಶಿ ಮಾರಾಟಕ್ಕೆ ಇಡಲಾಗಿದೆ. ಆದರೆ ಇವು ಕೊಡಗಿನ ಕಿತ್ತಳೆಯಲ್ಲ! ನಾಗಪುರದ ಕಿತ್ತಳೆ. ಇವುಗಳ ಪಕ್ಕದಲ್ಲೇ ನೀವು ಇಷ್ಟಪಡುವ ಕೊಡಗಿನ ಕಿತ್ತಳೆಗಳೂ ಇರುತ್ತವೆ. ಅರೆ ಇದೇನು? ಕೊಡಗಿನಲ್ಲಿ ನಾಗಪುರ ಕಿತ್ತಳೆ ದರ್ಬಾರು ಎನ್ನಿಸಬಹುದು. ಒಂದು ಕಾಲದಲ್ಲಿ ಕೊಡಗಿನ ಕಿತ್ತಳೆ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದಿತ್ತು. ಆದರೆ ಗ್ರೀನಿಂಗ್ ರೋಗದಿಂದ ಅದು ವಿನಾಶದ ಅಂಚು ತಲುಪಿತು. ಹೀಗಾಗಿ ಆ ಜಾಗವನ್ನು ಸದ್ಯ ನಾಗಪುರ ಕಿತ್ತಳೆ ಆಕ್ರಮಿಸಿಕೊಂಡಿದೆ.

ಇದೀಗ ಕೊಡಗಿನ ಕಿತ್ತಳೆ ಮತ್ತೆ ಚಿಗುರೊಡೆಯುತ್ತಿದೆ. ನಾಗಪುರದ ಕಿತ್ತಳೆಗೆ ಹೊಳಪಿನ ಬಣ್ಣವಿದೆ. ಇವು ರೂಪ ಮತ್ತು ಬಣ್ಣಗಳಲ್ಲಿ ಕೊಡಗಿನ ಕಿತ್ತಳೆಗಿಂತ ವಿಶಿಷ್ಟ. ಆದರೆ ಕೊಡಗಿನ ಕಿತ್ತಳೆಯ ಸ್ವಾದಕ್ಕೆ ನಾಗಪುರ ಕಿತ್ತಳೆ ಸಾಟಿಯಲ್ಲ. ಕೊಡಗಿನ ಕಿತ್ತಳೆ ಹಣ್ಣಿನ ಸೊಗಡು ಮತ್ತು ಬಾಳಿಕೆ ನಾಗಪುರ ಕಿತ್ತಳೆಯನ್ನು ಮೀರಿಸುವಂತದ್ದು. ರುಚಿ ಹಾಗೂ ಪರಿಮಳಕ್ಕೆ ಹೆಸರುವಾಸಿಯಾಗಿದ್ದ ಕೊಡಗಿನ ಕಿತ್ತಳೆಯನ್ನು ಮುಷ್ಟಿಯಲ್ಲಿ ಹಿಡಿಯಬೇಕಾದರೆ ಎರಡೂ ಕೈ ಸೇರಬೇಕಿತ್ತು. ಇಂತಹ ಸ್ವಾದಿಷ್ಟ ಕಿತ್ತಳೆ ಕೊಡಗಿನ ಹೆಸರಿಗೆ ಮೆರುಗು ನೀಡುತ್ತಿದ್ದ ದಿನಗಳಿದ್ದವು.

ಎರಡು ಬೆಳೆ

ಕಿತ್ತಳೆಯಲ್ಲಿ ಎರಡು ಸಾರಿ ಹಣ್ಣಿನ ಹಂಗಾಮು ಕಂಡುಬರುತ್ತದೆ. ಮಳೆಗಾಲದ

KASB Library

ಮಳೆಗಾಲದಲ್ಲಿ ಸೋಂಕು ಯಾಕೆ ಹೆಚ್ಚು?

ತೇವಾಂಶವುಳ್ಳ ವಾತಾವರಣ ಬ್ಯಾಕ್ಟೀರಿಯಾ (ವಿಶೇಷವಾಗಿ ಇ. ಕೊಲಿ) ಮೂತ್ರನಾಳದ ಒಳ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ. ಮಳೆಗಾಲದಲ್ಲಿ ಒದ್ದೆಯಾದ ಬಟ್ಟೆಗಳು ಮತ್ತು ಒಳ ಉಡುಪುಗಳನ್ನು ಬಳಸುವ ಸಾಧ್ಯತೆ ಇರುತ್ತದೆ. ಮಳೆಯಲ್ಲಿ ನೆನೆಯುವುದು, ಸರಿಯಾಗಿ ಬಟ್ಟೆ ಒಣಗದಿರುವುದನ್ನು ನಾವು ನಿರ್ಲಕ್ಷಿಸುತ್ತೇವೆ. ಒದ್ದೆಯಾದ ಬಟ್ಟೆಗಳು, ವಿಶೇಷವಾಗಿ ಸಿಂಥೆಟಿಕ್ ಒಳ ಉಡುಪುಗಳು ಬ್ಯಾಕ್ಟೀರಿಯಾ ಮತ್ತು ಯೀಸ್ಟ್‌ಗೆ ಸಂತಾನೋತ್ಪತ್ತಿಯ ಸ್ಥಳ ಒದಗಿಸುತ್ತವೆ.



ಮಳೆಗಾಲದಲ್ಲಿ ಎಲ್ಲ ಕಡೆ ಕೊಳಕು, ಕೊಳಚೆ ನೀರು ಹರಿಯುವುದು ಸಾಮಾನ್ಯ. ಊರಿನ ಕೊಳೆಯೆಲ್ಲ ಮಳೆ ನೀರಿನಲ್ಲಿ ಕೊಚ್ಚಿಕೊಂಡು ಬರುತ್ತದೆ. ಕೊಳಕು ಅಥವಾ ಮಾಲಿನ್ಯಕಾರಕಗಳೊಂದಿಗೆ ಬೆರೆತ ಮಳೆನೀರಿನೊಂದಿಗೆ ಸಂಪರ್ಕ ಚರ್ಮ ಮತ್ತು ಮೂತ್ರನಾಳದ ಕಿರಿಕಿರಿ ಉಂಟುಮಾಡಬಹುದು.

ತಂಪಾದ ವಾತಾವರಣದಲ್ಲಿ ನೀರನ್ನು ಕಡಿಮೆ ಕುಡಿಯುತ್ತೇವೆ. ಇದು ಮೂತ್ರ ವಿಸರ್ಜನೆಯ ಆವರ್ತನವನ್ನು ಕಡಿಮೆ ಮಾಡುತ್ತದೆ ಮತ್ತು ಬ್ಯಾಕ್ಟೀರಿಯಾಗಳು ಸಂಗ್ರಹಗೊಳ್ಳಲು ಅನುವು ಮಾಡಿಕೊಡುತ್ತದೆ. ಹೆಚ್ಚು ನೀರು ಸೇವಿಸುವುದು ದೇಹದಲ್ಲಿನ ಕೊಳೆಯನ್ನು, ಬೇಡದ ಅಂಶಗಳನ್ನು ಮೂತ್ರದ ಮೂಲಕ ಹೊರಹಾಕುತ್ತದೆ. ನೀರನ್ನೇ ಕುಡಿಯದಿದ್ದರೆ ಆ ಕೊಳೆ ದೇಹದಲ್ಲಿಯೇ ಉಳಿದು ಬ್ಯಾಕ್ಟಿರಿಯಾ ಬೆಳವಣಿಗೆಗೆ ಜಾಗ ಮಾಡಿಕೊಡುತ್ತದೆ. ಮಾನ್ಸೂನ್ ಪ್ರವಾಸಗಳು ಮತ್ತು ಪ್ರಯಾಣಗಳ ಸಂದರ್ಭದಲ್ಲಿ ಸ್ವಚ್ಛವಾಗಿರದ ಸಾರ್ವಜನಿಕ ಶೌಚಾಲಯಗಳ ಬಳಕೆಯು ಸೋಂಕಿನ ಅಪಾಯದ ಹೆಚ್ಚಳಕ್ಕೆ ಕಾರಣವಾಗಿದೆ.

VISL Library

ಗಾಳಿಯಾಡುವ ಹತ್ತಿಯ ಒಳ ಉಡುಪುಗಳನ್ನು ಬಳಸಿ. ಬ್ಯಾಕ್ಟೀರಿಯಾವನ್ನು ಹೊರಹಾಕಲು ಪ್ರತಿದಿನ ಕನಿಷ್ಠ 2–3 ಲೀಟರ್ ನೀರನ್ನು ಕುಡಿಯಿರಿ.

ಸ್ನಾನದ ಬಳಿಕ ಜನನಾಂಗಗಳನ್ನು ಸರಿಯಾಗಿ ಒರೆಸಿ. ಮೂತ್ರ ವಿಸರ್ಜನೆ ಬಳಿಕ ಸ್ವಚ್ಛಗೊಳಿಸಿ. ಈ ಭಾಗದಲ್ಲಿ ಗಡುಸಾದ ಸಾಬೂನು ಅಥವಾ ಪರಿಮಳಯುಕ್ತ ಉತ್ಪನ್ನಗಳ ಬಳಕೆ ತಪ್ಪಿಸಿ. ಸಂಭೋಗದ ನಂತರ ಮೂತ್ರ ವಿಸರ್ಜಿಸಿ. ಇದು ಮೂತ್ರನಾಳಕ್ಕೆ ಪ್ರವೇಶಿಸಿರಬಹುದಾದ ಯಾವುದೇ ಬ್ಯಾಕ್ಟೀರಿಯಾವನ್ನು ಹೊರಹಾಕಲು ಸಹಾಯ ಮಾಡುತ್ತದೆ. ಬ್ಯಾಕ್ಟೀರಿಯಾದ ಸಂಗ್ರಹವನ್ನು ತಡೆಗಟ್ಟಲು ನಿಮ್ಮ ಮೂತ್ರಕೋಶವನ್ನು ಆಗಾಗ್ಗೆ ಖಾಲಿ ಮಾಡಿ. ಮಳೆಗಾಲದಲ್ಲಿ ಮೂತ್ರ ಹಿಡಿದುಟ್ಟುಕೊಳ್ಳುವುದನ್ನು ಸಾಧ್ಯವಾದಷ್ಟು ತಪ್ಪಿಸಿ. ಮೂತ್ರದ ಸೋಂಕನ್ನು ನಿರ್ಲಕ್ಷಿಸುವುದು ಗಂಭೀರವಾದ ಸಮಸ್ಯೆಗೆ ಕಾರಣವಾಗಬಹುದು.

ಕೆಲವೊಮ್ಮೆ ಆಹಾರದಲ್ಲಿನ ವ್ಯತ್ಯಾಸ ಕೂಡ ಸೋಂಕಿಗೆ ಕಾರಣವಾಗಬಹುದು.

ಮಧುಮೇಹ ಮತ್ತು ಮೂತ್ರನಾಳದ ಸೋಂಕು

ಭಾರತವು ಮಧುಮೇಹದ ವಿಶ್ವ ರಾಜಧಾನಿಯಾಗಿ ಹೊರಹೊಮ್ಮುತ್ತಿರುವುದರಿಂದ, ಮೂತ್ರನಾಳ ಸೋಂಕು ಮತ್ತು ಯುರೋಸೆಪ್ಸಿಸ್ (ಚಿಕಿತ್ಸೆ ನೀಡದಿದ್ದರೆ ಸಾವಿನ ಹೊಸ್ತಿಲಿಗೆ ತೆಗೆದುಕೊಂಡು ಹೋಗುವ ಕಾಯಿಲೆ) ಸಮಸ್ಯೆಗಳು ಹೆಚ್ಚಾಗುತ್ತಿವೆ. ಐಸಿಯುಗೆ ದಾಖಲಾಗುವ ಸುಮಾರು ಶೇಕಡ 10–12ರಷ್ಟು ಮಂದಿ ಯುರೋಸೆಪ್ಸಿಸ್ ಸಮಸ್ಯೆಗೆ ಒಳಗಾಗಿರುತ್ತಾರೆ. ಮಧುಮೇಹವು 20 ವರ್ಷಗಳಿಗಿಂತ ಹೆಚ್ಚು ಇದ್ದರೆ, ಅವರಲ್ಲಿ ಸುಮಾರು ಶೇಕಡ 69ರಷ್ಟು ಮಂದಿ ತಮ್ಮ ಜೀವಿತಾವಧಿಯಲ್ಲಿ ಯುರೋಸೆಪ್ಸಿಸ್‌ನಿಂದ ಬಳಲುತ್ತಾರೆ ಮತ್ತು ಪುನರಾವರ್ತಿತ ಹೊಟ್ಟೆ ನೋವು ಕಾಣಿಸಿಕೊಂಡರೆ ಆ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ಮೂತ್ರನಾಳಗಳಿಗೆ ಸ್ಟಂಟ್ ಹಾಕುವುದು ಮತ್ತು ಮೂತ್ರಪಿಂಡಗಳಿಂದ ಸತ್ತ ಅಂಗಾಂಶವನ್ನು ತೆಗೆದುಹಾಕುವಂತಹ ನವೀನ ಚಿಕಿತ್ಸೆಗಳು ಆರಂಭಿಕ ಮೂತ್ರಪಿಂಡದ ಹಾನಿಯನ್ನು ತಡೆಗಟ್ಟುತ್ತವೆ. ಮೂತ್ರಪಿಂಡದ ಸಮಸ್ಯೆಯ ಆರಂಭಿಕ ಗುರುತಿಸುವಿಕೆ ಮತ್ತು ಚಿಕಿತ್ಸೆಯು ದೀರ್ಘಕಾಲದ ಸಮಸ್ಯೆಯನ್ನು ತಡೆಯುತ್ತದೆ ಮತ್ತು ಶಾಶ್ವತ ಮೂತ್ರಪಿಂಡ ವೈಫಲ್ಯವನ್ನು ತಡೆಯಲು ಸಹಾಯ ಮಾಡುತ್ತದೆ.

ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಲ್ಲಿ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯಿರಿ. ವಿಶೇಷವಾಗಿ ಮಳೆಗಾಲದಲ್ಲಿ ಸೋಂಕು ತ್ವರಿತವಾಗಿ ಉಲ್ಬಣಗೊಳ್ಳುತ್ತದೆ ಎಂಬುದನ್ನು ಮರೆಯಬೇಡಿ.

ಮೂತ್ರನಾಳದ ಸೋಂಕಿಗೆ ತುತ್ತಾಗುತ್ತಾರೆ. ಪ್ರಾಸ್ಟೇಟ್ ಸಂಬಂಧಿತ ಸಮಸ್ಯೆಗಳಿಂದಾಗಿ 50 ವರ್ಷಕ್ಕಿಂತ ಮೇಲ್ಪಟ್ಟ ಪುರುಷರಲ್ಲಿ ಈ ಸೋಂಕಿನ ಪ್ರಮಾಣ ಅಧಿಕವಾಗಿರುತ್ತದೆ. ನೊಸೊಕೊಮಿಯಲ್ (ಆಸ್ಪತ್ರೆಯ ಅಮ್ಮವಸ್ಥೆಯಿಂದ ಹರಡುವ ಸೋಂಕುಗಳು) ಮೂತ್ರನಾಳದ ಸೋಂಕಿನ ಪ್ರಮಾಣ ಶೇಕಡ 20 ರಿಂದ 30ರಷ್ಟಿದೆ ಎನ್ನುತ್ತವೆ ಅಧ್ಯಯನ ವರದಿಗಳು.

ತೇವ ಮತ್ತು ಸ್ವಚ್ಛತೆಯ ಕಾರಣದಿಂದ ಮಳೆಗಾಲದಲ್ಲಿ ಮೂತ್ರ, ಮೂತ್ರ ನಾಳದ ಸೋಂಕು ಸರ್ವೇ ಸಾಮಾನ್ಯ ಎಂಬಂತಾಗಿದೆ. ಇ—ಕೊಲಿ ಎಂಬ ಬ್ಯಾಕ್ಟಿರಿಯಾದಿಂದ ಈ ಕಾಯಿಲೆ ಕಾಣಿಸಿಕೊಳ್ಳುತ್ತಿದ್ದು, ಶೇಕಡ 50ರಿಂದ80ರಷ್ಟು ಸೋಂಕಿನ ಪ್ರಕರಣಗಳಿಗೆ ಇದೇ ಪ್ರಮುಖ ಕಾರಣ. ಸುಮಾರು ಶೇಕಡ 25—30 ಮಹಿಳೆಯರಲ್ಲಿ ಮೂತ್ರ/ಮೂತ್ರನಾಳದ ಸೋಂಕು ಪುನರಾವರ್ತನೆಗೊಳ್ಳುತ್ತದೆ (6 ತಿಂಗಳಲ್ಲಿ 2ಕ್ಕಿಂತ ಹೆಚ್ಚು ಸಲ ಅಥವಾ ಒಂದು ವರ್ಷದಲ್ಲಿ 3 ಸಲ). ಪ್ರತಿಜೀವಕ (ಸೋಂಕುಗಳನ್ನು ನಿವಾರಿಸಲು ಬಳಸುವ ಔಷಧ) ದುರುಪಯೋಗದಿಂದ ಇ—ಕೊಲಿ ಮತ್ತು ಕ್ಲೆಬ್ಸಿಯೆಲ್ಲಾ (Klebsiella) ದಂಥ ಬ್ಯಾಕ್ಟಿರಿಯಾಗಳು ಉತ್ಪತ್ತಿಯಾಗುತ್ತವೆ.

ಮಹಿಳೆಯರಲ್ಲಿ ಈ ಸಮಸ್ಯೆಗೆ ಕಾರಣಗಳು

ಮಹಿಳೆಯರ ದೇಹ ರಚನೆಯಲ್ಲಿ ಬಾಹ್ಯ ಜನನಾಂಗಗಳು ಪರಸ್ಪರ ಹತ್ತಿರದಲ್ಲಿವೆ. ಹೀಗಾಗಿ ಗುದನಾಳದಿಂದ ಯೋನಿಯವರೆಗೆ ಮತ್ತು ಸುತ್ತಮುತ್ತಲಿನ ಚರ್ಮದಿಂದ ಮೂತ್ರನಾಳದವರೆಗೆ ಸೋಂಕಿನ ಹರಡುವಿಕೆ ತುಂಬಾ ಸಾಮಾನ್ಯವಾಗಿದೆ. ಮಹಿಳೆಯರ ಚರ್ಮ ಮತ್ತು ಕರುಳಿನಲ್ಲಿ ಇ ಕೋಲಿ ವಾಸಿಸುವುದು ಕೂಡ ಪ್ರಮುಖ ಕಾರಣ. ಪ್ರತಿಜೀವಕಗಳನ್ನು ಅನುಚಿತವಾಗಿ ಬಳಸಿ ಅವುಗಳನ್ನು ನಾಶಪಡಿಸುವುದರಿಂದ ಪ್ರತಿಜೀವಕಗಳ ಪ್ರತಿರೋಧ ಉಂಟಾಗುತ್ತದೆ.

ರೋಗ ಲಕ್ಷಣಗಳು

- ಮೂತ್ರ ವಿಸರ್ಜನೆಯ ಸಮಯದಲ್ಲಿ ಉರಿ ಅಥವಾ ನೋವು
- ಅನೇಕ ಬಾರಿ ಮೂತ್ರ ವಿಸರ್ಜಿಸಲು ಪ್ರಚೋದನೆ
- ಮಂಜಾದ ಅಥವಾ ದುರ್ವಾಸನೆಯಿಂದ ಕೂಡಿದ ಮೂತ್ರ
- ಹೊಟ್ಟೆಯ ಕೆಳಭಾಗ ಅಥವಾ ಶ್ರೋಣಿಯ ಭಾಗದಲ್ಲಿ ನೋವು
- ಜ್ವರ
- ಮೂತ್ರದಲ್ಲಿ ರಕ್ತ

ತಡೆಗಟ್ಟುವ ಮಾರ್ಗಗಳು

ಗುಪ್ತಾಂಗಗಳನ್ನು ಸ್ವಚ್ಛವಾಗಿ ಮತ್ತು ಶುಷ್ಕವಾಗಿಟ್ಟುಕೊಳ್ಳುವುದು ಬಹಳ ಮುಖ್ಯ. ಒದ್ದೆಯಾದ ಬಟ್ಟೆಗಳನ್ನು ಬೇಗನೆ ಬದಲಾಯಿಸಿ.

UASB Library



ಮಳೆಗಾಲದಲ್ಲಿ ಮೂತ್ರದ ಸೋಂಕು ಹೆಚ್ಚೇಕೆ?

ಮಳೆಗಾಲದಲ್ಲಿ ಮೂತ್ರ ಸಂಬಂಧಿ ಸೋಂಕುಗಳು ಸಾಮಾನ್ಯ. ವಿಶೇಷವಾಗಿ ಮಹಿಳೆಯರಲ್ಲಿ ಸೋಂಕು ಜಾಸ್ತಿ. ಇದಕ್ಕೆ ಕಾರಣವೇನು? ರೋಗದ ಲಕ್ಷಣಗಳೇನು? ಯಾವೆಲ್ಲ ಮುಂಜಾಗ್ರತೆ ವಹಿಸಬೇಕು ಎಂಬಿತ್ಯಾದಿ ಮಾಹಿತಿ ನೀಡುವ ಲೇಖನ.

■ ಡಾ. ಟಿ. ಮನೋಹರ್

UASD Library
UNIVERSITY LIBRARY
BANGALORE
560 065
CAMPUS



ಮೂತ್ರನಾಳದ ಸೋಂಕು ಅಥವಾ ಯೂರಿನರಿ ಇನ್‌ಫೆಕ್ಷನ್ ಅತ್ಯಂತ ಸಾಮಾನ್ಯವಾಗಿ ಕಂಡುಬರುವ ಕಾಯಿಲೆ. ಪ್ರತಿ ವ್ಯಕ್ತಿಯೂ ವರ್ಷದಲ್ಲಿ ಒಂದೆರಡು ಸಲ ಬೇರೆ ಬೇರೆ ಕಾರಣಗಳಿಂದಾಗಿ ಈ ಸಮಸ್ಯೆಗೆ ತುತ್ತಾಗುತ್ತಾನೆ. ದೇಹ ರಚನೆಯ ಸ್ವರೂಪದಿಂದಾಗಿ ಪುರುಷರಿಗಿಂತ ಮಹಿಳೆಯರಲ್ಲಿ ಈ ಸಮಸ್ಯೆ ತುಸು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ವಿಶೇಷವಾಗಿ, ಮಧುಮೇಹ ಇರುವವರಲ್ಲಿ ಇದು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಭಾರತದಲ್ಲಿ ವಾರ್ಷಿಕವಾಗಿ 1 ಸಾವಿರ ವ್ಯಕ್ತಿಗಳಲ್ಲಿ ಸುಮಾರು 150 ರಿಂದ 200 ಮಂದಿ ಈ ಸೋಂಕಿಗೆ ಒಳಗಾಗುತ್ತಿದ್ದಾರೆ. ಮಹಿಳೆಯರಲ್ಲಿ ಸೋಂಕಿನ ಪ್ರಮಾಣ ಹೆಚ್ಚಿದ್ದು, ಶೇಕಡ 50 ರಿಂದ 60ರಷ್ಟು ಮಹಿಳೆಯರು ತಮ್ಮ ಜೀವಿತಾವಧಿಯಲ್ಲಿ ಕನಿಷ್ಠ ಒಂದು ಬಾರಿಯಾದರೂ

U.A.S. UNIVERSITY LIBRARY
BANGALORE
560 065
G.K.V.K. CAMPUS

ವಿಶೇಷ ಭಕ್ಷ್ಯ ಸಜ್ಜಪ್ಪ



ವೈದಿಕ ಅಥವಾ ತಿಥಿ ಅಡುಗೆಯಲ್ಲಿ ಮಾಡುವಂಥ ವಿಶೇಷ ಭಕ್ಷ್ಯದ ಹೆಸರು 'ಸಜ್ಜಪ್ಪ'. 'ಸಜ್ಜಕ' ಅಂದರೆ 'ರವೆ'. ರವೆಯಿಂದ ಮಾಡುವ ಶಿರಾಕ್ಕೆ 'ಸಜ್ಜಿಗೆ' ಎನ್ನುತ್ತಾರೆ. ರವೆಯಿಂದ ಮಾಡುವ ಸಜ್ಜಿಗೆ ಹೋಳಿಗೆಯೂ ಇದೆ. ಹಾಗೆಯೇ ಸಜ್ಜಕದಿಂದ, ಅಂದರೆ ರವೆಯಿಂದ ಮಾಡುವ ಅಪ್ಪ ಈ 'ಸಜ್ಜಪ್ಪ'.

■ ಸೀತಾ ಎಸ್. ನಾರಾಯಣ

'ಸಜ್ಜಪ್ಪ' ಎಂಬ ಈ ವಿಶೇಷ ಭಕ್ಷ್ಯವನ್ನು ನಾನು ಮೊದಲು ತಿಂದದ್ದು ನನ್ನ ಮದುವೆಯ ನಂತರ, ನನ್ನ ಅತ್ತೆಯ ಮನೆಯಲ್ಲಿ. ಅತ್ತೆ ಇದನ್ನು ತುಂಬಾ ಚೆನ್ನಾಗಿ ಮಾಡುತ್ತಿದ್ದರು. ನಾನು ಅವರಿಂದ ಸಜ್ಜಪ್ಪ ಮಾಡುವುದನ್ನು ಕಲಿತೆ.

ವಿಶೇಷ ಸಂದರ್ಭಗಳಲ್ಲಿ ಮಾಡುವ ಸಿಹಿ ತಿಂಡಿಗೆ 'ಭಕ್ಷ್ಯಂ' ಎನ್ನಲಾಗುತ್ತದೆ. ಈ ಭಕ್ಷ್ಯದ ಹೆಸರು 'ಸಜ್ಜಪ್ಪ'. ವೈದಿಕ ಅಥವಾ ತಿಥಿ ಅಡುಗೆಯಲ್ಲಿ ಮಾಡುವಂಥ ವಿಶೇಷ ಭಕ್ಷ್ಯವಿದು. ಶುಭ ದಿನಗಳಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ ಈ ಭಕ್ಷ್ಯವನ್ನು ಮಾಡಬಾರದೆಂಬ ಕಟ್ಟಳೆಯಿದೆ. ಹಾಗೆ ಮಾಡುವುದಾದರೆ ಕಣಕಕ್ಕೆ ಸ್ವಲ್ಪ ಅರಿಶಿನ ಸೇರಿಸಿ ಮಾಡಬಹುದೆಂಬ ರಿಯಾಯಿತಿಯೂ ಇದೆ.

ಕೆಲವು ಕಡೆ ಗೋಕುಲಾಷ್ಟಮಿ, ದೀಪಾವಳಿಯಲ್ಲಿಯೂ ಮಾಡುತ್ತಾರೆ. ಹರಿಹರದಲ್ಲಿ ನಮ್ಮ ಕುಟುಂಬದ ಸ್ನೇಹಿತರಾದ ಅಯ್ಯಂಗಾರ್ ಮನೆಯಲ್ಲಿ ಗೋಕುಲಾಷ್ಟಮಿಗೆ ಮಾಡುತ್ತಿದ್ದ ಹಲವಾರು ಸಿಹಿಗಳಲ್ಲಿ ಈ ಸಿಹಿಯೂ ಒಂದು. ಬೆಂಗಳೂರು, ಮೈಸೂರುಗಳ ಕೆಲವು ತಿಂಡಿ ಅಂಗಡಿಗಳಲ್ಲಿ ಸಜ್ಜಪ್ಪ ಸಿಗುತ್ತದೆ.

'ಸಜ್ಜಪ್ಪ' ಎನ್ನುವ ಹೆಸರು ಸಜ್ಜಕ ಎಂಬ ಪದದಿಂದ ಬಂದಿದೆ. ಸಜ್ಜಕ ಅಂದರೆ 'ರವೆ'. ರವೆಯಿಂದ ಮಾಡುವ ಶಿರಾಕ್ಕೆ 'ಸಜ್ಜಿಗೆ' ಎನ್ನುತ್ತಾರೆ. ರವೆಯಿಂದ ಮಾಡುವ ಸಜ್ಜಿಗೆ ಹೋಳಿಗೆಯೂ ಇದೆ. ಹಾಗೆಯೇ ಸಜ್ಜಕದಿಂದ, ಅಂದರೆ ರವೆಯಿಂದ ಮಾಡುವ ಅಪ್ಪ 'ಸಜ್ಜಪ್ಪ' (ಸಜ್ಜಕ– ರವೆ, ಶಿರಾ, ಕೇಸರಿಬಾತು).

ಸಜ್ಜಪ್ಪ ಮಾಡಲು ಅಗತ್ಯ ಸಾಮಗ್ರಿಗಳು

ಕಣಕಕ್ಕೆ: ಮೈದಾ ಒಂದು ಕಪ್, ಚಿರೋಟಿ ರವೆ ಅರ್ಧ ಕಪ್, ತುಪ್ಪ 2 ಟೀ ಚಮಚ, ಅರಿಶಿನ, ಉಪ್ಪು ಚಿಟಿಕೆ.
ಹೂರಣಕ್ಕೆ ಚಿರೋಟಿ ರವೆ, ಕಾಯಿತುರಿ, ಒಣಕೊಬ್ಬರಿ ತುರಿ ಮೂರೂ ಒಂದೊಂದು ಕಪ್. ಬೆಲ್ಲದ ಪುಡಿ ಮೂರು ಕಪ್. (ಬೇಕಿದ್ದಲ್ಲಿ ಏಲಕ್ಕಿ ಪುಡಿ ಸ್ವಲ್ಪ)



ಸವಿ ಕರ್ನಾಟಕ

ಕರ್ನಾಟಕದ ವಿವಿಧ ಭಾಗಗಳಿಂದ ವಿಶೇಷ ರುಚಿಗಳನ್ನು ಪರಿಚಯಿಸುವ ಅಂಕಣ. ಆ ಸವಿಯ ಹಿಂದಿನ ಪರಂಪರೆ, ಪರಿಚಯ ಮತ್ತು ವಿಧಾನಗಳಿರುವ ಮಾಹಿತಿಗುಚ್ಛ.

ಮಾಡುವ ವಿಧಾನ: ಮೈದಾ, ಚಿರೋಟಿ ರವೆ, ತುಪ್ಪ, ಅರಿಶಿನ, ಉಪ್ಪು ಎಲ್ಲವನ್ನೂ ಒಂದು ಪಾತ್ರೆಗೆ ಹಾಕಿ ಚೆನ್ನಾಗಿ ಬೆರೆಸಿ ನಂತರ ನೀರು ಹಾಕಿ ಚಪಾತಿ ಹಿಟ್ಟಿಗಿಂತ ಗಟ್ಟಿಯಾಗಿ ಕಲಸಿ, ಚೆನ್ನಾಗಿ ನಾದಿಕೊಳ್ಳಬೇಕು. ಒಂದೆರಡು ಗಂಟೆ ನೆನೆಯಲು ಬಿಟ್ಟು ಮತ್ತೊಮ್ಮೆ ನಾದಿ ಲಟ್ಟಣಿಗೆಯಿಂದ ಹಿಟ್ಟಿಗೆ ಬಡಿದು ಮೆತ್ತಗೆ ಹದ ಮಾಡಿಕೊಳ್ಳಬೇಕು. ಈಗ ಕಣಕ ತಯಾರಾಯಿತು.

ಒಲೆಯ ಮೇಲೆ ಬಾಣಲೆ ಇಟ್ಟು ರವೆ ಹಾಕಿ ಹುರಿದು, ನಂತರ ಕಾಯಿತುರಿ ಹಾಕಿ ಎರಡು ನಿಮಿಷ ಹುರಿದುಕೊಳ್ಳಿ. ನಂತರ ಕೊಬ್ಬರಿ ತುರಿ ಹಾಕಿ ಕೈಯಾಡಿಸಿ ಒಲೆ ಆರಿಸಿ, ಆರಲು ಬಿಡಿ. ಬೆಲ್ಲಕ್ಕೆ ಅರ್ಧ ಕಪ್ ನೀರು ಹಾಕಿ ಕುದಿಸಬೇಕು. ಎಳೆ ಪಾಕ ಬಂದಾಗ ಹುರಿದ ಮಿಶ್ರಣ ಹಾಕಿ, ಸೌಟು ಆರಿಸಿ ಚೆನ್ನಾಗಿ ಕೈಯಾಡಿಸಿದರೆ ಹೂರಣ ತಯಾರಾಯಿತು.

ಹೂರಣ ಆರಿದ ನಂತರ ಸಣ್ಣ ಸಣ್ಣ ಉಂಡೆ ಮಾಡಿಕೊಂಡು ತಕ್ಕಷ್ಟು ಕಣಕ ತೆಗೆದುಕೊಂಡು ಅಂಗೈಯಲ್ಲಿ ತಟ್ಟಿ, ಹೂರಣವಿಟ್ಟು ಸರಿಯಾಗಿ ಮುಚ್ಚಿ, ಬಾಳೆ ಎಲೆ ಅಥವಾ ಪ್ಲಾಸ್ಟಿಕ್ ಹಾಳೆ ಮೇಲೆ ಪೂರಿಯಂತೆ ತಟ್ಟಿ, ಕಾದ ಎಣ್ಣೆಗೆ ಹಾಕಿ ಬೇಯಿಸಿ ಮತ್ತೊಂದು ಕಡೆ ತಿರುಗಿಸಿ ಹಾಕಿ, ಉರಿ ಸಣ್ಣ ಮಾಡಿ ಹೊಂಬಣ್ಣ ಬರುವಂತೆ ಬೇಯಿಸಿ. ಗರಿಗರಿಯಾದ ರುಚಿಕರ 'ಸಜ್ಜಪ್ಪ' ಎಲ್ಲರ ಇಷ್ಟದ ಭಕ್ಷ್ಯವಾಗುತ್ತದೆ. ಇದನ್ನು ಒಂದು ವಾರದವರೆಗೂ ಇಟ್ಟು ತಿನ್ನಬಹುದು. ■

UAS Library

ಕ್ಯಾಲಾಥಿಯಾ

ಸಸ್ಯಲೋಕದ ಕಲಾಕೃತಿ

ಇತ್ತೀಚೆಗೆ ಸರಿಸ್ಯಪತಜ್ಞ, ಸ್ನೇಹಿತರೊಬ್ಬರು ಮನೆಗೆ ಬಂದಿದ್ದರು. ಮಳೆಗಾಲ ಶುರುವಾಗಿದ್ದೇ, ಕಪ್ಪೆ, ಹಾವುಗಳ ಚಲನವಲನಗಳನ್ನು ವೀಕ್ಷಿಸುತ್ತಾ ರಾತ್ರಿಯೆಲ್ಲಾ ಕಾಡಲ್ಲೇ ಕಳೆಯುವುದು ಅವರ ಅಭ್ಯಾಸ. ಅವರಿಗೆ ಸಸ್ಯಗಳೆಂದರೆ ಅಷ್ಟಕ್ಕಷ್ಟೆ. ಬೆಳಗಿನ ತಿಂಡಿಯ ಸಮಯ, 'ನಾನೊಂದು ಹಾವು ಸಾಕಿದ್ದೇನೆ, ನೋಡುತ್ತೀರಾ' ಎಂದು ಕೇಳಿದೆ. 'ಹೇ, ಹಾಗೆಲ್ಲ ಹಾವು ಸಾಕೋ ಹಾಗಿಲ್ಲ, ಎಲ್ಲಿದೆ ತೋರ್ಸಿ, ಯಾವ್ದು ನೋಡ್ವಾ'... ಅವರು ನಿದ್ದೆಗಣ್ಣನ್ನೇ ಅರಳಿಸಿ ಕೇಳಿದ್ದರು. ತಿಂಡಿ ಆಗಿದ್ದೇ ಸೀದಾ ಪಾಲಿಹೌಸಿಗೆ ಕರೆದೊಯ್ದು 'ರಾಟಲ್ ಸ್ನೇಕ್ ಕ್ಯಾಲಾಥಿಯಾ' ಗಿಡದ ಮುಂದೆ ಅವರನ್ನು ನಿಲ್ಲಿಸಿದ್ದೆ. ಒಂದು ಕ್ಷಣ ಮಂಗ ಆದೆ ಎಂದುಕೊಂಡರೂ ಎಲೆಗಳ ಮೇಲಿನ ವಿನ್ಯಾಸವನ್ನು ನೋಡಿ 'ಹೇ, ಹೌದಲ್ಲಾ, ಎಲೆಗಳ ಮೇಲೆ ರಾಟಲ್ ಸ್ನೇಕ್‌ನ ಮೈನಂತೆಯೇ ಚಿಬ್ಬು ಚಿಬ್ಬು ಚಿತ್ತಾರಗಳಿವೆ' ಎಂದು ವಿಸ್ಮಯಪಟ್ಟುಕೊಂಡರು. ಹಿಂದೆಯೇ 'ನನಗೊಂದು ಗಿಡ ಮಾಡಿಕೊಡಿ' ಎಂದಿದ್ದು ನನಗೆ ಆಶ್ಚರ್ಯ ಉಂಟುಮಾಡಿತ್ತು.

ದಕ್ಷಿಣ ಅಮೆರಿಕ ಮೂಲದ ಕ್ಯಾಲಾಥಿಯಾಗಳ ಚಂದವೇ ಅಂಥದ್ದು. ಇವುಗಳ ವಿವಿಧ ನಮೂನೆಯ ಎಲೆಗಳ ವಿನ್ಯಾಸಕ್ಕೆ ಮನಸೋಲದವರೇ ಇಲ್ಲವೇನೋ.

ಯಾರೋ ಕಲಾವಿದರು ಕುಂಚದಿಂದ ಬಣ್ಣ ಬಳಿದಂತೆ ಕಾಣುವ; ಬೆಳ್ಳಿ, ಗುಲಾಬಿ, ಬರ್ಗಂಡಿ, ಮೆಜೆಂಟಾ, ನೇರಳೆ ಬಣ್ಣಗಳ ಸಂಯೋಜನೆಯ ಎಲೆಗಳನ್ನು ಹೊಂದಿರುವ ಒಂದೊಂದು ಪ್ರಭೇದವೂ ಒಂದೊಂದು ಕಲಾಕೃತಿಯೇ ಸೈ. ಉಷ್ಣವಲಯದ ಮಳೆಕಾಡುಗಳ ಮೂಲನೆಲೆಯಲ್ಲಿ ನೆಲಮಟ್ಟದಲ್ಲಿ ಬೆಳೆಯುವ ಈ ಸಸ್ಯಗಳು ಕಡಿಮೆ ಬೆಳಕಿಗೆ ಹೊಂದಿಕೊಂಡ ಕಾರಣ ಒಳಾಂಗಣ ವಿನ್ಯಾಸದಲ್ಲೂ ಇವುಗಳದ್ದು ವಿಶೇಷ ಸ್ಥಾನ. ಕ್ಯಾಲಾಥಿಯಾಗಳ

ಕಲಾವಿದರು ಕುಂಚದಿಂದ ಬಣ್ಣ ಬಳಿದಂತೆ ಕಾಣುವ; ಬೆಳ್ಳಿ, ಗುಲಾಬಿ, ಬರ್ಗಂಡಿ, ಮೆಜೆಂಟಾ, ನೇರಳೆ ಬಣ್ಣಗಳ ಸಂಯೋಜನೆಯ ಎಲೆಗಳನ್ನು ಹೊಂದಿರುವ 'ಕ್ಯಾಲಾಥಿಯಾ'ದ ಚೆಲುವೇ ಕಣ್ಸೆಳೆಯುವಂಥದ್ದು.

■ ಸೀಮಾ ಹೆಗಡೆ



ರೂಪುರಚನೆಯ ಬಗ್ಗೆ ಇನ್ನೊಂದು ಕುತೂಹಲಕಾರಿ ಅಂಶವನ್ನು ಹೇಳಲೇಬೇಕು. ಬಹುತೇಕ ಕ್ಯಾಲಾಥಿಯಾಗಳ ಎಲೆಗಳ ಅಡಿಭಾಗ ಕಂದುನೇರಳೆ ಬಣ್ಣದ್ದಾಗಿರುತ್ತದೆ. ಇದಕ್ಕೆ ಕೆಲ ವಿಜ್ಞಾನಿಗಳು ಪ್ರತಿಪಾದಿಸುವ ಕಾರಣ 'ಬ್ಯಾಕ್ ಸ್ಕ್ಯಾಟರ್ ಹೈಪೋಥಿಸಿಸ್'. ದಟ್ಟಕಾಡುಗಳಲ್ಲಿ ಏತ್ತರೆತ್ತರವಾದ ಮರಗಳಿಂದ ನುಸುಳಿ ನೆಲಮಟ್ಟದಲ್ಲಿ ಬೆಳೆಯುವ ಸಸ್ಯಗಳಿಗೆ ಬೆಳಕು ತಲುಪುವುದು ಕಷ್ಟ. ಈ ಸಮಸ್ಯೆಯನ್ನು ಎದುರಿಸಲು ಕ್ಯಾಲಾಥಿಯಾದಂಥ ಸಸ್ಯಗಳು ಅಡಿಭಾಗಗಳಲ್ಲಿ 'ಆಂಥೋಸಯಾನಿನ್' ಎಂಬ ಗಾಢಬಣ್ಣದ ಹರಿತ್ತನ್ನು ಸಂಗ್ರಹಿಸುತ್ತವೆ.

ನೆಲ ತಲುಪುವ ಸ್ವಲ್ಪೇ ಸ್ವಲ್ಪ ಸೂರ್ಯನ ಬೆಳಕು ಎಲೆಯ ಮೇಲಿನ ಹಸಿರು ಭಾಗಕ್ಕೆ ಬಿದ್ದಾಗ ಅಲ್ಲಿ ಪತ್ರಹರಿತ್ತು ಹೀರಿಕೊಳ್ಳದೇ ಉಳಿದ ಬೆಳಕು ಎಲೆಗಳ ಅಡಿಭಾಗಕ್ಕೆ ಮುಟ್ಟುತ್ತದೆ. ಅಡಿಭಾಗದಲ್ಲಿ ಆಂಥೋಸಯಾನಿನ್ ಹರಿತ್ತು ಬೆಳಕನ್ನು ಹೊರಗೆ ಹೋಗಲು ಬಿಡದೆ, ಎಲೆಯ ಒಳಗೇ ಮರಳಿ ಮೇಲ್ಭಾಗಕ್ಕೆ ಪ್ರತಿಫಲಿಸುತ್ತದೆ. ಇದರಿಂದಾಗಿ ಎಲೆಯ ಪತ್ರಹರಿತ್ತು ಜೀವಕೋಶಗಳಿಗೆ ಬೆಳಕನ್ನು ಹೀರಿಕೊಳ್ಳಲು ಎರಡನೇ ಅವಕಾಶ ಸಿಗುತ್ತದೆ. ದ್ಯುತಿಸಂಶ್ಲೇಷಣೆಗೆ ಇದೊಂದು ಡಬಲ್ ಧಮಾಕ. 'ಬೆಗೋನಿಯಾ'ಗಳಲ್ಲೂ ಹೀಗೇ. ದಟ್ಟಕಾಡುಗಳಲ್ಲಿ ಬೆಳೆವ ಹಲವು ಗಿಡಗಳ ತಂತ್ರಗಾರಿಕೆಯಿದು. ನೆಲಕ್ಕೆ ತಲುಪುವ ಬೆಳಕು ತುಂಬಾ ತೀಕ್ಷ್ಣವಾದರೆ 'ಆಂಥೋಸಯಾನಿನ್' 'ಸನ್‌ಸ್ಕ್ರೀನ್'ನಂತೆ ರಕ್ಷಾಕವಚವಾಗಿಯೂ ಕಾರ್ಯನಿರ್ವಹಿಸುತ್ತದೆ.

ಕ್ಯಾಲಾಥಿಯಾ ಗಿಡಗಳು ಹಗಲಿನಲ್ಲಿ ಸೂರ್ಯನ ಬೆಳಕನ್ನು ಹಿಡಿಯಲು ಎಲೆಗಳನ್ನು ಅಗಲವಾಗಿ ಬಿಡಿಸಿಟ್ಟುಕೊಂಡರೆ, ರಾತ್ರಿ ತಂಪಾದ ಹವೆ, ಇಬ್ಬನಿಯ ಅತಿ ತೇವಾಂಶದಿಂದ ರಕ್ಷಿಸಿಕೊಳ್ಳಲು ಎಲೆಗಳನ್ನು ಮೇಲಕ್ಕೆ ಮಡಚಿಕೊಳ್ಳುತ್ತವೆ. ಗಿಡಗಳು ಕೈಮುಗಿಯುತ್ತಿರುವಂತೆ ಭಾಸವಾಗುವ ಕಾರಣ ಇವುಗಳಿಗೆ 'ಪ್ರೇಯರ್ ಪ್ಲಾಂಟ್' ಎಂಬ ಅಡ್ಡಹೆಸರಿನಿಂದಲೂ ಕರೆಯಲಾಗುತ್ತದೆ. ಸದಾ ತೇವವಿರುವ ಮಣ್ಣಿನ ಮಿಶ್ರಣದಲ್ಲಿ ಬೆಳೆಸಿ, ನೇರ ಬಿಸಿಲಿಗೆ ತಾಕದೆ ಇರಿಸಿ, ವಾತಾವರಣದಲ್ಲಿ ತೇವಾಂಶ ಕಾಪಾಡಿಕೊಂಡರೆ ನೀವೂ ಕ್ಯಾಲಥಿಯಾಗಳನ್ನು ಸುಲಭವಾಗಿ ಬೆಳೆಸಬಹುದು. ■

USM Library



ಸಮುದ್ರ ಮಥನ

ಪರಿಣಾಮಕಾರಿ ನಿರೂಪಣೆ

'ಹಾವು ಹಿಡಿದು ಆಸ್ಪತ್ರೆಗೆ ಬರುವ ಹುಚ್ಚಾಟ ಬಿಡಿ' (ಬಿ. ಸದಾನಂದ ನಾಯ್ಕ್) ಲೇಖನ



ಚಿಂತನಾರ್ಹ. ಹೃದಯಾಘಾತ, ಪಾರ್ಶ್ವವಾಯುವಿಗೆ ಒಳಗಾದರೆ ಜೀವ ರಕ್ಷಕ ಅವಧಿ ಇರುತ್ತದೆ. ಅದನ್ನು 'ಗೋಲ್ಡನ್ ಪಿರಿಯಡ್' ಎನ್ನುತ್ತಾರೆ. ಇದು ಉರಗ ಕಡಿತಕ್ಕೂ ಅನ್ವಯಿಸುತ್ತದೆ. ಈ ವಿಚಾರದಲ್ಲಿ ವಿಳಂಬ ಒಳ್ಳೆಯದಲ್ಲ ಎನ್ನುವ ಸಂಗತಿಯನ್ನು ಈ ಲೇಖನ ಪರಿಣಾಮಕಾರಿಯಾಗಿ ನಿರೂಪಿಸಿದೆ. ಇಂದು ಆಧುನಿಕ ವೈದ್ಯ ವಿಜ್ಞಾನ ಚಿಕಿತ್ಸಾ ಪದ್ಧತಿಯ ಆಯ್ಕೆ ಎಲ್ಲಾ ರೀತಿಯಲ್ಲೂ ಉತ್ತಮ.

—ಎಚ್. ಸಿದ್ಧಾರ್ಥ, ಈದು (ಕಾರ್ಕಳ)



ಜಿರಾಫೆ ಸಂತಾನ

'ಜಿರಾಫೆ ಜಿಂದಗಿ' (ಉಮೇಶ ಭಟ್ಟ ಪಿ.ಎಚ್) ಲೇಖನ ಕುತೂಹಲದಿಂದ ಕೂಡಿದೆ. ವೈಶಿಷ್ಟ್ಯಪೂರ್ಣ ಗುಣಲಕ್ಷಣದ ಜಿರಾಫೆಯ ಜೀವನಶೈಲಿ ಮತ್ತು ಅವುಗಳ ಸಂತಾನೋತ್ಪತ್ತಿಯ ಕುರಿತ ಮಾಹಿತಿ ತಿಳಿದು ಸಂತೋಷವಾಯಿತು.

—ವಿಜಯಕುಮಾರಿ, ಬೆಂಗಳೂರು

ಲೇಖನ ತುಂಬಾ ಚೆನ್ನಾಗಿ ಮೂಡಿಬಂದಿದೆ. ಹೆಣ್ಣಿ ಮತ್ತು ಹಸು ವಿದೇಶದಿಂದ ಮೈಸೂರಿಗೆ ಬಂದು, ಅಲ್ಲಿ ಸಂತಾನೋತ್ಪತ್ತಿಯಲ್ಲಿ ತೊಡಗಿ ದೊಡ್ಡ ಸಂಸಾರವನ್ನು ಸೃಷ್ಟಿಸಿದೆ. ಮೃಗಾಲಯದ ಸಿಬ್ಬಂದಿ ತೋರಿದ ಕಳಕಳಿ, ಪ್ರೀತಿ ಶ್ಲಾಘನೀಯ.

—ಟಿ.ಎಸ್. ನಾಗರಾಜ ರಾವ್

UASB Library



ಕಿತ್ತಳೆಗಿಂತ ಚಳಿಗಾಲದ ಕಿತ್ತಳೆಗೆ ಬೇಡಿಕೆ ಹೆಚ್ಚು. ಆದರೆ ಈ ಅವಧಿಯಲ್ಲಿ ಕಾಫಿ, ಭತ್ತ, ಕಿತ್ತಳೆ ಎಲ್ಲವೂ ಏಕಕಾಲಕ್ಕೆ ಕೊಯ್ಲಿಗೆ ಬರುತ್ತವೆ. ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಅಭಾವ ತೀವ್ರವಾಗಿರುವುದರಿಂದ ಕಾಫಿ ಬೆಳೆಗಾರರು ಕಿತ್ತಳೆಯನ್ನು ಗುತ್ತಿಗೆಗೆ ಕೊಡುತ್ತಾರೆ. ಹಿಂದಿನಿಂದಲೂ ರೂಢಿಯಲ್ಲಿರುವ ಕ್ರಮ ಇದು. ವ್ಯಾಪಾರಸ್ಥರು ಕಾಯಿ ಬಿಡುವ ಪ್ರಾರಂಭದಲ್ಲಿಯೇ ತೋಟಕ್ಕೆ ಭೇಟಿ ನೀಡಿ ಗುತ್ತಿಗೆಗೆ ಇಡೀ ತೋಟವನ್ನು ಒಪ್ಪಂದ ಮಾಡಿಕೊಳ್ಳುತ್ತಾರೆ.

ದಕ್ಷಿಣ ಕೊಡಗಿನಲ್ಲಿ ಬೆಳೆದ ಕಿತ್ತಳೆಯನ್ನು ಗೋಣಿಕೊಪ್ಪದ ಕಿತ್ತಳೆ ಬೆಳೆಗಾರರ ಸಂಘ ಖರೀದಿಸಿ ಕಿತ್ತಳೆ ಹಣ್ಣಿನ ಜ್ಯೂಸ್ ತಯಾರಿಸಿ ಮಾರುಕಟ್ಟೆಗೆ ಬಿಡುತ್ತಿದೆ. ಉಳಿದ ಹಣ್ಣನ್ನು ಬೆಂಗಳೂರು, ಮೈಸೂರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಕೇರಳಕ್ಕೂ ಸಾಕಷ್ಟು ಕಿತ್ತಳೆ ರವಾನೆಯಾಗುತ್ತದೆ.

ಬೆಳೆಗಾರರಿಗೆ ಪ್ರತಿ ಕೆ.ಜಿ.ಗೆ ₹40 ಸಿಗುತ್ತಿದ್ದು, ಮಾರುಕಟ್ಟೆಯಲ್ಲಿ ₹50 ವರೆಗೆ ಬಿಕರಿಯಾಗುತ್ತಿದೆ. ಎರಡು ದಶಕದ ಹಿಂದೆ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಎಕರೆಯಲ್ಲಿ ಕಾಫಿ ತೋಟದ ನಡುವೆ ಅಂತರ ಬೆಳೆಯಾಗಿ ಬೆಳೆಯಲಾಗುತ್ತಿತ್ತು. ಸುಮಾರು 1000 ಲಾರಿ ಕಿತ್ತಳೆ ಮಾರಾಟವಾಗುತ್ತಿತ್ತು. 1999ರಲ್ಲಿ ಕಿತ್ತಳೆಗೆ ಗ್ರೇನಿಂಗ್ ಎಂಬ ಮಾರಕ ರೋಗ ತಗಲಿತ್ತು. ಕೇರಳದಿಂದ ಪ್ರವೇಶಿಸಿದ್ದ ಈ ರೋಗ ಕೇವಲ ಎರಡು ವರ್ಷದಲ್ಲಿ ಕೊಡಗಿನ ಕಿತ್ತಳೆ ಬೆಳೆಯನ್ನು ನಾಶ ಮಾಡಿತು.

ಕಿತ್ತಳೆ ಬೆಳೆಯನ್ನು ಆದಾಯ ತಂದುಕೊಡುವ ಬೆಳೆ ಎಂದು ಪರಿಗಣಿಸಿದವರು ಕಡಿಮೆ. ಕಾಫಿ ತೋಟಗಳಲ್ಲಿ ನೆರಳಿನ ಮರವಾಗಿ ಬೆಳೆಯುವ ಕಿತ್ತಳೆ ಬಗ್ಗೆ ಬಹುತೇಕ ಕೃಷಿಕರು ಕಾಳಜಿ ವಹಿಸುವುದಿಲ್ಲ. ಆರೈಕೆ ಇಲ್ಲದ ಗಿಡ ಹಳದಿ ಎಲೆ ರೋಗಕ್ಕೆ ತುತ್ತಾಗುತ್ತಿದೆ. ಈ ರೋಗಕ್ಕೆ ತುತ್ತಾದ ಕಿತ್ತಳೆ ಗಿಡ ಚಿಗುರೊಡೆಯುವುದನ್ನು ನಿಲ್ಲಿಸಿ ಒಣಗಿ ಹೋಗುತ್ತದೆ.

ಜಿಲ್ಲೆಯ ಶಾಂತಳ್ಳಿ, ಗೋಣಿಕೊಪ್ಪ, ಪೊನ್ನಂಪೇಟೆ ಸೇರಿದಂತೆ ಕೆಲವು ಭಾಗಗಳಲ್ಲಿ ಆಸಕ್ತ ರೈತರು ಕಿತ್ತಳೆಯನ್ನು ಪ್ರತ್ಯೇಕವಾಗಿ ಬೆಳೆದು ಲಾಭ ಗಳಿಸುತ್ತಿದ್ದಾರೆ. ಈ ನಡುವೆ ತೋಟಗಾರಿಕೆ ಇಲಾಖೆ ಹಾಗೂ ಚೆಟ್ಟಳ್ಳಿಯ ತೋಟಗಾರಿಕಾ ಸಂಶೋಧನಾ ಕೇಂದ್ರ ಬೀಜದ ಬದಲು ಕಸಿ ಮೂಲಕ ರೋಗ ನಿರೋಧಕ ಶಕ್ತಿ ಇರುವ ತಳಿ ಅಭಿವೃದ್ಧಿಪಡಿಸುತ್ತಿವೆ.

ಕಿತ್ತಳೆ ಸಂಸ್ಕರಣಾ ಘಟಕ

ಕೊಡಗು ಜಿಲ್ಲಾ ಕಿತ್ತಳೆ ಬೆಳೆಗಾರರ ಸಂಘ ಆರಂಭಿಸಿದ ಹಣ್ಣು ಸಂಸ್ಕರಣಾ ಘಟಕವಾದ ಕೂರ್ಗ್ ಫ್ರೂಟ್ ಪ್ರಾಡಕ್ಟ್ಸ್ ಸಂಸ್ಥೆಯು ಕಿತ್ತಳೆ ಹಣ್ಣಿನ ರಸ ತೆಗೆದು ಶರಬತ್ತು ತಯಾರಿಕೆಗೆ ಆದ್ಯತೆ ನೀಡುತ್ತಿದೆ. ಗೋಣಿಕೊಪ್ಪದಲ್ಲಿ ಏಳು ಎಕರೆ ಜಾಗದಲ್ಲಿರುವ ಈ ಘಟಕಕ್ಕೆ 1963ರ ನವೆಂಬರ್ 15ರಂದು ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅಡಿಗಲ್ಲು ಹಾಕಿದರು. ಕಾಫಿನಾಡಿನ ಕಿತ್ತಳೆ ಸಂಸ್ಕರಣಾ ಘಟಕವು ಆರಂಭದಲ್ಲಿ ಕಿತ್ತಳೆಯೊಂದನ್ನೇ ನಂಬಿ ಆಘಾತ ಅನುಭವಿಸಿತು. ಘಟಕ ಪ್ರತಿನಿತ್ಯ ಎಂಟು ಟನ್ ಕಿತ್ತಳೆ ಖರೀದಿಸಿ, ಅದರಿಂದ ಎರಡು ಸಾವಿರ ಟನ್ ಜ್ಯೂಸ್ ಉತ್ಪಾದಿಸುವ ಗುರಿಹೊಂದಿತ್ತು.

ಕಿತ್ತಳೆಯೊಂದಿಗೆ ಅನನಾಸ್ ಜ್ಯೂಸ್ ತಯಾರಿಕೆಗೆ ಮುಂದಾದರೂ, ನಿರೀಕ್ಷಿತ ಲಾಭವಾಗದೆ



ಜುಲೈ 30ರ ಸಂಚಿಕೆಯ 'ಚೆನ್ನುಡಿ' 'ಕಮಲಶಿಲೆ ಹಬ್ಬದ್ ಕಟ್ಟೆ ವಸ್ತಂತಕ್ಕೆ ಹ್ವಾಪ ಬನ್ನಿ!' ಕೇಳಿ, ಭಾರತಿ ಎ. ಕೊಪ್ಪ ಅವರ ಧ್ವನಿಯಲ್ಲಿ...

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

1980ರಿಂದ ಹದಿಮೂರು ವರ್ಷಗಳ ಕಾಲ ಘಟಕಕ್ಕೆ ಬೀಗಹಾಕಲಾಯಿತು. 1993ರ ಜನವರಿ 17ರಂದು ಘಟಕ ಮತ್ತೆ ಪುನರಾರಂಭಗೊಂಡಿತು. ಈಗ ಮೈಕೊಡವಿ ನಿಂತಿದೆ. ಹಾಸನದ ಮಿಡಿಸೌತೆ, ಕೋಲಾರದ ಮಾವು, ಕೇರಳದ ಅನಾನಸು, ಟೊಮೆಟೊ, ನಿಂಬೆ, ಫ್ಯಾಷನ್ ಫ್ರೂಟ್ ಮತ್ತಿತರ ಹಣ್ಣುಗಳನ್ನೂ ತಂದು ಸಂಸ್ಕರಿಸಲಾಗುತ್ತದೆ. ಹಣ್ಣುಗಳೂ ಸೇರಿದಂತೆ ಸ್ಕ್ವೆಸ್‌ಗಳು, ಉಪ್ಪಿನಕಾಯಿ, ಪಲ್ಪ್, ಜಾಮ್ ಮತ್ತು ಜೆಲ್ಲಿಯನ್ನು ತಯಾರಿಸುತ್ತಿದೆ. ಮಿಡಿ ಜೋಳ, ಮಿಡಿ ಸೌತೆ ಉತ್ಪನ್ನಗಳೂ ಇಲ್ಲಿ ತಯಾರಾಗುತ್ತಿವೆ.

ಕೊಡಗಿನಿಂದ ಅಮೆರಿಕಕ್ಕೆ ಟೊಮೆಟೊ ಸಾಸ್ ಮತ್ತು ಪ್ಯೂರಿ ರವಾನೆಯಾಗುತ್ತಿದೆ. ಜ್ಯೂಸ್, ಜೆಲ್ಲಿ, ಉಪ್ಪಿನಕಾಯಿಗಳು ಗುಜರಾತ್, ಮಹಾರಾಷ್ಟ್ರ ರಾಜ್ಯಗಳ ಮಾರುಕಟ್ಟೆಗೆ ರವಾನೆಯಾಗುತ್ತಿದೆ. ಕಿತ್ತಳೆ ಬೆಳೆಗಾರರಿಗೆ ಉತ್ತೇಜನ ನೀಡುವುದು ಹಾಗೂ ಅವರು ಬೆಳೆದ ಹಣ್ಣು ಹಂಪಲುಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಬೆಲೆ ದೊರಕಿಸಿಕೊಡುವುದು ಕಿತ್ತಳೆ ಬೆಳೆಗಾರರ ಸಂಘದ ಮೂಲ ಉದ್ದೇಶ. ಸಂಘದ ಪ್ರಯತ್ನದ ಫಲವಾಗಿ ಕೊಡಗಿನ ಕಿತ್ತಳೆಗೆ ವಿಶ್ವಮಾನ್ಯತೆ ಸಿಕ್ಕಿದೆ.

ತೋಟಗಾರಿಕಾ ಇಲಾಖೆ ಪ್ರಕಾರ ಕೊಡಗಿನಲ್ಲಿ 1 ಲಕ್ಷ 23 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದೆ. ಸುಮಾರು 3000 ಹೆಕ್ಟೇರ್ ಪ್ರದೇಶದಲ್ಲಿ ಕಿತ್ತಳೆ ಬೆಳೆಯುತ್ತಿದೆ. ಕಿತ್ತಳೆ ಬೆಳೆ ಪ್ರೋತ್ಸಾಹಕ್ಕೆ ತೋಟಗಾರಿಕಾ ಇಲಾಖೆಯಿಂದ ಸಹಾಯಧನವನ್ನು ನೀಡಲಾಗುತ್ತಿದೆ. ಸ್ಥಳೀಯ ರೈತರು ಉತ್ತಮ ರೋಗ ನಿರೋಧಕ ಸಸಿಗಳ ಉತ್ಪಾದಿಸುವ ಮೂಲಕ ಕಿತ್ತಳೆ ಕೃಷಿಯ ಹಳೆಯ ವೈಭವನ್ನು ಮರಳಿತರಲು ಪ್ರಯತ್ನಿಸುತ್ತಿದ್ದಾರೆ ಎನ್ನುತ್ತಾರೆ ಕೊಡಗು ಜಿಲ್ಲೆಯ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಶಿಧರ್ ಹೆಚ್.

UAS GKVK Library



ಹುಣಸೆ ಹುಳಿ, ರುಚಿಮೊಗ್ಗು ಅರಳಿ

ಹುಣಸೆಹಣ್ಣಿನಲ್ಲಿ ವಿಟಮಿನ್ ಸಿ, ಫೈಬರ್ ಅಂಶ ಹೆಚ್ಚಾಗಿದ್ದು, ಜೀರ್ಣಕ್ರಿಯೆಯನ್ನು ಹೆಚ್ಚಿಸುವುದರ ಜೊತೆಗೆ ಕೆಟ್ಟ ಕೊಬ್ಬನ್ನು ಕಡಿಮೆ ಮಾಡುತ್ತದೆ. ಇದನ್ನು ಸಾಮಾನ್ಯವಾಗಿ ಸಾರು, ಸಾಂಬಾರಿಗೆ ಹುಳಿಯಂತೆ ಬಳಸುತ್ತೇವೆ. ಇದರ ಜೊತೆಗೆ ಒಂದಷ್ಟು ರುಚಿಯಾದ ಖಾದ್ಯಗಳನ್ನೂ ಮಾಡಬಹುದು. ನೀವೂ ಪ್ರಯತ್ನಿಸಬಹುದಾದ ಅಂಥ ಸರಳ ತಿನಿಸುಗಳು ಇಲ್ಲಿವೆ.

■ ವೇದಾವತಿ ಹೆಚ್.ಎಸ್.

ಹುಣಸೆಹಣ್ಣಿನ ಕ್ಯಾಂಡಿ

ಏನೇನು ಬೇಕು?

• 150 ಗ್ರಾಂ ಬೀಜ ತೆಗೆದ ಹುಣಸೆಹಣ್ಣು • 100 ಗ್ರಾಂ ಖರ್ಜೂರ • ಎರಡು ಲೋಟ ಬಿಸಿ ನೀರು • 150 ಗ್ರಾಂ ಬೆಲ್ಲ • ಒಂದು ಚಮಚ ಅಚ್ಚಖಾರದ ಪುಡಿ • ಒಂದು ಚಮಚ ಚಾಟ್ ಮಸಾಲೆ • ಅರ್ಧ ಚಮಚ ಜೀರಿಗೆ ಪುಡಿ • ಅರ್ಧ ಚಮಚ ಉಪ್ಪು • ಒಂದು ಚಮಚ ತುಪ್ಪ



ಮಾಡೋದು ಹೇಗೆ?

ಬೌಲಿನಲ್ಲಿ ಹುಣಸೆಹಣ್ಣು ಮತ್ತು ಖರ್ಜೂರವನ್ನು ಅರ್ಧ ಗಂಟೆ ಬಿಸಿ ನೀರಿನಲ್ಲಿ ನೆನೆಸಿಡಿ. ಬಳಿಕ ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ಪೇಸ್ಟ್ ತಯಾರಿಸಿ ಅದನ್ನು ಸೋಸಿಕೊಳ್ಳಿ. ಬಾಣಲೆಗೆ ತಯಾರಿಸಿದ ಪೇಸ್ಟ್, ಮತ್ತು ಬೆಲ್ಲವನ್ನು ಹಾಕಿ ಮಧ್ಯಮ ಉರಿಯಲ್ಲಿ ಮಗುಚುತ್ತಾ ಬನ್ನಿ. ಮಿಶ್ರಣವು ಗಟ್ಟಿಯಾಗುತ್ತಾ ಬಂದಾಗ ಅಚ್ಚಖಾರದಪುಡಿ, ಚಾಟ್ ಮಸಾಲೆ, ಜೀರಿಗೆಪುಡಿ, ಉಪ್ಪು, ತುಪ್ಪವನ್ನು ಸೇರಿಸಿ ಮಗುಚಿ. ಗಟ್ಟಿಯಾದ ಬಳಿಕ ಒಲೆಯನ್ನು ಆರಿಸಿ ಆರಲು ಬಿಡಿ. ನಂತರ ಚಿಕ್ಕ ಚಿಕ್ಕ ಉಂಡೆಯನ್ನು ತಯಾರಿಸಿ ಚಾಕುಲೇಟ್‌ನಂತೆ ಸುತ್ತಿಡಿ. ಮಕ್ಕಳಿಗೆ ಇಷ್ಟವಾದ ರೆಸಿಪಿ ಇದಾಗಿದೆ.





ಹುಣಸೆಹಣ್ಣಿನ ಸಾರು

ಏನೇನು ಬೇಕು?

• 2 ರಿಂದ 3 ಚಮಚ ಹುಣಸೆ ಪೇಸ್ಟ್ • ಬೆಲ್ಲ ಅರ್ಧ ಲೋಟ • ಈರುಳ್ಳಿ ಎರಡು ಚಿಕ್ಕದಾಗಿ ಕತ್ತರಿಸಿಕೊಳ್ಳಿ • ಕರಿಬೇವು ಸ್ವಲ್ಪ • ಕೊತ್ತಂಬರಿ ಸೊಪ್ಪು ಸ್ವಲ್ಪ • ಸಾಸಿವೆ ಒಂದು ಚಮಚ • ಜೀರಿಗೆ ಒಂದು ಚಮಚ • ಹಸಿಮೆಣಸಿನಕಾಯಿ 5 ರಿಂದ 6 • ಒಣಮೆಣಸು ಎರಡು • ಉಪ್ಪು ರುಚಿಗೆ ತಕ್ಕಷ್ಟು • ಎಣ್ಣೆ ಆಥವಾ ತುಪ್ಪ ಒಂದು ಚಮಚ • ನೀರು ಆರು ಲೋಟ

ಮಾಡೋದು ಹೇಗೆ?

ಹುಣಸೆಹಣ್ಣಿನ ಪೇಸ್ಟ್ ಅನ್ನು ನೀರಿನಲ್ಲಿ ಹಾಕಿ ಕರಗಿಸಿಕೊಳ್ಳಿ. ಬಾಣಲೆಗೆ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಂಡು ಸಾಸಿವೆ, ಜೀರಿಗೆ ಹಾಕಿ ಒಗ್ಗರಣೆ ತಯಾರಿಸಿಕೊಳ್ಳಿ. ಸಾಸಿವೆ ಸಿಡಿದ ಬಳಿಕ ಒಣಮೆಣಸನ್ನು ತುಂಡು ಮಾಡಿ ಹಾಕಿ. ಕರಿಬೇವು, ಈರುಳ್ಳಿ ಸೇರಿಸಿ. ಈರುಳ್ಳಿ ಮೆತ್ತಗಾದ ನಂತರ ತಯಾರಿಸಿಕೊಂಡ ಹುಣಸೆ ನೀರನ್ನು ಸೇರಿಸಿ. ಜೊತೆಗೆ ಬೆಲ್ಲ, ಉಪ್ಪು ಸೇರಿಸಿ. ಕುದಿ ಬಂದ ಬಳಿಕ ಕೊತ್ತಂಬರಿ ಸೊಪ್ಪನ್ನು ಸೇರಿಸಿ ಒಲೆಯಿಂದ ಇಳಿಸಿ. ಅಜೀರ್ಣ, ಪಿತ್ತಕ್ಕೆ ಈ ಸಾರು ಒಳ್ಳೆಯದು.

KASP Library

ಮನೆಯ ಬಾಲ್ಕನಿಯಲ್ಲಿ 'ಗುಪ್ಪಟೆ'

ಊರಿನಿಂದ ಶಂಖಿಪುಷ್ಪದ ಹೂವಿನ ಬೀಜಗಳನ್ನು ತೆಗೆದುಕೊಂಡು ಬಂದಿದ್ದೆ. ಆ ಬೀಜಗಳನ್ನು ತಂದು ನಮ್ಮ ಬರೋಡಾದ ಮನೆಯ ಬಾಲ್ಕನಿಯ ಹೂವಿನ ಗಿಡದ ಕುಂಡಗಳಲ್ಲಿ ಹಾಕಿದ್ದೆ. ಕೆಲ ದಿನಗಳ ಬಳಿಕ ಬೀಜಗಳು ಮೊಳಕೆಯೊಡೆದವು. ಅವುಗಳ ಜೊತೆಗೆ ಬೇರೆ ಗಿಡವೊಂದು ಬೆಳೆಯಿತು.

'ಆ ಗಿಡವು ಯಾವುದೇ ಆಗಿರಲಿ, ಕಿತ್ತು ಹಾಕುವುದು ಬೇಡ' ಎಂದು ಹಾಗೆಯೇ ಬಿಟ್ಟೆ. ಬಳಿಕ ಗೊತ್ತಾದದ್ದು ಅದು 'ಗುಪ್ಪಟೆ' ಗಿಡವೆಂದು. ಶಾಲಾ ಕಾಲೇಜಿಗೆ ಹೋಗುತ್ತಿದ್ದ ಸಮಯದಲ್ಲಿ ಗದ್ದೆತೋಟದ ಬದಿಯಲ್ಲೆಲ್ಲಾ ಈ ಗಿಡಗಳು ಹೇರಳವಾಗಿ ಕಾಣಿಸಿಕೊಳ್ಳುತ್ತಿದ್ದವು. ಇದನ್ನು ತುಳುವಿನಲ್ಲಿ 'ಅಜ್ಜೆ ಬುಡ್ಡ' ಅಥವಾ 'ಬೊಂಡೊಲು' ಅಂತ ಕರೆಯುತ್ತಾರೆ. ಕನ್ನಡದಲ್ಲಿ ಇದು



ನಿಮ್ಮ ಪುಟ

ಸುವರ್ಣ ಗಡ್ಡೆಯ ಪುಷ್ಪ



ಬೇಸಿಗೆಯ ದಿನಗಳಲ್ಲೇ ಕಾಣಿಸುವ ಸುವರ್ಣ ಗಡ್ಡೆಯ ಹೂವು, ಈ ಬಾರಿ ಮಳೆಗಾಲದಲ್ಲೂ ಕಾಣಿಸಿಕೊಳ್ಳುತ್ತಿದೆ. ಗಡ್ಡೆಯನ್ನು ನೋಡಿರುವ ನಾವೆಲ್ಲರೂ ಅದರ ಹೂವನ್ನು ಹೆಚ್ಚಾಗಿ ನೋಡಿರುವುದಿಲ್ಲ. ಮಳೆ ಆಶ್ರಯದಲ್ಲಿ ಬೆಳೆಯುವ ಸುವರ್ಣ ಗಡ್ಡೆಯು ಹೆಚ್ಚಾಗಿ ಮಲೆನಾಡು, ಅರೆಮಲೆನಾಡು ಪ್ರದೇಶಗಳಲ್ಲಿ ಕಾಣಿಸಿಗುತ್ತದೆ. ವಾಣಿಜ್ಯ ಬೆಳೆಯಾಗಿಯೂ ಇದನ್ನು ಸಾಗುವಳಿ ಮಾಡಲಾಗುತ್ತದೆ. ಕೈತೋಟಗಳಲ್ಲೂ ಬೆಳೆಯಲಾಗುತ್ತದೆ. ಮಳೆಗಾಲ ಮುಗಿಯುತ್ತಿದ್ದಂತೆ ಗಡ್ಡೆ ಬಲಿತು ತನ್ನ ಅಗಲವಾದ ಎಲೆಗಳನ್ನು ಬಾಡಿಸಿಕೊಂಡು ಮಂಕಾಗಿ ಕಣ್ಣಿಗೆ ಕಾಣದಂತೆ ಮಾಯವಾಗಿ ಬಿಡುತ್ತದೆ. ಹೆಚ್ಚು ಕಾಳಜಿಯನ್ನು ಕೇಳದ, ರೋಗ ಕೀಟಗಳಿಗೆ ತುತ್ತಾಗದ ಈ ಗಡ್ಡೆಯನ್ನು ಪಲ್ಯ, ಸಾರು, ಚಟ್ನಿ, ಪಾಯಸ ಇತ್ಯಾದಿ ಖಾದ್ಯಗಳನ್ನು ಮಾಡಲು ಬಳಸಲಾಗುತ್ತದೆ. ಗಡ್ಡೆಯೂ ಬಹುದಿನ ಬಾಳಿಕೆ ಬರುತ್ತದೆ. ಕಡು ಬೇಸಿಗೆಯಲ್ಲೂ ಮಣ್ಣಿನಿಂದ ಪುಟಿದೇಳುವ ಸುವರ್ಣ ಗಡ್ಡೆ ಗಿಡದ ಹೂವಿನ ಗಾತ್ರವು ದೊಡ್ಡದು. ಗಿಡಗಳಲ್ಲಿ ಹೂವುಗಳು ಮೂಡುವಂತೆ ಇಲ್ಲಿ ಪುಷ್ಪಗಳೊಂದಿಗೆ ಎಲೆಗಳು ಇರುವುದಿಲ್ಲ.

ಈ ಹೂವುಗಳು ಸುವಾಸನೆ ಬೀರುವುದಿಲ್ಲ. ದುರ್ಗಂಧ ನಾರುತ್ತಿರುತ್ತದೆ. ವಾಸನೆಗೆ ನೊಣಗಳು ಬರುತ್ತವೆ. 'ಎಲಿಫೆಂಟ್ ಯಾಮ್' ಎಂದು ಕರೆಯುವ ಸುವರ್ಣ ಗಡ್ಡೆಯ ಮೇಲ್ಭಾಗವು ಆಕರ್ಷಣೀಯವಾಗಿರದಿದ್ದರೂ ಒಳ ಭಾಗವು ಹಿತವಾಗಿ ಕಾಣುತ್ತದೆ. ದೊಡ್ಡ ಗಾತ್ರದ ಹೂವಿನಲ್ಲಿ ಪುಷ್ಪ ದಳಗಳು ಕಡು ಕಂದು ಬಣ್ಣದಲ್ಲಿದ್ದು, ತಳದಲ್ಲಿ ಬಂಗಾರದ ಬಣ್ಣವು ಲೇಪಿತವಾದಂತಿರುತ್ತದೆ

—ವಿಜಯ್ ಅಂಗಡಿ, ಹಾಸನ

UASB Library



ಹುಣಸೆಹಣ್ಣು ಖರ್ಜೂರದ ಚಟ್ನಿ

ಏನೇನು ಬೇಕು?

• ಬೀಜ ತೆಗೆದ ಖರ್ಜೂರ ಒಂದು ಲೋಟ • ಬೀಜ ತೆಗೆದ ಹುಣಸೆ ಹಣ್ಣು ಒಂದು ಲೋಟ • ನೀರು ನಾಲ್ಕು ಲೋಟ • ಬೆಲ್ಲ ಒಂದು ಲೋಟ • ಸೊಂಪು ಪುಡಿ ಒಂದು ಚಮಚ • ಎರಡು ಚಮಚ ಧನಿಯಾ ಪುಡಿ • ಒಂದು ಚಮಚ ಜೀರಿಗೆ • ಎರಡು ಚಮಚ ಆಚ್ಚಖಾರದ ಪುಡಿ • ಒಂದು ಚಮಚ ಶುಂಠಿ ಪುಡಿ • ಉಪ್ಪು ರುಚಿಗೆ ತಕ್ಕಷ್ಟು

ಮಾಡೋದು ಹೇಗೆ?

ಬಾಣಲೆಯಲ್ಲಿ ಹುಣಸೆಹಣ್ಣು, ಖರ್ಜೂರ ಮತ್ತು ಬೆಲ್ಲವನ್ನು ಹಾಕಿ, ಅದಕ್ಕೆ ನೀರನ್ನು ಸೇರಿಸಿ ಹತ್ತು ನಿಮಿಷಗಳ ಬೇಯಿಸಿ. ಬೆಂದ ಮಿಶ್ರಣಕ್ಕೆ ಸೊಂಪು ಪುಡಿ, ಧನಿಯಾ ಪುಡಿ, ಜೀರಿಗೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಆಚ್ಚಖಾರದ ಪುಡಿಯನ್ನು ಸೇರಿಸಿ. ಎಲ್ಲಾ ಮಸಾಲ ಮಿಶ್ರಣಗಳೊಂದಿಗೆ ಚೆನ್ನಾಗಿ ಬೆಂದ ನಂತರ ಒಲೆಯಿಂದ ಇಳಿಸಿ. ಆರಿದ ನಂತರ ಸ್ವಲ್ಪ ಸ್ವಲ್ಪವೇ ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಜರಡಿಯಲ್ಲಿ ಹಾಕಿ ಸೋಸಿಕೊಂಡು ಬಾಟಲಿಯಲ್ಲಿ ಹಾಕಿ ಮುಚ್ಚಿಡಿ. ಈ ಚಟ್ನಿ ಚಪಾತಿ, ಪರೋಟ, ಸಮೋಸಗಳಿಗೆ ನಂಚಿಕೊಂಡು ತಿನ್ನಲು ರುಚಿಯಾಗಿರುತ್ತದೆ.

ಹುಣಸೆಹಣ್ಣಿನ ಮೊಯಿಟೊ ಮಾಕ್ಟೇಲ್

ಏನೇನು ಬೇಕು?

• ಹುಣಸೆಹಣ್ಣಿನ ಪೇಸ್ಟ್ ಒಂದು ಚಮಚ • ಕಾಲು ಲೋಟ ಬೆಲ್ಲ • ಚಿಟಿಕೆ ಉಪ್ಪು • ಮುಕ್ಕಾಲು ಚಮಚ ಆಚ್ಚಖಾರದಪುಡಿ • ಕಾಲು ಚಮಚ ಏಲಕ್ಕಿಪುಡಿ • ಚಿಟಿಕೆ ಬ್ಲಾಕ್ ಸಾಲ್ಟ್ • ನಿಂಬೆಹಣ್ಣಿನ ಹೊಳುಗಳು ಸ್ವಲ್ಪ • ಪುದೀನ ಸೊಪ್ಪು ಸ್ವಲ್ಪ • ಐಸ್ ಕ್ಯೂಬ್ ಸ್ವಲ್ಪ • ಸೋಡಾ ಅರ್ಧ ಲೋಟ

ಮಾಡೋದು ಹೇಗೆ?

ಬಾಣಲೆಗೆ ಬೆಲ್ಲವನ್ನು ಹಾಕಿ ಒಂದು ಚಮಚ ನೀರನ್ನು ಸೇರಿಸಿ ಕರಗಿಸಿಕೊಳ್ಳಿ. ಬಳಿಕ ಹುಣಸೆ ಪೇಸ್ಟ್ ಸೇರಿಸಿ ಮಿಶ್ರಣ ಮಾಡಿ. ಚಿಟಿಕೆ ಉಪ್ಪು, ಆಚ್ಚಖಾರದ ಪುಡಿ, ಏಲಕ್ಕಿಪುಡಿ ಸೇರಿಸಿ ಗಟ್ಟಿ ಪೇಸ್ಟ್ ತಯಾರಿಸಿಕೊಳ್ಳಿ. ನಂತರ ಗ್ಲಾಸಿಗೆ ಚಿಕ್ಕ ಚಿಕ್ಕದಾಗಿ ಕತ್ತರಿಸಿದ 2 ರಿಂದ 3 ನಿಂಬೆ ಹೋಳುಗಳನ್ನು ಹಾಕಿ, ಜೊತೆಗೆ ಪುದೀನ ಸೊಪ್ಪು, ಬ್ಲಾಕ್ ಸಾಲ್ಟ್ ಸೇರಿಸಿ ನಿಧಾನವಾಗಿ ಒಂದು ಬಾರಿ ಕುಟ್ಟಿಕೊಳ್ಳಿ. ಪುಡಿ ಮಾಡುವುದು ಬೇಡ. ಬಳಿಕ ತಯಾರಿಸಿಕೊಂಡ ಹುಣಸೆಹಣ್ಣಿನ ಪೇಸ್ಟ್, ಕಾಲು ಲೋಟ ನೀರನ್ನು ಸೇರಿಸಿ ಮಿಶ್ರಣ ಮಾಡಿ. ಬಳಿಕ ಸೋಡಾ, ಐಸ್ ಕ್ಯೂಬ್ ಸೇರಿಸಿ ಸವಿಯಿರಿ.



ಹುಣಸೆಹಣ್ಣಿನ ಗೊಜ್ಜು

ಏನೇನು ಬೇಕು?

• ಹುಣಸೆಹಣ್ಣು ನಿಂಬೆ ಗಾತ್ರದಷ್ಟು • ಜೀರಿಗೆ ಒಂದು ಚಮಚ • ಸಾಸಿವೆ ಒಂದು ಚಮಚ • ಅರಶಿನ ಕಾಲು ಚಮಚ • ಕರಿಬೇವು ಸ್ವಲ್ಪ • ಉಪ್ಪು ರುಚಿಗೆ ತಕ್ಕಷ್ಟು • ಬೆಲ್ಲ ನಿಂಬೆ ಗಾತ್ರದಷ್ಟು • ಒಣಮೆಣಸಿನಕಾಯಿ ನಾಲ್ಕು • ಎಣ್ಣೆ ಎರಡು ಚಮಚ • ಇಂಗು ಚಿಟಿಕೆ • ಕೊತ್ತಂಬರಿ ಸೊಪ್ಪು ಸ್ವಲ್ಪ



ಮಾಡೋದು ಹೇಗೆ?

ಹುಣಸೆಹಣ್ಣನ್ನು ನೀರಿನಲ್ಲಿ ತೊಳೆದು ಅರ್ಧ ಗಂಟೆ ನೆನೆಸಿಡಿ. ನಂತರ ಕಿವುಚಿ ರಸ ತೆಗೆಯಿರಿ. ಈ ರಸಕ್ಕೆ ಬೆಲ್ಲವನ್ನು ಸೇರಿಸಿ. ಬಾಣಲೆಗೆ ಎಣ್ಣೆಯನ್ನು ಹಾಕಿ ಬಿಸಿ ಮಾಡಿ. ಸಾಸಿವೆ, ಜೀರಿಗೆ, ಒಣಮೆಣಸಿನಕಾಯಿ, ಕರಿಬೇವು ಹಾಕಿ ಹುರಿದುಕೊಳ್ಳಿ. ಈಗಾಗಲೇ ತಯಾರಿಸಿಕೊಂಡ ಹುಣಸೆ ಮತ್ತು ಬೆಲ್ಲದ ಮಿಶ್ರಣವನ್ನು ಸೇರಿಸಿ. ಬಳಿಕ ನೀರು ಎಷ್ಟು ಬೇಕೋ ಅಷ್ಟು ಸೆರಿಸಿ ಕುದಿಸಿ. ಕುದಿ ಬಂದ ಮೇಲೆ ಕೊತ್ತಂಬರಿ ಸೊಪ್ಪನ್ನು ಹಾಕಿ ಒಲೆಯಿಂದ ಇಳಿಸಿ.

ನೀವೂ ಬರೆಯಿರಿ

ನೀವು ಕಾಲ, ಕಾಲಕ್ಕೆ ಮಾಡುವ ವಿಶಿಷ್ಟ ತಿನಿಸುಗಳು, ಹಬ್ಬ ಹರಿದಿನಗಳಂದು ನಿಮ್ಮ ಸಮುದಾಯದಲ್ಲಿ ಅಥವಾ ಊರಿನಲ್ಲಿ ಮಾತ್ರವೇ ಮಾಡುವ ವಿಶಿಷ್ಟ ಖಾದ್ಯಗಳು, ನಿಮ್ಮ ಮನೆಗಾಗಿ ನೀವೇ ಕಂಡುಕೊಂಡ, ಕಲಿತುಕೊಂಡ ವೆಜ್/ನಾನ್‌ವೆಜ್ ಹೊಸ ರೆಸಿಪಿಗಳನ್ನು ನೀವೂ ಆಹಾರ ಪುಟದಲ್ಲಿ ಹಂಚಿಕೊಳ್ಳಬಹುದು. ಲೇಖನದ ಮಾದರಿ, ಎಷ್ಟು ರೆಸಿಪಿಗಳು ಬೇಕು ಎಂಬುದಕ್ಕೆ ಒಮ್ಮೆ ಆಹಾರ ಪುಟವನ್ನು ಗಮನಿಸಿ. ಲೇಖನವನ್ನು editorsu@sudha.co.in ವಿಳಾಸಕ್ಕೆ ಇಮೇಲ್ ಮೂಲಕ ಕಳುಹಿಸಿಕೊಡಿ. ಅಂದಹಾಗೆ ಲೇಖನದೊಂದಿಗೆ ಮಾಡಿದ ಅಡುಗೆಯ ಫೋಟೊ ಹಾಗೂ ನಿಮ್ಮ ಚಿತ್ರ ಕಳುಹಿಸಲು ಮರೆಯದಿರಿ.

USB LIBRARY



ಟುಲಿಪ್ ಗಾರ್ಡನ್
ಬಣ್ಣಗಳ ಲೋಕದಲ್ಲಿ...

ಸ್ವರ್ಗದ ಪ್ರತಿರೂಪದಂತೆ ಕಾಣುವ ನೆದರ್‌ಲೆಂಡ್‌ನ 'ಕ್ಯುಕೆನ್‌ಹಾಫ್' ಟುಲಿಪ್ ತೋಟದ ಚೆಲುವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಾರೆ. ಹೂಗಳ ಬಣ್ಣದೋಕುಳಿಯಲ್ಲಿ ಕಣ್ಮನವನ್ನೂ ತಣಿಸಿಕೊಳ್ಳುತ್ತಾರೆ.

■ ಅವಿನಾಶ್



ಯುರೋಪ್ ಪ್ರವಾಸ ಕೈಗೊಳ್ಳುವ ಪ್ರತಿಯೊಬ್ಬ ಪ್ರಕೃತಿಪ್ರೇಮಿಯ ವೀಕ್ಷಣೆಯ ಕನಸಿನ ಪಟ್ಟಿಯಲ್ಲಿ ನೆದರ್‌ಲೆಂಡ್ಸ್‌ನ ಟುಲಿಪ್ ತೋಟಗಳು ಮೊದಲ ಸಾಲಿನಲ್ಲಿರುತ್ತವೆ. ಇದೇ ವರ್ಷದ ವಸಂತ ಋತುವಿನಲ್ಲಿ ಟುಲಿಪ್ ಗಾರ್ಡನ್ ನೋಡಬೇಕೆಂಬ ನನ್ನ ಬಹುದಿನಗಳ ಕನಸು ನನಸಾಯಿತು. 'ಜಗತ್ತಿನ ಅತಿ ದೊಡ್ಡ ಹೂವಿನ ಉದ್ಯಾನವನ' ಎಂದೇ ಖ್ಯಾತಿ ಪಡೆದಿರುವ ನೆದರ್‌ಲೆಂಡ್ಸ್‌ನ 'ಕ್ಯುಕೆನ್‌ಹಾಫ್' ಟುಲಿಪ್ ಗಾರ್ಡನ್‌ಗೆ ಭೇಟಿ ನೀಡಿದಾಗ ಆದ ಅನುಭವ ರೋಮಾಂಚನಕಾರಿ.

ರಾಜಧಾನಿ ಆಮ್‌ಸ್ಟರ್‌ಡ್ಯಾಮ್‌ನಿಂದ ಕ್ಯುಕೆನ್‌ಹಾಫ್ ಇರುವ ಲಿಸ್ಸೆ ಪಟ್ಟಣಕ್ಕೆ ಹೊರಟಾಗ ದಾರಿಯುದ್ದಕ್ಕೂ ತಂಪಾದ ಗಾಳಿ ಮತ್ತು ಹಸಿರು ಹೊಲಗಳು ಸ್ವಾಗತಿಸಿದವು. ಕ್ಯುಕೆನ್‌ಹಾಫ್ ಗಾರ್ಡನ್‌ನ ಮುಖ್ಯ ದ್ವಾರ ತಲುಪುತ್ತಿದ್ದಂತೆ ಕಿವಿಗೆ ಬಿದ್ದ ಮಧುರವಾದ ಸಾಂಪ್ರದಾಯಿಕ ಡಚ್ ಸಂಗೀತ ಮತ್ತು ಹೂವುಗಳ ಸುವಾಸನೆ ಪ್ರವಾಸದ ಉತ್ಸಾಹವನ್ನು ಇಮ್ಮಡಿಗೊಳಿಸಿತು. ಒಳಗೆ ಹೆಜ್ಜೆ ಇಡುತ್ತಿದ್ದಂತೆ, ಭೂಮಿಯ ಮೇಲಿದ್ದೇನೋ ಅಥವಾ ಬಣ್ಣಗಳ ಲೋಕಕ್ಕೆ ಜಾರಿದ್ದೇನೋ ಎಂಬ ಭ್ರಮೆ ಮೂಡಿತು!

> **ವಿಶ್ವದ ಅತಿ ದೊಡ್ಡ ಹೂವಿನ ತೋಟ**
>
> ಸುಮಾರು 79 ಎಕರೆ ಪ್ರದೇಶದಲ್ಲಿ ಟುಲಿಪ್ ಗಾರ್ಡನ್ ಹರಡಿಕೊಂಡಿದ್ದು, 'ವಿಶ್ವದ ಅತಿ ದೊಡ್ಡ ಹೂವಿನ ತೋಟ' ಎಂದು ಕರೆಸಿಕೊಂಡಿದೆ.

ಸುಮಾರು 79 ಎಕರೆ ವಿಸ್ತೀರ್ಣದ ಈ ಬೃಹತ್ ಉದ್ಯಾನವನದಲ್ಲಿ ಕಂಡ ದೃಶ್ಯಗಳನ್ನು ವರ್ಣಿಸಲು ಅಸಾಧ್ಯ. ಕೆಂಪು, ಹಳದಿ, ಗುಲಾಬಿ, ನೇರಳೆ, ಬಿಳಿ ಹಾಗೂ ಅಪರೂಪದ ಕಡು ಕಪ್ಪು

USSB Library



ಇತಿಹಾಸದ ನೋಟ

15ನೇ ಶತಮಾನದಲ್ಲಿ ಈ ಪ್ರದೇಶವು ಹಸಿರುಮನೆ ಮತ್ತು ಅಡುಗೆಮನೆಗೆ ಬೇಕಾದ ಗಿಡಮೂಲಿಕೆಗಳನ್ನು ಬೆಳೆಸುವ ಜಾಗವಾಗಿತ್ತು. ಹಾಗಾಗಿಯೇ ಇದಕ್ಕೆ 'ಕ್ಯುಕೆನ್‌ಹಾಫ್' (ಅಡುಗೆಮನೆಯ ತೋಟ) ಎಂಬ ಹೆಸರು ಬಂತು. ಮುಂದೆ 1949ರಲ್ಲಿ ಪ್ರಮುಖ ಹೂವಿನ ರಫ್ತುದಾರರು ತಮ್ಮ ಹೂವುಗಳ ಪ್ರದರ್ಶನಕ್ಕಾಗಿ ಇದನ್ನು ಆಧುನಿಕ ಉದ್ಯಾನವನವಾಗಿ ಪರಿವರ್ತಿಸಿದರು.

ಬಣ್ಣದ ಟುಲಿಪ್ ಹೂವುಗಳು ಸಾಲುಸಾಲಾಗಿ ಶಿಸ್ತಿನಿಂದ ನಗುತ್ತಿದ್ದವು. ಬಣ್ಣ ಬಣ್ಣದ ಕಂಬಳಿಗಳನ್ನು ಭೂಮಿಗೆ ಹೊದಿಸಿದಂತೆ ಕಾಣುವ ಈ ಹೂವಿನ ಹಾಸಿಗೆಗಳು ಪ್ರಕೃತಿಯ ಸುಂದರ ರೂಪಕ್ಕೆ ಸಾಕ್ಷಿಯಾಗಿದ್ದವು. ಅಲ್ಲಿನ ಮಾರ್ಗದರ್ಶಕರು ತಿಳಿಸಿದಂತೆ, ಪ್ರತಿ ವರ್ಷ ಇಲ್ಲಿ ಬರೋಬ್ಬರಿ 70 ಲಕ್ಷಕ್ಕೂ ಹೆಚ್ಚು ಹೂವಿನ ಗಿಡಗಳನ್ನು ಮಾಲಿಗಳೇ ನಾಟಿ ಮಾಡುತ್ತಾರೆ! ಅದರಲ್ಲಿ 800ಕ್ಕೂ ಹೆಚ್ಚು ವೈವಿಧ್ಯದ ಟುಲಿಪ್ಸ್ ತಳಿಗಳಿವೆ ಎಂಬ ವಿಷಯ ಕೇಳಿ ನನ್ನ ಆಶ್ಚರ್ಯ ಅಸದಳವಾಯಿತು.

ಟುಲಿಪ್ ಗದ್ದೆಗಳಲ್ಲಿ...

ಉದ್ಯಾನವನದ ಒಂದು ತುದಿಯಲ್ಲಿ ನೆದರ್ಲೆಂಡ್ಸ್ ಸಾಂಪ್ರದಾಯಿಕ ಹೆಗ್ಗುರುತಾದ ಬೃಹತ್ ಗಾಳಿ ಗಿರಣಿ ಇದೆ. ಅದರ ಮೇಲಕ್ಕೆ ಹತ್ತಿ ಸುತ್ತಲೂ ಕಣ್ಣು ಹಾಯಿಸಿದಾಗ ಕಂಡ ದೃಶ್ಯ ನನ್ನ ಜೀವಮಾನದ ಅತ್ಯುತ್ತಮ ಕ್ಷಣ. ಕ್ಯುಕೆನ್‌ಹಾಫ್ ತೋಟದ ಆಚೆಗೂ ಮೈಲುಗಟ್ಟಲೆ ಹರಡಿಕೊಂಡಿದ್ದ ಟುಲಿಪ್ ಹೂವಿನ ಗದ್ದೆಗಳು (Tulip Fields) ಬಣ್ಣದ ಪಟ್ಟಿಗಳಂತೆ ಗೋಚರಿಸುತ್ತಿದ್ದವು. ಅಲ್ಲಿಂದ ಇಳಿದು ಬಂದು, ಉದ್ಯಾನವನದ ಒಳಗಿರುವ ಸಣ್ಣ ಕೆರೆಯಲ್ಲಿ ಈಜುತ್ತಿದ್ದ ಹಂಸಗಳು ಮತ್ತು ಹೂವಿನಿಂದ ಅಲಂಕರಿಸಲಾದ ಬೋಟ್‌ಗಳನ್ನು ನೋಡುತ್ತಾ ಸಮಯ ಕಳೆದದ್ದೇ ತಿಳಿಯಲಿಲ್ಲ.



ವರ್ಷದಲ್ಲಿ ಕೇವಲ 8 ವಾರಗಳು ಮಾತ್ರ (ಮಾರ್ಚ್ ಮಧ್ಯದಿಂದ ಮೇ ಮಧ್ಯದವರೆಗೆ) ಸಾರ್ವಜನಿಕರಿಗೆ ಮುಕ್ತವಾಗಿರುವ ಈ ನಿಸರ್ಗದ ಅದ್ಭುತವನ್ನು ಕಣ್ತುಂಬಿಕೊಳ್ಳಲು ಜಗತ್ತಿನ ಮೂಲೆ ಮೂಲೆಗಳಿಂದ ಪ್ರವಾಸಿಗರು ಬಂದಿದ್ದರು. ಟುಲಿಪ್ಸ್ ಮಾತ್ರವಲ್ಲದೆ ಹಯಾಸಿಂತ್ಸ್ ಮತ್ತು ಡ್ಯಾಫೊಡಿಲ್ಸ್ ಹೂವುಗಳ ಸುಗಂಧ ಇಡೀ ದಿನ ನನ್ನನ್ನು ಆವರಿಸಿತ್ತು. ಸಂಜೆ ತೋಟದಿಂದ ಹೊರಬರುವಾಗ ಪ್ರಕೃತಿಯ ಈ ವರ್ಣರಂಜಿತ ಕಲಾಕೃತಿಗೆ ಮನಸ್ಸಿನಲ್ಲೇ ನಮಸ್ಕರಿಸಿದೆ. ಕ್ಯುಕೆನ್‌ಹಾಫ್ ಕೇವಲ ಪ್ರವಾಸಿತಾಣವಲ್ಲ, ಅದು ಕಣ್ಣು ಮತ್ತು ಮನಸ್ಸನ್ನು ತಣಿಸುವ ಬಣ್ಣಗಳ ಸ್ವರ್ಗ!

ನೆದರ್‌ಲೆಂಡ್ಸ್‌ನ ಟುಲಿಪ್ ಗಾರ್ಡನ್ ಕೇವಲ ಒಂದು ಪ್ರವಾಸಿ ತಾಣವಲ್ಲ. ಇದು ಮಾನವನ ಪರಿಶ್ರಮ ಮತ್ತು ಪ್ರಕೃತಿಯ ಸೌಂದರ್ಯ ಸಂಗಮಿಸಿದ ಅದ್ಭುತ ಕಲಾಕೃತಿ.

ಟುಲಿಪ್ಸ್ ವೈವಿಧ್ಯ

ಪ್ರತಿ ವರ್ಷ ಇಲ್ಲಿ ಸುಮಾರು 70 ಲಕ್ಷಕ್ಕೂ ಹೆಚ್ಚು ಹೂವಿನ ಗಿಡಗಳನ್ನು ನೆಡಲಾಗುತ್ತದೆ. ಬರೋಬ್ಬರಿ 800ಕ್ಕೂ ಹೆಚ್ಚು ತಳಿಯ ವಿವಿಧ ಬಣ್ಣಗಳ ಟುಲಿಪ್ ಹೂವುಗಳನ್ನು ಕಾಣಬಹುದು. ಟುಲಿಪ್ಸ್ ಮಾತ್ರವಲ್ಲದೆ ಹಯಾಸಿಂತ್ಸ್, ಡ್ಯಾಫೊಡಿಲ್ಸ್, ಮತ್ತು ಆರ್ಕಿಡ್ ಹೂವುಗಳು ಇಲ್ಲಿನ ಆಂದವನ್ನು ಹೆಚ್ಚಿಸುತ್ತವೆ.

KSB Library



ಸಸ್ಯಪ್ರೇಮಿಗಳಿಗೆ ಕೊಡುಗೆ
ಕೊಕೆಡಾಮಾ

■ ಮುರಲೀಧರ ಕುಲಕರ್ಣಿ

ಗಿಡಮರಗಳ ಹಸಿರು ಮನಸ್ಸಿಗೆ ಹೊಸ ಚೈತನ್ಯವನ್ನು ತುಂಬಬಲ್ಲದು. ಇದೇ ಕಾರಣ, ಗಾರ್ಡನಿಂಗ್‌ನಲ್ಲಿ ತೊಡಗಿಕೊಳ್ಳುವವರ ಸಂಖ್ಯೆಯೂ ಅಧಿಕವಾಗುತ್ತಿದೆ.

ಗಿಡಗಳನ್ನು ಬೆಳೆಸಲು ಮನೆಯ ಸುತ್ತ ಸ್ಥಳವಿಲ್ಲದವರು ಟೆರೇಸಿನ ಮೇಲೆ ಹೂ ಗಿಡಗಳನ್ನು ಮತ್ತು ತರಕಾರಿಗಳನ್ನು ಬೆಳೆದು 'ಟೆರೇಸ್ ಗಾರ್ಡನ್' ನಿರ್ಮಿಸುತ್ತಿದ್ದಾರೆ. ಇನ್ನೂ ಕೆಲವರು 'ಬೋನ್ಸಾಯ್' ವಿಧಾನದಲ್ಲಿ ಹಣ್ಣಿನ ಮರಗಳನ್ನು ಕೂಡ ಬೆಳೆಸುತ್ತಿದ್ದಾರೆ. ಇದು ಸ್ವಂತ ಮನೆಯನ್ನು ಹೊಂದಿದ್ದವರಿಗೆ ಸಾಧ್ಯ. ಆದರೆ ಫ್ಲಾಟ್ ಅಥವಾ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವರಿಗೆ ಸಸ್ಯಗಳನ್ನು ಬೆಳೆಯಲು ಜಾಗದ ಕೊರತೆ ಇರುತ್ತದೆ.

ಇದೇ ಕಾರಣಕ್ಕೆ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರು ಮನೆಯ ಒಳಾಂಗಣದಲ್ಲಿಯೇ ಸಸ್ಯಗಳನ್ನು ಬೆಳೆಸುತ್ತಾರೆ. ಹಾಗೆ ಒಳಾಂಗಣದಲ್ಲಿ ಗಿಡಗಳನ್ನು ಬೆಳೆಸಲು ಬಯಸುವವರಿಗೆ 'ಕೊಕೆಡಾಮಾ' ವಿಧಾನ ಸರಳ ಸುಲಭವೆನಿಸುತ್ತಿದೆ.

ಈ ವಿಧಾನದಲ್ಲಿ ಅಪಾರ್ಟ್‌ಮೆಂಟ್‌ನ ಬಾಲ್ಕನಿ ಅಥವಾ ಮನೆಯ ಒಳಾಂಗಣದಲ್ಲಿಯೇ ಚಿಕ್ಕ ಚಿಕ್ಕ ಸಸ್ಯಗಳನ್ನು ಬೆಳೆಸಬಹುದಾಗಿದೆ. ಮನೆಯ ಬೆಡ್‌ರೂಂನಲ್ಲಿ, ಪೋರ್ಟಿಕೋ, ಸ್ಟಡಿ ರೂಮಿನಲ್ಲಿ ಈ ಬಗೆಯಲ್ಲಿ ಸಸ್ಯಗಳನ್ನು ಬೆಳೆಸಬಹುದಾಗಿದೆ.

'ಕೊಕೆಡಾಮಾ' ಎಂಬುದು ಒಂದು ಜಪಾನಿ ಪದ. ಈ ಪದ ಕೊಕೆ ಮತ್ತು ಡಾಮಾ ಎಂಬ ಎರಡು ಪದಗಳ ಸಂಯೋಗದಿಂದ ಉಂಟಾಗಿದೆ. ಕೊಕೆ ಎಂದರೆ ನಾರು ಮತ್ತು ಡಾಮಾ ಎಂದರೆ ಚೆಂಡು ಎಂದರ್ಥ. ತೆಂಗಿನ ನಾರು ಮತ್ತು ತೆಂಗಿನ ನಾರಿನ ಹೊಟ್ಟು (ಕೊಕೊಪಿಟ್) ಇವುಗಳನ್ನು ಬಳಸಿ ನೆರಳಿನಲ್ಲಿಯೇ ಸಸ್ಯಗಳನ್ನು ಬೆಳೆಸುವ ಈ ವಿಧಾನ ಈಗೀಗ ಹೆಚ್ಚು ಪ್ರಚಲಿತದಲ್ಲಿದೆ.

ಕೊಕೆಡಾಮಾ ಚೆಂಡನ್ನು ತಯಾರಿಸಲು ಒದ್ದೆ ಮಣ್ಣು, ಜೈವಿಕ ಗೊಬ್ಬರ ಮತ್ತು ತೆಂಗಿನ ನಾರಿನ ಹೊಟ್ಟು ಈ ಮೂರು ಸಾಮಗ್ರಿಗಳು ಬೇಕು. ಇವನ್ನು ಚೆನ್ನಾಗಿ ಮಿಶ್ರಣ ಮಾಡಿ ನೀರನ್ನು ಬೆರೆಸಿ ಒಂದು ಚೆಂಡನ್ನು ತಯಾರಿಸಲಾಗುತ್ತದೆ. ಈ ಚೆಂಡಿನಲ್ಲಿ ಸಸಿ ನೆಟ್ಟು ಅದರ ಸುತ್ತಲೂ ಹಲವು ಸುತ್ತು ತೆಂಗಿನ ನಾರು ಅಥವಾ ಸೆಣಬಿನ ನಾರನ್ನು ಸುತ್ತಿ ಒಳಗಿನ ಮಣ್ಣು ಹೊರ ಹೋಗದಂತೆ ಮಾಡಲಾಗುತ್ತದೆ. ತಂತಿ ಅಥವಾ ದಾರದ ಸಹಾಯದಿಂದ ಬೇಕಾದ ಸ್ಥಳದಲ್ಲಿ ನೇತು ಹಾಕಬಹುದು, ಮೇಜಿನ ಮೇಲೆ, ಟ್ರೇನಲ್ಲಿಯೂ ಇಡಬಹುದು. ಹೀಗೆ ತಯಾರಿಸಿದ ಚೆಂಡನ್ನೇ 'ಕೊಕೆಡಾಮಾ' ಎನ್ನುತ್ತಾರೆ. ಇಂತಹ ನಾಲ್ಕೈದು ಚೆಂಡುಗಳನ್ನು ಒಂದೇ ಕಡೆ ನೇತು ಹಾಕಿದರೆ ನೋಡಲು ತುಂಬಾ ಸುಂದರವಾಗಿ ಕಾಣುತ್ತದೆ.

ಸುತ್ತಲೂ ತೆಂಗಿನ ನಾರನ್ನು ಸುತ್ತಿರುವುದರಿಂದ ಚೆಂಡಿನಲ್ಲಿರುವ ಮಣ್ಣು ಹರಿದು ಹೋಗುವುದಿಲ್ಲ. ಮಣ್ಣಿನ ಜೊತೆಗೆ ಬೆರೆಸಿದ ತೆಂಗಿನ ನಾರಿನ ಹೊಟ್ಟು ತೇವಾಂಶವನ್ನು ಹೆಚ್ಚಿನ ಸಮಯದವರೆಗೆ ಹಿಡಿದಿಡುತ್ತದೆ. ಸಾಮಾನ್ಯವಾಗಿ ನೆರಳಿನಲ್ಲಿ ಬೆಳೆಯುವ ಸಸ್ಯಗಳನ್ನೇ ಕೊಕೆಡಾಮಾ ವಿಧಾನಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಮನಿಪ್ಲಾಂಟ್, ಸ್ನೇಕ್ ಪ್ಲಾಂಟ್, ಸ್ಪೈಡರ್ ಪ್ಲಾಂಟ್, ನಾನಾ ಬಗೆಯ ಫರ್ನ್‌ಗಳು ಈ ವಿಧಾನಕ್ಕೆ ಸೂಕ್ತ. ಕೊಕೆಡಾಮಾ ವಿಧಾನದಲ್ಲಿ ಬೆಳೆಸುವ ಸಸ್ಯಗಳಿಗೆ ತುಂಬಾ ಕಡಿಮೆ ನೀರು ಬೇಕಾಗುತ್ತದೆ. ಇವು ನೆರಳಿನಲ್ಲಿ ಬೆಳೆಯುವುದರಿಂದ ನೀರು ಆವಿಯಾಗಿ ಹೋಗುವ ಸಾಧ್ಯತೆ ಕಡಿಮೆ. ಹೆಚ್ಚು ನೀರು ಹಾಕಿದರೆ ಕೊಳೆತುಹೋಗುವ ಸಂಭವವಿರುತ್ತದೆ. ನಿಗಾ ವಹಿಸಿದರೆ ಈ ಸಸ್ಯಗಳು ತುಂಬಾ ದಿನ ಬಾಳಬಲ್ಲವು.

ಬೋನ್ಸಾಯ್ ಮತ್ತು ಕೊಕೆಡಾಮಾ ಎರಡೂ ವಿಧಾನಗಳು ಗಿಡ ಬೆಳೆಸುವ ಜಪಾನಿನ ಪದ್ಧತಿಗಳೇ ಆದರೂ ಎರಡಲ್ಲಿಯೂ ತುಂಬಾ ಅಂತರವಿದೆ. ಬೋನ್ಸಾಯ್ ಗಿಡಗಳನ್ನು ಬಿಸಿಲಿನಲ್ಲಿ ಬೆಳೆಸಬೇಕಾಗುತ್ತದೆ ಮತ್ತು ಅವು ಹೆಚ್ಚು ಎತ್ತರ ಬೆಳೆಯದಂತೆ ತಡೆಯಲು ಕಾಲಕಾಲಕ್ಕೆ ಪಾಟಿನಿಂದ ಹೊರತೆಗೆದು ಬೇರುಗಳನ್ನು ಕತ್ತರಿಸಿ ಮಣ್ಣನ್ನು ಬದಲಾಯಿಸಬೇಕಾಗುತ್ತದೆ. ಕೊಕೆಡಾಮಾ ವಿಧಾನದಲ್ಲಿ ಈ ತೊಂದರೆ ಇರುವುದಿಲ್ಲ. ಈ ಸಸಿಗಳಿಗೆ ಮಣ್ಣು ಯಾವಾಗಲೂ ಒದ್ದೆಯಾಗಿದ್ದರೆ ಸಾಕು. ಕೊಕೆಡಾಮಾ ಚೆಂಡಿಗೆ ಆಗಾಗ ನೀರನ್ನು ಸಿಂಪಡಿಸುತ್ತಿರಬೇಕು. ಕೊಕೆಡಾಮಾ ಸಸಿಗಳನ್ನು ಬೆಳೆಸುವುದು ಹೆಚ್ಚು ಶ್ರಮವಿಲ್ಲದ ಕೆಲಸ. ಈ ಸಸ್ಯಗಳು ಮನೆಯ ಒಳಾಂಗಣದಲ್ಲಿ ಬೆಳೆಯುವುದರಿಂದ ಬೇಸಿಗೆಯಲ್ಲಿ ಮನೆಯನ್ನು ತಂಪಾಗಿಡಲು ಕೂಡ ಸಹಾಯ ಮಾಡುತ್ತವೆ. ■



Sudha Library

ಈ ವರ್ಷ ಮಳೆ ಕ್ಷೀಣವಾಗಿ ಬೇಳೆ ಕಾಳು, ಅಕ್ಕಡಿ ಬೆಳೆಗಳೇ ಬೆಳೆಯದಿರುವ ಪರಿಸ್ಥಿತಿ ಎದುರಾಗಿದೆ. ಇಂಥ ಸಂದರ್ಭದಲ್ಲಿ ಹಾವೇರಿ, ಧಾರವಾಡ ಜಿಲ್ಲೆಯ ಹೊಲಗಳಲ್ಲಿ ಭತ್ತದ ಪೈರುಗಳು ನಳನಳಿಸುತ್ತಿವೆ. ಒಣಭೂಮಿ ಪದ್ಧತಿಯಲ್ಲಿ (ಕೂರಿಗೆ ಬಿತ್ತನೆ) ಬೆಳೆದಿರುವ ಈ ಮಳೆಯಾಶ್ರಿತ ಭತ್ತದ ಕೃಷಿಯಲ್ಲಿ ದೇಸಿ ತಳಿಗಳು ಸ್ಥಾನಪಡೆದಿವೆ.

■ ಗಾಣದಾಳು ಶ್ರೀಕಂಠ



ಚಿತ್ರಗಳು: ಕಾಂಚನಮೂರ್

ಮಳೆಯಾಶ್ರಯದಲ್ಲಿ ದೇಸಿ ಭತ್ತದ ರಕ್ಷಣೆ

JANASHRUTHI Library

ಈ ಬಾರಿ ಮುಂಗಾರು ಕೈಕೊಟ್ಟಿದೆ. ಜಲಾಶಯಗಳಲ್ಲಿ ನೀರು ಕಡಿಮೆಯಾಗಿದೆ. ನೀರಾವರಿ ಆಶ್ರಿತ ಭತ್ತದ ಕೃಷಿಕರು ಗದ್ದೆಗೆ ಇಳಿಯುತ್ತಿಲ್ಲ, ನೀರು ನಿಲ್ಲಿಸುತ್ತಿಲ್ಲ. ಪೈರು ನಾಟಿ ಮಾಡುವ ಯೋಚನೆಯನ್ನೂ ಮಾಡಿಲ್ಲ. ಆದರೆ, ಧಾರವಾಡ ಜಿಲ್ಲೆ ಕುಂದುಗೋಳ ಮತ್ತು ಹಾವೇರಿ ಜಿಲ್ಲೆಯ ಶಿಗ್ಗಾವಿ ಭಾಗದ ಹತ್ತಾರು ಗ್ರಾಮಗಳ ನೂರಾರು ರೈತರ ಹೊಲಗಳಲ್ಲಿನ ಸಾಲು ಭತ್ತದ ಪೈರುಗಳು ಹಸಿರಿನಿಂದ ನಳನಳಿಸುತ್ತಿವೆ. ಕೆಲವೆಡೆ ರೈತರು ಎಡೆ ಕುಂಟೆ ಹೊಡೆದು ಕಳೆ ತೆಗೆಯುತ್ತಿದ್ದಾರೆ. 'ಇನ್ನೊಂದು ವಾರದಲ್ಲಿ ಹದ ಮಳೆಯಾದರೆ ಪೈರುಗಳು ಕಾಳು ಕಟ್ಟುತ್ತವೆ. 18 ರಿಂದ 19 ಚೀಲ (ಅಂದಾಜು 15 ಕ್ವಿಂಟಲ್) ಇಳುವರಿ ಗ್ಯಾರಂಟಿ' ಎಂಬ ವಿಶ್ವಾಸದಲ್ಲಿದ್ದಾರೆ.

ಇವು ಮಳೆಯಾಶ್ರಿತ ಒಣಭೂಮಿ ಪದ್ಧತಿಯಲ್ಲಿ ಭತ್ತ ಬೆಳೆಯುವ ಹಳ್ಳಿಗಳು. ಮಲೆನಾಡ ಸೆರಗಿನಲ್ಲಿರುವ ಧಾರವಾಡ ಜಿಲ್ಲೆಯ ಕಲಘಟಗಿ, ಅಳ್ನಾವರ, ಕುಂದಗೋಳ ಹಾಗೂ ಹಾವೇರಿ ಜಿಲ್ಲೆಯ ಶಿಗ್ಗಾವಿ ಭಾಗ ಹಾಗೂ ಮುಂಡಗೋಡು ಗಡಿ ಭಾಗಕ್ಕೆ ಹೊಂದಿ ಕೊಂಡಿರುವ ಗ್ರಾಮಗಳಲ್ಲಿ ಅನಾದಿಕಾಲದಿಂದಲೂ ಒಣಭೂಮಿ ಪದ್ಧತಿಯಲ್ಲಿ (Dry sowing) ಭತ್ತ ಬೆಳೆಯುತ್ತಿದ್ದಾರೆ. ಕೂರಿಗೆಯಲ್ಲಿ ಸಾಲು ಬಿತ್ತನೆ ಮಾಡುತ್ತಿದ್ದರಿಂದ 'ಕೂರಿಗೆ ಬಿತ್ತನೆ ಪದ್ಧತಿ' ಎನ್ನುತ್ತಿದ್ದರು.

ಕುಂದಗೋಳ ತಾಲ್ಲೂಕಿನ ತೀರ್ಥ, ಮಳಲಿ, ಕುಂಕೂರು, ಹನುಮನಹಳ್ಳಿ ಮತ್ತು ಹಾವೇರಿ ಜಿಲ್ಲೆಯ ತಿಮ್ಮಾಪುರ, ನೀರಲಿಗೆ, ಚಿಕ್ಕಬೆಂಡಿಗೇರಿ, ಹಿರೇಬೆಂಡಿಗೇರಿ, ಅಡಿವಿ ಸೋಮಾಪುರ, ಮಡ್ಲಿ, ಕಡಹಳ್ಳಿ ಸುತ್ತಲಿನ ಹಳ್ಳಿಗಳಲ್ಲಿ ಸಾವಿರಾರು ಎಕರೆಯಲ್ಲಿ ಅದೇ ಪದ್ಧತಿಯಲ್ಲಿ ಭತ್ತ ಬೆಳೆಯುತ್ತಿದ್ದಾರೆ.

ಮೇ ತಿಂಗಳಲ್ಲಿ ಬಿತ್ತನೆ

ಈ ಗ್ರಾಮಗಳಲ್ಲಿ ಪ್ರತಿ ವರ್ಷ ಮೇ ಜೂನ್ ನಡುವೆ ನೆಲದ ತೇವ ನೋಡಿಕೊಂಡು, ಉಳುಮೆ ಮಾಡಿ, ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿ ಸಿದ್ಧ ಮಾಡಿ, ಒಣಭೂಮಿ ಪದ್ಧತಿಯಲ್ಲಿ ಸಾಲು ಬಿತ್ತನೆ ಮಾಡುತ್ತಾರೆ. 'ಮಳೆ ಬೀಳಲಿ ಬೀಳದೇ ಇರಲಿ, ಮೇ ತಿಂಗಳಾಂತ್ಯದೊಳಗೆ ಬಿತ್ತನೆ ಮುಗಿಸುತ್ತಾರೆ. ಈ ವರ್ಷ ಮಳೆ ಸರಿಯಾಗಿ ಬರಲಿಲ್ಲ. ಆದರೂ, ನೆಲದ ತೇವಕ್ಕೆ ಗದ್ದೆಗಳಲ್ಲೆಲ್ಲ ಪೈರುಗಳು ನಳನಳಿಸುತ್ತಿವೆ' ಎನ್ನುತ್ತಾರೆ 'ಸಹಜ ಸಮೃದ್ಧ'

ಸಂಸ್ಥೆಯ ಶಾಂತಕುಮಾರ್. ಇವರು ಈ ಭಾಗದಲ್ಲಿ ದೇಸಿ ಭತ್ತದ ತಳಿ ಸಂರಕ್ಷಣೆಗಾಗಿ ರೈತರೊಂದಿಗೆ ಕೆಲಸ ಮಾಡುತ್ತಿದ್ದಾರೆ.

ದೇಸಿ ಭತ್ತದ ತಳಿಗಳ ನಾಟಿ

ಬಹುಪಾಲು ರೈತರು ಮಾರನವಮಿ ದೊಡ್ಡಿಗ, ಗಿಣಿಸಾಲಿ, ಅಂತರಸಾಲಿ, ಉದರಸಾಲಿ, ಸೋಮಸಾಲಿ, ಭೂ ಸಾಲಿ, ಗಿಡ್ಡ ದೊಡ್ಡಿಗದಂತಹ ದೇಸಿ ಭತ್ತದ ತಳಿಗಳನ್ನೇ ಬಿತ್ತನೆ ಮಾಡುತ್ತಾರೆ. ಇವೆಲ್ಲ ಐದು ತಿಂಗಳ ಬೆಳೆಗಳು. ಮೇ–ಜೂನ್ ನಡುವೆ ಬಿತ್ತಿದರೆ ದೀಪಾವಳಿ ವೇಳೆಗೆ ಕೊಯ್ಲಿಗೆ ಬರುತ್ತದೆ. ಜುಲೈನಲ್ಲಿ ಸಾಮಾನ್ಯವಾಗಿ ಮಳೆ ಬರುತ್ತದೆ.

'ನಾಟಿ ತಳಿಗಳು ಒಣಭೂಮಿ ಪದ್ಧತಿಗೆ ಹೊಂದಿಕೊಂಡು ಬೆಳೆಯುತ್ತವೆ. ಒಂದು ಸಾರಿ ಕೊಟ್ಟಿಗೆ ಗೊಬ್ಬರ ಹಾಕಿದರೆ ಸಾಕು. ರೋಗ ರುಜಿನ ಕಡಿಮೆ. ಕಳೆ ತೆಗೆಯಬೇಕಷ್ಟೆ. ಈ ಬಾರಿಯೂ ಮಳೆ ಇಲ್ಲ ನೋಡ್ರಿ.. ಅದಕ್ಕೇ ಮಾರ್ನಮಿ ದೊಡ್ಡಿಗ ತಳಿನೇ ಬಿತ್ತೀದೀನಿ. ಕೂರಿಗೆನಾಗೆ ಬಿತ್ತೋದ್ರಿಂದ ನೀರು ನಿಲ್ಲಿಸೋ ಅವಶ್ಯಕತೆ ಇಲ್ರೀ..' ಎನ್ನುತ್ತಾರೆ ತಿಮ್ಮಾಪುರದ ಕೃಷಿಕ ಪಾಂಡು ಪವಾರ. ಇವರು ಈ ವರ್ಷ ಐದು ಎಕರೆಯಲ್ಲಿ ಬಿತ್ತನೆ ಮಾಡಿದ್ದಾರೆ.

ಎಲ್ಲ ರೈತರು ನಾಟಿ ರಾಸುಗಳನ್ನು ಸಾಕಿದ್ದು,ಗೊಬ್ಬರಕ್ಕೆ ಕೊರತೆಯಿಲ್ಲ. ಇತ್ತೀಚೆಗೆ ಕೆಲವರು ಕೊಟ್ಟಿಗೆ ಗೊಬ್ಬರದ ಜತೆಗೆ ಜೀವಾಮೃತ, ಗೋಕೃಪಾಮೃತ, ಘನಜೀವಾಮೃತದಂತಹ ಜೈವಿಕ ಒಳಸುರಿಗಳನ್ನು ಬಳಸುತ್ತಿದ್ದಾರೆ. ಜತೆಗೆ ಹೊಲಕ್ಕೆ ಕೆರೆ ಮಣ್ಣನ್ನು ಏರಿಸುತ್ತಿದ್ದಾರೆ. 'ಆದರೆ, ರಸಗೊಬ್ಬರ, ಕಳೆನಾಶಕ, ಕೀಟನಾಶಕದಂತಹ ಒಳಸುರಿ ಬಳಸುವುದಿಲ್ಲ' ಎನ್ನುತ್ತಾರೆ ರೈತರು.

ದಪ್ಪ ಅಕ್ಕಿಯೇ ಹೆಚ್ಚು

ನಾಟಿ ತಳಿಗಳಲ್ಲಿ ಮಾರನವಮಿ ದೊಡ್ಡಿಗ ಗಿಡ್ಡ ತಳಿ. ನಾಲ್ಕು ಅಡಿ ಎತ್ತರ ಬೆಳೆಯುತ್ತದೆ. ಅಕ್ಕಿ ಕೆಂಪು ಬಣ್ಣ. ದಪ್ಪ ಅಕ್ಕಿ. 'ಅಂತರಸಾಲಿ, ಉದರಸಾಲಿ, ಗಿಣಿಸಾಲಿ ತಳಿಗಳು ಎತ್ತರಕ್ಕೆ ಬೆಳೆಯುತ್ತವೆ. ಅಕ್ಕಿ ದಪ್ಪ, ಬೆಳ್ಳಗಿರುತ್ತವೆ. ಮಾರನವಮಿ ದೊಡ್ಡಿಗದ ಅಕ್ಕಿಯ ಕಜ್ಜಾಯ, ಪಾಯಸ ಬಲುರುಚಿಯಾಗಿರುತ್ತದೆ. ಜ್ವರ ಬಂದವರಿಗೆ ಈ ಅಕ್ಕಿಯ ಗಂಜಿ ಮಾಡಿಕೊಡುತ್ತಾರೆ – ವಿವರಿಸುತ್ತಾರೆ ಶಾಂತಕುಮಾರ್.

ನಾಟಿ ತಳಿಗಳು ಎಕರೆಗೆ ಕನಿಷ್ಠ 14 ರಿಂದ 15 ಕ್ವಿಂಟಲ್‌ವರೆಗೆ ಇಳುವರಿ ಕೊಡುತ್ತವೆ. ಬೆಳೆದವರು ಮನೆ ಬಳಕೆಗೆ ಬೇಕಾಗುವಷ್ಟು ಇಟ್ಟುಕೊಂಡು ಉಳಿದಿದ್ದನ್ನು ಮಾರಾಟ ಮಾಡುತ್ತಾರೆ. ಕಳೆದ ವರ್ಷ ಕ್ವಿಂಟಲ್‌ಗೆ ₹3 ಸಾವಿರದವರೆಗೂ ಬೆಲೆ ಸಿಕ್ಕಿದೆ. ಕೇರಳ, ಮಂಗಳೂರು ಮಾರುಕಟ್ಟೆಯಲ್ಲಿ ಬೇಡಿಕೆಯಿದ್ದು, ದೊಡ್ಡಿಗದಂತಹ ಕೆಂಪಕ್ಕಿಯನ್ನು ಕುಚ್ಚಲಕ್ಕಿ ತಯಾರಿಕೆಗಾಗಿ ಖರೀದಿಸುತ್ತಾರೆ ಎಂಬುದು ಸ್ಥಳೀಯರ ಮಾತು.





'ಸಮುದಾಯ ಅಕ್ಕಿ ಗಿರಣಿ' ಪ್ರಯತ್ನ

ಧಾರವಾಡ, ಹಾವೇರಿಯ ಕೆಲವು ಭಾಗ ಮತ್ತು ಮುಂಡಗೋಡು ಸುತ್ತಾ ಬಹಳ ಹಿಂದಿನಿಂದಲೂ ಈ ಪದ್ಧತಿ ಇದೆ. ಬೀಜ ಬಿತ್ತುವಾಗ ಒಣಭೂಮಿ, ನಂತರದಲ್ಲಿ ಮಳೆ ಬಂದು ಹೊಲಗಳಲ್ಲಿ ನೀರು ನಿಲ್ಲುತ್ತದೆ. ಮಳೆ ವ್ಯತ್ಯಾಸ, ಒಪ್ಪಂದದ ಕುಂಠಿ ಕೃಷಿ ಹೆಚ್ಚಾಗುತ್ತಿರುವ ಕಾರಣ ನೂರಾರು ಎಕರೆ ಒಣಭೂಮಿ ಭತ್ತದ ಗದ್ದೆಗಳು ರಾಸಾಯನಿಕ ಕುಂಠಿ ಕೃಷಿಗೆ ಪರಿವರ್ತಿತವಾಗಿವೆ. ಇಂಥ ಹಲವು ಕಾರಣಗಳಿಂದ ಒಣಭೂಮಿ ಭತ್ತದ ಕೃಷಿ ಕ್ಷೀಣಿಸುತ್ತಿದೆ' ಎನ್ನುತ್ತಾರೆ 'ಸಹಜ ಸಮೃದ್ಧ' ಸಾವಯವ ಕೃಷಿಕರ ಬಳಗದ ಸಂಚಾಲಕ ಜೆ.ಕೃಷ್ಣಪ್ರಸಾದ್.

ಆದರೂ ಕುಂದಗೋಳ ಮತ್ತು ಶಿಗ್ಗಾವಿ ಭಾಗದಲ್ಲಿ ಒಣಭೂಮಿ ಭತ್ತದ ಕೃಷಿ ಉಳಿದಿದೆ. ಆ ರೈತರಿಗೆ ದೇಸಿ ಭತ್ತದ ಸಣ್ಣ ತಳಿಗಳ ಬೀಜಗಳನ್ನು ಪೂರೈಸಿದ್ದೇವೆ. ದೇಸಿ ಅಕ್ಕಿಗೆ ಮಾರುಕಟ್ಟೆ ಕಲ್ಪಿಸುವ ಪ್ರಯತ್ನ ಮಾಡಿದ್ದೇವೆ. 'ಸಮುದಾಯ ಅಕ್ಕಿ ಗಿರಣಿ ಸ್ಥಾಪಿಸುವ ಪ್ರಯತ್ನವೂ ನಡೆಯುತ್ತಿದೆ' ಎನ್ನುತ್ತಾರೆ.

'ಒಣಭೂಮಿ ಭತ್ತ' ಬಿಡದ ರೈತರು

ಈ ಹಳ್ಳಿಗಳ ಸುತ್ತಾ, ಮೆಕ್ಕೆಜೋಳ (ಗೋವಿನ ಜೋಳ), ಕಬ್ಬು ಬೆಳೆಯುವವರ ಸಂಖ್ಯೆ ಅಧಿಕವಾಗಿದೆ. ಒಪ್ಪಂದ ಕುಂಠಿ ಕೃಷಿಯೂ ಇದೆ. ರೈತರು ಅವುಗಳತ್ತ ಆಕರ್ಷಣೆಗೆ ಒಳಗಾಗದೇ ಭತ್ತದ ಕೃಷಿಯನ್ನು ಉಳಿಸಿಕೊಂಡಿರುವುದು ವಿಶೇಷ.

'ಗೋವಿನ ಜೋಳಕ್ಕಿಂತ, ಭತ್ತದ ಕೃಷಿಯಲ್ಲಿ ಹಣವೂ ಇದೆ, ಧಾನ್ಯವೂ ಇದೆ. ಧಾನ್ಯ ಮನೆಗೆ, ಮಾರಾಟಕ್ಕಾದರೆ, ಹುಲ್ಲು ದನಕ್ಕೆ ಮೇವಾಗುತ್ತದೆ. ಮಳೆ ಕಡಿಮೆಯಾದರೂ ಸಹಿಸಿಕೊಳ್ಳುವ ಗುಣವಿರುವುದು ಮತ್ತು ಮಾರುಕಟ್ಟೆಯ ಚಿಂತೆ ಇಲ್ಲದ್ದರಿಂದ ಜನರು ಈ ಪದ್ಧತಿಯನ್ನು ಮುಂದುವರಿಸಿದ್ದಾರೆ' ಎನ್ನುವುದು ಶಾಂತಕುಮಾರ್ ಅಭಿಪ್ರಾಯ.

'ಸಹಜ ಸಮೃದ್ಧ' ಸಂಸ್ಥೆಯು ಇಲ್ಲಿನ ರೈತರಿಗೆ ಸ್ಥಳೀಯ ತಳಿಗಳ ಜೊತೆಗೆ ಎಚ್‌ಎಂಟಿ, ಸಿದ್ದಸಣ್ಣ, ಗಂಧಸಾಲೆ, ಬರ್ಮ ಬ್ಲಾಕ್, ಕೆಂಪು ಸಣ್ಣ ಮತ್ತು ನವರದಂತಹ ದೇಸಿ ಭತ್ತ ತಳಿಗಳ ಬೀಜಗ ಳನ್ನು ನೀಡಿ, ಈ ಪದ್ಧತಿಯನ್ನು ಮುಂದುವರಿಸಲು ಪ್ರೋತ್ಸಾಹಿಸುತ್ತಿದೆ.

'ಹಲವು ಸವಾಲುಗಳ ನಡುವೆ ಈ ಭಾಗದಲ್ಲಿ ದೇಸಿ ಭತ್ತದ ತಳಿಗಳನ್ನು ಬೆಳೆಯುತ್ತಿರುವುದು ಆಶಾದಾಯಕ ಬೆಳವಣಿಗೆ. ಇದೊಂದು ಅಧ್ಯಯನ ಯೋಗ್ಯ ವಿಷಯ' ಎನ್ನುತ್ತಾರೆ ಕೃಷಿ ಬರಹಗಾರ ಮಲ್ಲಿಕಾರ್ಜುನ ಹೊಸಪಾಳ್ಯ.

ಈ ಪದ್ಧತಿಯಲ್ಲಿ ಗಮನಿಸಿದ ಅಂಶವೆಂದರೆ; ಮಳೆಯಾಶ್ರಿತ ಪದ್ಧತಿಗೆ ಹೊಂದಿಕೊಳ್ಳುವ ಕಾರಣಕ್ಕೆ ದೇಸಿ ಭತ್ತದ ತಳಿಗಳನ್ನು ಬೆಳೆಯುತ್ತಾರೆ. ಈ ತಳಿಗಳನ್ನು ಬೆಳೆಸಲು ಕೊಟ್ಟಿಗೆ ಗೊಬ್ಬರವನ್ನೇ ಹೆಚ್ಚಾಗಿ ಬಳಸುತ್ತಾರೆ, ಅದಕ್ಕಾಗಿ ರೈತರು ಹೆಚ್ಚು ದೇಸಿ ದನಗಳನ್ನೇ ಸಾಕುತ್ತಿದ್ದಾರೆ. ದೇಸಿ ಭತ್ತದ ತಳಿಗಳು ಸಾಕಷ್ಟು ಮೇವು ಕೊಡುವುದರಿಂದ ರಾಸುಗಳಿಗೆ ಅನುಕೂಲವಾಗಿದೆ. ಹೀಗೆ ಒಂದಕ್ಕೊಂದು ಕೊಂಡಿಯಾಗಿ, ಈ ಭಾಗದಲ್ಲಿ 'ಭತ್ತದ ಕೃಷಿ ಪರಿಸರ ಸ್ನೇಹಿ'ಯಾಗಿ ಉಳಿದುಕೊಂಡಿದೆ. ಹವಾಮಾನ ವೈಪರೀತ್ಯದ ಕಾಲಘಟ್ಟದಲ್ಲಿರುವ ಇಂದಿನ ಕೃಷಿ ಲೋಕಕ್ಕೆ ಇದೊಂದು ಉತ್ತಮ ಮಾದರಿಯಾಗಿದೆ. ■

UAS Library

ಕೊಡವರ ಖಾದ್ಯ ಮದ್ದು ಪಾಯಸ



ಮದ್ದು ಕೂಳ್

ಕೊಡಗಿನಲ್ಲಿ ಆಡುವ ಭಾಷೆ, ತಿನ್ನುವ ತಿನಿಸು, ಉಡುಪು, ಆಭರಣ, ಸಂಪ್ರದಾಯಗಳು ವಿಭಿನ್ನ ಮತ್ತು ಆಕರ್ಷಣೀಯ. ಸೌರಮಾನ ಪದ್ಧತಿ ಆಚರಿಸುವ ಕೊಡವರಿಗೆ ಮಾಸಗಳಲ್ಲಿ 'ಕಕ್ಕಡ' (ಆಷಾಢ ಮಾಸ) ಎಂದರೆ ವಿಶೇಷ. ಈ ಆಟಿ ಹದಿನೆಂಟರ ಆಚರಣೆಯಲ್ಲಿ ತಯಾರಿಸುವ ಆಟಿಪಾಯಸ ಅಥವಾ ಮದ್ದುಪಾಯಸವೇ ವಿಶಿಷ್ಟ.

■ ಸುಮಾವೀಣಾ

'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ, ಅಲ್ಲೇ ಆ ಕಡೆ ನೋಡಲ ಅಲ್ಲಿ ಕೊಡವರ ಬೀಡಲಾ' ಎಂಬ ಪಂಜೆ ಮಂಗೇಶರಾಯರ ಹುತ್ತರಿ ಹಾಡಿನ ಸಾಲುಗಳನ್ನು ತಿಳಿಯದವರಿಲ್ಲ. ಕೊಡಗಿನ ಅಪ್ರತಿಮ ಪ್ರಾಕೃತಿಕ ಸೌಂದರ್ಯ ಕಂಡು ಹಾಳ್ಗಿಳಿಸಿದ ಕವಿಯ ಈ ಸಾಲುಗಳು ಕೊಡಗಿನ ಸೌಂದರ್ಯವನ್ನು ಪದಗಳಲ್ಲಿ ಕಟ್ಟಿಕೊಟ್ಟಿದೆ.

'ಕೊಡಗು' ಪದ 'ಕೊಡಿ' ಎಂಬ ಪದದಿಂದ ಬಂದಿದೆ. ಇಂಗ್ಲಿಷಿನಲ್ಲಿ 'strenght, stong, powefull hill country, forested high land country' ಎಂಬ ಅರ್ಥವಿದೆ. ಕೊಡವ ಭಾಷೆಯಲ್ಲಿ 'ಕೊಡಿ' ಎಂದರೆ ಎತ್ತರವಾದ ದಟ್ಟ ಪರ್ವತಗಳ ಸಾಲು ಎಂದರ್ಥ. ಪುರಾಣಗಳಲ್ಲಿ ಕ್ರೋಢ ದೇಶ, ಕೊಡಿಮಲೆನಾಡು ಎಂದು ಉಲ್ಲೇಖವಿದೆ. ಕೊಡವ ಭಾಷೆಯಲ್ಲಿ ಇಂದಿಗೂ ಕೊಡಗು ಪದ ಪ್ರಯೋಗವಿಲ್ಲ, ಬದಲಾಗಿ 'ಕೊಡವನಾಡ್' ಪದ ಬಳಕೆಯಿದೆ. ಭತ್ತ, ಕಾಫಿ, ಸಾಂಬಾರು ಪದಾರ್ಥಗಳಿಗೆ ಹೆಸರಾಗಿರುವ ಈ ಜಿಲ್ಲೆ ರಾಜ್ಯ, ಹೊರರಾಜ್ಯಗಳ ಪ್ರವಾಸಿಗರ ನೆಚ್ಚಿನ ತಾಣ.

ಆಷಾಢ ಸಂಭ್ರಮ

ಇಲ್ಲಿ ಆಡುವ ಭಾಷೆ, ತಿನ್ನುವ ತಿನಿಸು, ಉಡುಪು, ಆಭರಣ, ಸಂಪ್ರದಾಯಗಳು ವಿಭಿನ್ನ ಮತ್ತು ಆಕರ್ಷಣೀಯ. 'ಆಟಿ ಪದಿನೆಟ್ಟು' ಕೊಡವರ ವಿಶೇಷವೆಂದೇ ಹೇಳಬಹುದು. ಸೌರಮಾನ ಪದ್ಧತಿ ಆಚರಿಸುವ ಕೊಡವರಿಗೆ ಮಾಸಗಳಲ್ಲಿ 'ಕಕ್ಕಡ' ಅಂದರೆ ಆಷಾಢ ಮಾಸದ ಆಚರಣೆ ವಿಶೇಷ ಎನ್ನಬಹುದು. ಕರ್ಕಾಟಕ ಮಾಸದ ಇನ್ನೊಂದು ಹೆಸರೇ ಕಕ್ಕಡ. (ಕರ್ಕಾಟ> ಕರ್ಕಡ> ಕಕ್ಕಡ) ಜುಲೈ ತಿಂಗಳ ಮಧ್ಯ ಭಾಗದಿಂದ ಆಗಸ್ಟ್ ತಿಂಗಳ ಮಧ್ಯದವರೆಗೆ ಕಕ್ಕಡ ಮಾಸ ಚಾಲ್ತಿಯಲ್ಲಿರುತ್ತದೆ.

ಕೊಡವರಲ್ಲಿ ಕಕ್ಕಡ ಪದಿನೆಟ್ಟು, ಆಟಿ ಪದಿನೆಟ್ಟು

ಕಕ್ಕಡ ಪದಿನೆಟ್ ಹಬ್ಬಕ್ಕೆ ಉಪಯೋಗಿಸುವ ಮದ್ದುಸೊಪ್ಪು, ಆಟಿಸೊಪ್ಪು ಅಥವಾ ಮಧುಬನ



UAS Library

ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಈ ಜನಪದೀಯ ಪರ್ವ ಕೃಷಿಕರ ಪಾಲಿಗೆ ಮಹಾಪರ್ವವೆಂದೇ ಹೇಳಬಹುದು. ಮದುವೆ ಮುಂತಾದ ಶುಭಕಾರ್ಯಗಳಿಗೆ ಈ ಮಾಸ ನಿಷಿದ್ಧ. ಗ್ರಾಮೀಣ ಭಾಗದ ದೇವಾಲಯಗಳಲ್ಲೂ ನಿತ್ಯ ಪೂಜೆಯನ್ನು ಸ್ಥಗಿತಗೊಳಿಸುವುದು ವಾಡಿಕೆ. ಸರಿ ಸುಮಾರು ಮುಂಗಾರಿನ ಭತ್ತದ ನಾಟಿ ಮಾಡಿ ಮುಗಿಯುವ ಕಾಲಕ್ಕೆ ಈ ಆಟಿ ಹದಿನೆಂಟರ ಆಚರಣೆ ಇರುತ್ತದೆ. ಆಟಿಪಾಯಸ ಅಥವಾ ಮದ್ದುಪಾಯಸ ಈ ಹಬ್ಬದ ಕೇಂದ್ರಬಿಂದು. ಆಟಿಸೊಪ್ಪು, ಮಧುಬನ, ಮದ್ದುತೊ(ಸೊ)ಪ್ಪು, ಕರುಂಜಿತೊ(ಸೊ)ಪ್ಪು ಎಂದು ಕರೆಸಿಕೊಳ್ಳುವ ಸೊಪ್ಪಿನಿಂದ ವಿವಿಧ ಖಾದ್ಯಗಳನ್ನು ಮಾಡಿ ಸೇವಿಸುತ್ತಾರೆ. ಕಕ್ಕಡ ಮಾಸ ಅಥವಾ ಆಷಾಢ ಮಾಸ ಪ್ರಾರಂಭವಾದಾಗಿನಿಂದ ಹದಿನೆಂಟನೇ ದಿನದವರೆಗೆ ತಲಾ ಒಂದೊಂದು ಔಷಧಿಯ



ಆಟಿ ಕ್ಷೀರ ಅಥವಾ ಮದ್ದ್ ಪುಟ್ಟ್

ಗುಣ ಈ ಸೊಪ್ಪಿನಲ್ಲಿ ಸೇರುತ್ತಾ ಹೋಗುತ್ತದೆ, ಹದಿನೆಂಟನೇ ದಿನ ಈ ಸೊಪ್ಪನ್ನು ಬಳಸಿ ಮಾಡಿದ ಖಾದ್ಯಗಳನ್ನು ಸೇವಿಸಿದರೆ ಜಡತ್ವ ನಿವಾರಣೆಯಾಗಿ ಹೊಸ ಚೈತನ್ಯ ಬರುತ್ತದೆ ಎಂಬ ನಂಬಿಕೆಯಿದೆ.

ಈಗಿನ ಹಾಗೆ ಹಿಂದೆ ಸಾರಿಗೆ ಸೌಲಭ್ಯಗಳು ಇಲ್ಲದೇ ಇದ್ದಾಗ ಕೃಷಿಕರು ಹೊರಗೆಲ್ಲೂ ಆಚೆ ಬರಲು ಆಗದೇ ಇದ್ದಾಗ ಸುತ್ತಮುತ್ತಲು ಇದ್ದಂತಹ ಸಸ್ಯಗಳನ್ನೇ ಔಷಧಿಯಾಗಿ ಬಳಸಿದರು. ಅದೇ ಕ್ರಮೇಣ ಸಂಪ್ರದಾಯವಾಗಿದೆ. ಈ ಸೊಪ್ಪು ದೇಹದ ಉಷ್ಣಾಂಶ ಮತ್ತು ಶೀತದಿಂದ ಕಾಪಾಡಲು, ರೋಗನಿರೋಧಕ ಶಕ್ತಿ ಹೆಚ್ಚಿಸಲು ಮತ್ತು ಕೊಬ್ಬನ್ನು ಕರಗಿಸಲು ಸಹಾಯವಾಗುತ್ತದೆ ಎಂಬ ನಂಬಿಕೆಯೂ ಇದೆ. ಹೆಸರಿನಲ್ಲೇ ಮದ್ದುಸೊಪ್ಪು ಎಂದು ಕರೆಸಿಕೊಂಡಿರುವ ಇದರ ವೈಜ್ಞಾನಿಕ ಹೆಸರು ಜೆಸ್ಸಿಕಾ ವೈನಾಡೆನ್ಸಿ.

ಚೂಪಾದ ಎಲೆಗಳುಳ್ಳ ಈ ಸೊಪ್ಪು ಎತ್ತರಕ್ಕೆ ಬೆಳೆಯುತ್ತದೆ. ಈ ಸೊಪ್ಪನ್ನು ತೊಳೆದು ಕಾಂಡಸಹಿತ ನೀರಿನಲ್ಲಿ ಬೇಯಿಸಿ ಸೋಸಿದ ನೀರನ್ನು ಬೇರೆ ಬೇರೆ ಖಾದ್ಯಗಳಿಗೆ ಬಳಸಲಾಗುತ್ತದೆ. ಹಾಗೆ ತೆಗೆದ ನೀರು ನೇರಳೆ ಬಣ್ಣಕ್ಕೆ ಇರುತ್ತದೆ. ಇದೇ ನೀರಿಗೆ ಅಕ್ಕಿ, ಬೆಲ್ಲ, ಕಾಯಿತುರಿ, ಏಲಕ್ಕಿ ಹಾಕಿದರೆ ಮದ್ದುಪಾಯಸ ಅಥವಾ ಮದ್ದುಕೂಳು ಪಾಯಸ ಆಗುತ್ತದೆ. (ಕೂಳು ಎಂದರೆ ಹಳೆಗನ್ನಡದಲ್ಲಿ ಅನ್ನ ಎಂದಿದೆ. ಈಗ ಸತ್ತವರಿಗೆ ನೀಡುವ ಪಿಂಡ ಎಂಬ ಹೀನಾರ್ಥ ಪಡೆದುಕೊಂಡಿದೆ. ಆದರೆ ಕೊಡವರಲ್ಲಿ ಈಗಲೂ ಕೂಳು ಪದ ಮೊದಲಿನಂತೆ ಬಳಕೆಯಿದೆ). ಮಧುಬಾನ ಎಂಬ ಪದದ ಪ್ರಯೋಗವಿದೆ. ಇಲ್ಲಿಯೂ ಬಾನ ಎಂದರೆ ಅನ್ನ ಎಂಬ ಅರ್ಥವೇ ಬರುತ್ತದೆ. 'ಹಂಗಿನಾ ಬಾನ ಉಣಲಾರೆ ಬಂಜೆಂಬ ಶಬ್ದದ ಹೊರಲಾರೆ' ಎಂಬ ಜನಪದ ತ್ರಿಪದಿಯಲ್ಲಿಯೂ ಬಾನ ಪದವಿದೆ.

ಈ ಮದ್ದು ಸೊಪ್ಪನ್ನು ಬೇಯಿಸಿ ತೆಗೆದ ನೀರನ್ನು ಬಳಸಿ ಕೇಸರಿಭಾತ್, ಹಲ್ವ, ಬರ್ಫಿ ಮುಂತಾದವುಗಳನ್ನು ಮಾಡುತ್ತಾರೆ. ಇವುಗಳನ್ನು ತುಪ್ಪ ಹಾಗು ಜೇನಿನ ಜೊತೆ ಸೇವಿಸಿದರೆ ಅತ್ಯಂತ ಸ್ವಾದಿಷ್ಟವಾಗಿರುತ್ತದೆ. ಇವಿಷ್ಟಲ್ಲದೆ ಈ ಸೊಪ್ಪನ್ನು ಬಳಸಿಕೊಂಡು ಲಾಡು, ಜೆಲ್ಲಿ, ಕಾಯಿಗಿಣ್ಣು, ಪಡ್ಡು, ಜಾಮೂನು ಮುಂತಾದ ಖಾದ್ಯಗಳನ್ನು ಮಾಡುತ್ತಾರೆ. ಮದ್ದುಸೊಪ್ಪನ್ನು ಬಳಸಿ ಬಗೆ ಬಗೆ ಖಾದ್ಯ ಮಾಡುವಲ್ಲಿ, ಗೋಡಂಬಿ, ದ್ರಾಕ್ಷಿ, ಒಣಹಣ್ಣುಗಳಿಂದ ಅಲಂಕಾರ ಮಾಡುವಲ್ಲಿ, ಹಾಗೆಯೇ ವಿವಿಧ ವಿನ್ಯಾಸದ ಪಾತ್ರೆಗಳಲ್ಲಿ ಆಕರ್ಷಕವಾಗಿ ಜೋಡಿಸಿ ಬಡಿಸುವಲ್ಲಿ ಹೆಣ್ಣುಮಕ್ಕಳ ಸೃಜನಶೀಲತೆಯನ್ನು ಕಾಣಬಹುದು.

ಮನೆಗಳಲ್ಲಿ ಹಬ್ಬದ ಆಚರಣೆಯಲ್ಲದೆ ಸಾಮೂಹಿಕವಾಗಿಯೂ ಕಕ್ಕಡ ಪದೆನಟ್ಟರ ಆಚರಣೆಯನ್ನು ಆಟಿತಿನಿ (ಆಟಿಊಟ) ಹೆಸರಿನಲ್ಲಿ ಆಚರಿಸುತ್ತಾರೆ. ಮದ್ದುಸೊಪ್ಪಿನ ಖಾದ್ಯಗಳಲ್ಲದೆ ಮರಕೆಸುವಿನ ಎಲೆಯ ಪತ್ರೊಡೆ, ಅರಿಶಿನ ಎಲೆ



ಮದ್ದು ಪಾಯಸ

ಹಿಟ್ಟು, ಬಾಳೆಹಣ್ಣು ಪುಟ್ಟು, ಕಣಲೆ (ಎಳೆಬಿದಿರು) ಪಲ್ಯ, ಹಲಸಿನ ಹಣ್ಣಿನ ಹಿಟ್ಟು, ಸುವರ್ಣಗೆಡ್ಡೆ ಪಲ್ಯ ಮುಂತಾದ ಖಾದ್ಯಗಳನ್ನು ತಯಾರಿಸಿರುತ್ತಾರೆ. ಈ ಸಂದರ್ಭದಲ್ಲಿ ಆಯೋಜಿಸುವ ವಿವಿಧ ಆಟೋಟ ಸ್ಪರ್ಧೆಗಳು, ಸಾಂಸ್ಕೃತಿಕ ಸ್ಪರ್ಧೆಗಳು ಸಂಭ್ರಮವನ್ನು ಇಮ್ಮಡಿಗೊಳಿಸುತ್ತವೆ. ಅಲ್ಲದೆ ಆಟಿ ಹದಿನೆಂಟರ ದಿನದಂದು ಮನೆಮನೆಗಳಲ್ಲೂ ಮದ್ದುಸೊಪ್ಪಿನ ಖಾದ್ಯಗಳನ್ನು ತಪ್ಪದೆ ಮಾಡಿ ನೆರೆಹೊರೆಯವರಿಗೆ ಸಂಭ್ರಮದಿಂದ ಹಂಚುತ್ತಾರೆ. ಅಲ್ಲದೆ ಕೊಡಗಿನ ಹೊರಗೆ ಇರುವವರಿಗೆ ಸೊಪ್ಪನ್ನು ಬೇಯಿಸಿ ತೆಗೆದ ನೀರನ್ನು ಕೊಟ್ಟು ಕಳುಹಿಸಿ ಹರ್ಷಿಸುತ್ತಾರೆ. ಆಟಿ ಅಥವಾ ಕಕ್ಕಡ ತಿಂಗಳು ಕಳೆಯುತ್ತಿದ್ದಂತೆ ಗ್ರಾಮಗ್ರಾಮಗಳಲ್ಲಿ ದೇವಸ್ಥಾನಗಳನ್ನು ಶುಚಿಗೊಳಿಸಿಕೊಂಡು ರೈತರು ಮುಂದೆ ಬರುವ ಕೈಲ್‌ಮುಹೂರ್ತ ಹಬ್ಬಕ್ಕೆ ತಯಾರಿ ಮಾಡಿಕೊಳ್ಳುತ್ತಾರೆ.

ಆಟಿಪದಿನಟ್ಟು ಕೊಡವರಲ್ಲಿ ಮಾತ್ರವಲ್ಲ ತಮಿಳರಲ್ಲಿ ಕೂಡ 'ಆಟಿಪದಿನೆಟ್ಟಾಂಪೆರುಕ್ಕುಂ' ಎಂಬ ಹೆಸರಿನ ಆಚರಣೆಯಿದೆ. ಆಟಿ ಎಂದರೆ ಆಷಾಢ, ಪದಿನಟ್ಟು ಎಂದರೆ ಹದಿನೆಂಟು, ಪೆರುಕ್ಕುಂ ಎಂದರೆ ಖಾದ್ಯಗಳು ಎಂದರ್ಥ. ಅಂದರೆ ಆಷಾಢ ಮಾಸದ ಹದಿನೆಂಟನೆ ದಿನ ಹದಿನೆಂಟು ರೀತಿಯ ಭಕ್ಷ್ಯಗಳನ್ನು (ಸಿಹಿಪೊಂಗಲ್, ಖಾರಾ ಪೊಂಗಲ್, ಚಿತ್ರಾನ್ನ, ಬೆಲ್ಲದನ್ನ, ಮೊಸರನ್ನ) ಮಾಡಿ ದೇವಿಯ ಆರಾಧನೆ ಮಾಡುವುದು. ಇಲ್ಲೊಂದು ಸಾಮ್ಯವಿದೆ. ಅದೇನೆಂದರೆ ಕೊಡವರು ಹಾಗೂ ತಮಿಳರು ಜೀವನದಿ ಕಾವೇರಿಯ ಆರಾಧಕರಾಗಿರುವುದು.

ತಮಿಳುನಾಡಿನ ಕಡಲ ತೀರದ ಜಿಲ್ಲೆಗಳಲ್ಲಿ ಹಾಗೂ ಕಾವೇರಿ ನದಿ ಪಾತ್ರದ ಜಿಲ್ಲೆಗಳಲ್ಲಿ ಆಟಿ ಹದಿನೆಂಟರ ದಿನದಂದು ಕಾವೇರಿ ನದಿಗೆ ಆರತಿ ಮಾಡುವ ರೂಢಿಯಿದೆ. ಕಾಫಿನಾಡು, ಭತ್ತದ ನಾಡು ಕೊಡಗಿನ ಬತ್ತದ ಸೌಂದರ್ಯವೇ ಮನಸ್ಸಿಗೆ ಚೇತೋಹಾರಿಯಾದಂತೆ, ಕೊಡವ ನಾಡಿನಾದ್ಯಂತ ವಿಶೇಷವಾಗಿ ಆಚರಿಸುವ ಕಕ್ಕಡ ಪದಿನಟ್ಟ್ ಅರ್ಥಾತ್ ಆಟಿ ಹದಿನೆಂಟು ದೇಹಕ್ಕೆ ಚೇತೋಹಾರಿಯಾದದ್ದು.

ಚಿತ್ರಗಳು: ಸಂಗೀತ ರವಿರಾಜ್



ಸವಿ ಕರ್ನಾಟಕ

ಕರ್ನಾಟಕದ ವಿವಿಧ ಭಾಗಗಳಿಂದ ವಿಶೇಷ ರುಚಿಗಳನ್ನು ಪರಿಚಯಿಸುವ ಅಂಕಣ. ಆ ಸವಿಯ ಹಿಂದಿನ ಪರಂಪರೆ, ಪರಿಚಯ ಮತ್ತು ವಿಧಾನಗಳಿರುವ ಮಾಹಿತಿಗುಚ್ಛ.

UASB Library

ಗಿಡ್ಡ ತಳಿ ಅಡಿಕೆ ಮರ

ಅಡಿಕೆ ಮರ ಎಂದರೆ ಥಟ್ಟನೆ ನಮ್ಮ ಸ್ಮೃತಿ ಪಟಲದಲ್ಲಿ ಕಾಣಿಸಿಕೊಳ್ಳುವುದು ತೆಳ್ಳನೆಯ, ಗಾಳಿಗೆ ತೂರಾಡುವ 70–80 ಅಡಿ ಎತ್ತರದ ಮರ. ಅಂತಹ ಅಡಿಕೆ ಮರಕ್ಕೆ ತದ್ವಿರುದ್ಧವಾದ, ಅತ್ಯಂತ ಗಿಡ್ಡ ತಳಿಯ ಅಡಿಕೆ ಮರವು ಇಲ್ಲಿ ಗಮನಸೆಳೆದಿದೆ.

'ಹಿರೇಹಳ್ಳಿ ಗಿಡ್ಡ' ಅಡಿಕೆ ತಳಿ ಎಂಬ ಹೆಸರಿನ ಈ ಮರವು ಸಮೃದ್ಧವಾಗಿ ಬೆಳೆಯುತ್ತಿರುವುದು ಶೃಂಗೇರಿಯ 'ಕೆರೆಮನೆ'ಯಲ್ಲಿ. ಡ್ರಮ್‌ನಲ್ಲಿ ಬೆಳೆಯಬಹುದಾದ ಈ ಅಡಿಕೆ ಮರದ ಜೀವಿತಾವಧಿ ಸುಮಾರು 2025 ವರ್ಷ. ವರ್ಷಕ್ಕೆ ಒಂದು ಅಡಿ ಅಷ್ಟೇ ಬೆಳೆಯುವ ಇದರ ಇಳುವರಿಯು ಸಾಮಾನ್ಯ ಅಡಿಕೆ ಮರಕ್ಕೆ ಹೋಲಿಸಿದರೆ ತೀರಾ ಕಡಿಮೆ. ಸುತ್ತಮುತ್ತ ಹಳದಿ ರೋಗದಿಂದ ಅಡಿಕೆ ಗಿಡಗಳು ಬಳಲುತ್ತಿದ್ದರೂ ಈ ಮರಕ್ಕೆ ಮಾತ್ರ ರೋಗ ತಗಲುವುದೇ ಇಲ್ಲ. ಈ ಗುಣ ಇದರ ವಿಶೇಷ.

ಇದರಲ್ಲಿ ಅರ್ಧ ಇಂಚಿಗೆ ಒಂದು ಗಣ್ಣು. ಇಳುವರಿ ಕಡಿಮೆಯಾದರೂ ಅಡಿಕೆ ಗಾತ್ರ ಮತ್ತು ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಾಗದು. ಆರೈಕೆ ವಿಚಾರಕ್ಕೆ ಬಂದರೆ, ಮಧ್ಯಾಹ್ನದ ಬಿಸಿಲು ಇದಕ್ಕೆ ನೇರವಾಗಿ ಬೀಳದಂತೆ ನೋಡಿಕೊಳ್ಳಬೇಕು. ನಾಟಿ ಮಾಡಿದ 34ನೇ ವರ್ಷಕ್ಕೆ ಫಸಲು ಕೈಗೆ ಬರುತ್ತದೆ. ಒಂದು ಗೊನೆಯಲ್ಲಿ 100ರಿಂದ 150 ಕಾಯಿ ಇರುತ್ತದೆ. ಟೆರೇಸ್‌ನಲ್ಲಿ, ಗಾರ್ಡನ್‌ನಲ್ಲಿ, ಹೋಂ ಸ್ಪೇಗಳಲ್ಲಿ, ರೆಸಾರ್ಟ್‌ಗಳಲ್ಲಿ, ಸ್ಕೂಲು–ಕಾಲೇಜುಗಳಲ್ಲಿ ಅಲಂಕಾರಿಕ ಗಿಡವಾಗಿಯೂ ಇದನ್ನು ಬೆಳೆಯಬಹುದು.

–ಎಸ್.ಎನ್. ಚಂದ್ರಕಲಾ, ಕೊಪ್ಪ



UAS Library





ಡಬ್ಬಗಳ ಮರು ಬಳಕೆ

ಚಿತ್ರದಲ್ಲಿ ಕಾಣುತ್ತಿರುವವರು ಶೇಖ್ ಹುಸೇನ್. ಇವರದ್ದು ಡಬ್ಬ ತಯಾರಿಸಿಕೊಡುವ ಕೆಲಸ. ಅಂದರೆ, ಬಳಸಿ ಬಿಸಾಡುವ ಅಥವಾ ಗುಜರಿ ಸೇರುವ ಅಡುಗೆ ಎಣ್ಣೆ, ಆಹಾರೋತ್ಪನ್ನಗಳನ್ನು ತುಂಬಿದ್ದ ಡಬ್ಬಗಳನ್ನು ಕತ್ತರಿಸಿ, ಅವುಗಳನ್ನೇ ಹೊಸ ಡಬ್ಬಗಳನ್ನು ರೂಪಿಸುವುದು ಇವರ ಕಾಯಕ. ಜನರಿಗೆ ಉಪಯೋಗವಾಗುವಂತೆ ಮುಚ್ಚಳ ಸಹಿತ ಡಬ್ಬ ತಯಾರಿಸಿ ಕೊಡುವುದರಲ್ಲಿ ಇವರು ನಿಸ್ಸೀಮರು.

ಶಿರಸಿ ನಗರದ ಚನ್ನಪಟ್ಟಣ ಬಜಾರ್‌ನ ರಸ್ತೆಯೊಂದರ ಬದಿಯಲ್ಲಿ ಪುಟ್ಟ ಅಂಗಡಿ ಇಟ್ಟುಕೊಂಡಿರುವ ಇವರು ವರ್ಷದ ಎಲ್ಲ ದಿನವೂ ಖಾಲಿ ಡಬ್ಬಗಳಿಂದ ನಿತ್ಯೋಪಯೋಗಿ ವಸ್ತು ಸಲಕರಣೆಗಳನ್ನು ಮಾಡಿಕೊಡುವ ಮೂಲಕ ಜನಸಾಮಾನ್ಯರ ಪ್ರೀತಿ ಗಳಿಸಿದ್ದಾರೆ. ವೈಟ್ ಕಾಲರ್ ಉದ್ಯೋಗ ಅರಿಸುತ್ತ ಆಯುಷ್ಯದ ಬಹುಸಮಯ ವ್ಯರ್ಥ ಮಾಡುವ ಜನರು ಇಂತಹ ರಿಪೇರಿ ಕೆಲಸ, ಮರು ಬಳಕೆ ಕೆಲಸಗಳತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ಪ್ಲಾಸ್ಟಿಕ್ ಡಬ್ಬಗಳ ಬಳಕೆ ಹೆಚ್ಚಾಗಿ ತಗಡಿನ ಡಬ್ಬಗಳು ಮತ್ತು ಅವುಗಳ ಮರು ಬಳಕೆಯಂತೂ ಕ್ಷೀಣಿಸುತ್ತಿದೆ. ಹುಸೇನ್ ಅವರಿಂದ ಖರೀದಿಸಿದ ಡಬ್ಬಗಳನ್ನು ಜನರು ತಮ್ಮ ಮನೆಗಳಲ್ಲಿ ದವಸ-ಧಾನ್ಯ ಸಂಗ್ರಹಿಸಿಡುತ್ತಾರೆ.

–ಅರ್ಚನಾ ಜೆ., ಬೊಮ್ಮಳ್ಳಿ

ತಾಳ ತಪ್ಪಿಹೋದ ತಾಳೆ ಬೆಲ್ಲ

'ನಾವು ಪ್ರಬುದ್ಧರಾಗುವುದು ನಮ್ಮ ನೋವಿನ ಅನುಭವಗಳಿಂದಲೇ ಹೊರತು, ನಮಗಾಗುವ ವಯಸ್ಸಿನಿಂದಲ್ಲ' ಎಂಬ ಮ್ಯಾಟಿಸ್ ವಿಲಿಯಮ್ ಅವರ ಮಾತೊಂದಿದೆ. ಅಂತೆಯೇ ಸಿಹಿ ಬೆಲ್ಲದ ಹಿಂದೆ ಅನೇಕ ಕಹಿ ಅನುಭವಗಳನ್ನು ಅನ್ನದಾತ ಅನುಭವಿಸಿರುತ್ತಾನೆ. ಬೆಲ್ಲ ನೂರಾರು ರೂಪಾಂತರಗಳ ಮೂಲಕ ತನ್ನ ಪಥವನ್ನು ಅನುಸರಿಸುತ್ತಾ ಬಂದಿದೆ. ಬೆಲ್ಲದ ಬದಲಾವಣೆಯಲ್ಲಿ ಹಲವು ಸಾಂಪ್ರದಾಯಿಕ ಬೆಲ್ಲದ ಪ್ರಕಾರಗಳು ನಮ್ಮಿಂದ ಕಣ್ಮರೆಯಾಗಿವೆ. ಅದರಲ್ಲಿ ತಾಳ ತಪ್ಪಿಹೋದ 'ತಾಳೆ ಬೆಲ್ಲ'ವೂ ಒಂದು. ಒಂದು ಸಮಯದಲ್ಲಿ ಅಡುಗೆ ಮನೆಯಲ್ಲಿ ರಾಜಾಜಿಸುತ್ತಿದ್ದ, ಮಕ್ಕಳ ಪ್ರೀತಿಯ ತಾಳೆ ಬೆಲ್ಲ ಇಂದು ಅವಸಾನದ ಅಂಚಿನಲ್ಲಿದೆ.



ತಾಳೆ ಮರದ ಗರಿಯನ್ನು ಹದವಾಗಿ ಒಣಗಿಸಿ, ಹದಕ್ಕೆ ಬಂದ ಬೆಲ್ಲವನ್ನು ಗರಿಯಲ್ಲಿ ಹಾಕಿ ಆಲಂಕಾರಿಕವಾಗಿ ಕಟ್ಟು ಕಟ್ಟುವ ಪರಿ ಅದ್ಭುತವಾದದ್ದು. ಬೆಲ್ಲದ ರುಚಿ ಇಮ್ಮಡಿಯಾಗಲು ಅದಕ್ಕೆ ಹಲವು ಪದಾರ್ಥಗಳನ್ನು ಸೇರಿಸುತ್ತಿದ್ದರು. ತಾಳೆ ಗರಿಯನ್ನು ಉಪಯೋಗಿಸುವುದರಿಂದ ಅದಕ್ಕೆ ತಾಳೆ ಬೆಲ್ಲ ಎಂದು ಹೆಸರು ಬಂದಿದೆ. ಈ ಬೆಲ್ಲವನ್ನು ಪ್ರಾದೇಶಿಕವಾಗಿ ಓಲೆ ಬೆಲ್ಲ, ಕಳಿ ಬೆಲ್ಲ, ಕಲಿ ಬೆಲ್ಲ, ವಾಲೆ ಬೆಲ್ಲ ಎಂಬ ಹಲವು ಹೆಸರುಗಳಿಂದ ಕರೆಯಲಾಗುತ್ತದೆ. ಅಂಡೆಯಾಕಾರದ ಈ ಬೆಲ್ಲದ ಕಟ್ಟು ಒಂದು ಸಮಯದಲ್ಲಿ ಎಲ್ಲಾ ಕಿರಾಣಿ ಅಂಗಡಿಗಳಲ್ಲಿ ಧಾರಾಳವಾಗಿ ಸಿಗುತ್ತಿತ್ತು. ಕಟ್ಟಿನ ಲೆಕ್ಕದಲ್ಲೇ ಈ ಬೆಲ್ಲ ಮಾರಾಟವಾಗುತ್ತಿತ್ತು. ಹೆಚ್ಚು ದಿನ ಬಾಳಿಕೆ ಬರುತ್ತಿದ್ದ ಈ ತಾಳೆ ಬೆಲ್ಲ ಈಗ ಕಣ್ಮರೆಯಾಗುತ್ತಿದೆ.

–ಬೀರಣ್ಣ ನಾಯಕ, ಮೊಗಟಾ

ಹೀಗೊಂದು ಹೆಜ್ಜೆ, ಸ್ವಚ್ಛ ಪರಿಸರದತ್ತ...

ಆಧುನಿಕ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆ ಅನಿವಾರ್ಯ. ಹೀಗಾಗಿಯೇ ತ್ಯಾಜ್ಯವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅದರಲ್ಲೂ ನೀರಿನ ಬಾಟಲಿಗಳು, ತಂಪು ಪಾನೀಯ ಬಾಟಲಿಗಳು ಮತ್ತು ಇತರೆ ಪ್ಲಾಸ್ಟಿಕ್ ವಸ್ತುಗಳು ಪರಿಸರಕ್ಕೆ ದೊಡ್ಡ ಪ್ರಮಾಣದಲ್ಲಿ ಮಾರಕವಾಗಿವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮೂಡಬಿದಿರೆ ಪುರಸಭೆಯು ಚಿತ್ರದಲ್ಲಿ ಕಾಣುತ್ತಿರುವಂತೆ ವಿನೂತನ ಪ್ರಯೋಗಕ್ಕೆ ಮುಂದಡಿ ಇಟ್ಟಿದೆ.

ಸ್ವಚ್ಛ ಸರ್ವೇಕ್ಷಣ ಅಭಿಯಾನದ ಅಡಿಯಲ್ಲಿ ಇದನ್ನು ಅಳವಡಿಸಲಾಗಿದೆ. ಈ ಪ್ಲಾಸ್ಟಿಕ್ ಬಾಟಲಿ ಶೇಖರಣಾ ಘಟಕದಲ್ಲಿ, ಪ್ಲಾಸ್ಟಿಕ್ ಬಾಟಲಿಗಳನ್ನು ಮಾತ್ರ ಹಾಕಬೇಕು. ಈ ಭಾಗದಲ್ಲಿ ಬಳಸಿದ ಬಳಿಕ ಪ್ಲಾಸ್ಟಿಕ್ ನೀರಿನ ಬಾಟಲಿಗಳನ್ನು ರಸ್ತೆ, ಉದ್ಯಾನ, ಬಸ್ ನಿಲ್ದಾಣ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡುವಂತಿಲ್ಲ. ಇಲ್ಲಿ ಸಂಗ್ರಹವಾದ ಬಾಟಲಿಗಳನ್ನು ಮರುಸಂಸ್ಕರಣೆಗೆ ಕಳುಹಿಸಿ, ಮರುಬಳಕೆಗೆ ಅದ್ಯತೆ ನೀಡಲಾಗುತ್ತದೆ. ತಿಳುವಳಿಕೆ ಇಲ್ಲದ ಕೆಲವರು ಈ ಘಟಕದಲ್ಲಿ ಪ್ಲಾಸ್ಟಿಕ್ ಮತ್ತು ಬೇರೆ ಬೇರೆ ತ್ಯಾಜ್ಯವನ್ನೂ ತಂದು ಸುರಿಯುತ್ತಿರುವುದು ವಿಪರ್ಯಾಸವೇ ಸರಿ.

–ಡಾ. ಮೈತ್ರಿ ಭಟ್, ಏಟ್ಲ



UKSD Library

ಆಹಾರ

ಮಳೆಗಾಲಕ್ಕೆ ಗರಿಗರಿ ತಿನಿಸುಗಳು



ಮಳೆಗಾಲದಲ್ಲಿ ಸಾಮಾನ್ಯವಾಗಿ ಹೊರಗೆ ಹೋಗಲು ಬೇಸರ. ಮನೆಯೊಳಗೆ ಏನಾದರೂ ತಿನ್ನುವ ಹಂಬಲ. ಅದರಲ್ಲೂ ಸಂಜೆ ವೇಳೆಯ ಲಘು ಉಪಾಹಾರದ ಚಿಂತೆ ಕಾಡುತ್ತದೆ. ಹೊರಗೆ ಧಾರಾಕಾರ ಮಳೆ ಸುರಿಯುತ್ತಿರುವಾಗ ಗರಿಗರಿ ತಿನಿಸುಗಳಿಗಾಗಿ ಮನ ಹಾತೊರೆಯುತ್ತದೆ. ಮನೆಯಲ್ಲಿಯೇ ಸುಲಭವಾಗಿ ಸಿದ್ಧಪಡಿಸಬಹುದಾದ ರುಚಿಕರ ಹಾಗೂ ಆರೋಗ್ಯಯುತ ತಿನಿಸುಗಳು ಇಲ್ಲಿವೆ...

■ ಲತಾ ಹೆಗಡೆ

ಕಡಲೆ ಹಿಟ್ಟಿನ ಮಂಚೂರಿ



ಏನೇನು ಬೇಕು?

- ಕಡಲೆ ಹಿಟ್ಟು ಒಂದು ಲೋಟ
- ಕ್ಯಾಪ್ಸಿಕಮ್ ತುರಿ ಒಂದು ಲೋಟ
- ಕ್ಯಾರೆಟ್ ತುರಿ ಒಂದು ಲೋಟ
- ಎಲೆಕೋಸು ಹೆಚ್ಚಿದ್ದು ಒಂದು ಲೋಟ
- ಈರುಳ್ಳಿ ಹೆಚ್ಚಿದ್ದು ಒಂದು ಲೋಟ
- ಟೊಮೆಟೊ ಸಾಸ್ ಗ್ರೀನ್ ಚಿಲ್ಲಿ ಸಾಸ್ ಟೊಬಾಸ್ಕೊ ಸಾಸ್ ಎಲ್ಲವೂ ಒಂದೊಂದು ಚಮಚ
- ಗರಂ ಮಸಾಲೆ ಪುಡಿ ಅರ್ಧ ಚಮಚ

ಮಾಡೋದು ಹೇಗೆ?

ಕಡಲೆ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು, ಅಚ್ಚ ಖಾರದ ಪುಡಿ, ಗರಂ ಮಸಾಲೆ ಪುಡಿ, ಶುಂಠಿ ಬೆಳ್ಳುಳ್ಳಿ ಹಸಿಮೆಣಸಿನಕಾಯಿ ಪೇಸ್ಟ್ ಒಂದು ಚಮಚ, ಎರಡು ಚಮಚ ಕಾಯಿಸಿದ ಎಣ್ಣೆ ಅಥವಾ ಚಿಟಿಕೆ ಅಡುಗೆ ಸೋಡಾ, ನೀರು ಬೆರೆಸಿ ಪಕೋಡ ಹಿಟ್ಟಂತೆ ಗಟ್ಟಿಯಾಗಿ ಕಲಸಿ. ಸಣ್ಣ ಸಣ್ಣ ಉಂಡೆಗಳಂತೆ ಕರಿದು ತೆಗೆದಿಡಿ. ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಕಾದಾಗ ಹೆಚ್ಚಿದ ತರಕಾರಿಗಳನ್ನು ಹಾಕಿ ಸ್ವಲ್ಪ ಬಾಡಿಸಿ. ಇದಕ್ಕೆ ಸಾಸ್‌ಗಳನ್ನು ಸೇರಿಸಿ. ಮಸಾಲೆಪುಡಿ, ಕರಿದಿಟ್ಟ ಬೋಂಡಗಳನ್ನು ಬೆರೆಸಿ ಒಂದು ನಿಮಿಷ ಕಲಕಿ. ಈರುಳ್ಳಿ ಹೂವನ್ನು ಉದುರಿಸಿದರೆ ರುಚಿಕರ ಮಂಚೂರಿ ಸಿದ್ಧ.

ಬ್ರೆಡ್ ಪಕೋಡ

ಏನೇನು ಬೇಕು?

- ಬ್ರೆಡ್ ಸ್ಲೈಸ್ ಹತ್ತು
- ಬೇಯಿಸಿದ ಆಲೂಗಡ್ಡೆ ಮೂರು
- ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಒಂದು ಚಮಚ
- ದನಿಯ, ಜೀರಿಗೆ ಹುರಿದ ಪುಡಿ ಎರಡು ಚಮಚ
- ಅಚ್ಚ ಖಾರದ ಪುಡಿ, ಕಸೂರಿ ಮೇಥಿ ಒಂದೊಂದು ಚಮಚ
- ಗರಂ ಮಸಾಲೆ ಅರ್ಧ ಚಮಚ
- ಕೊತ್ತಂಬರಿ ಸೊಪ್ಪು
- ಕಡಲೆ ಹಿಟ್ಟು ಒಂದು ಲೋಟ

ಮಾಡೋದು ಹೇಗೆ?

ಬೇಯಿಸಿದ ಆಲೂಗಡ್ಡೆಯನ್ನು ನುರಿದು ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಗೂ ಎಲ್ಲಾ ಮಸಾಲೆಪುಡಿಗಳನ್ನು ಸೇರಿಸಿ. ಒಂದೆರಡು ಚಮಚ ನೀರು, ಉಪ್ಪು, ಕೊತ್ತಂಬರಿ ಸೊಪ್ಪು ಬೆರೆಸಿ. ಚೆನ್ನಾಗಿ ಮಿಕ್ಸ್ ಮಾಡಿ.

ಕಡಲೆ ಹಿಟ್ಟಿಗೆ ಸ್ವಲ್ಪ ಕಸೂರಿ ಮೇಥಿ, ರುಚಿಗೆ ಉಪ್ಪು, ಅಚ್ಚ ಖಾರದಪುಡಿ, ಅಜವಾನ, ಚಿಟಿಕೆ ಸೋಡಾ, ಅರಿಶಿನ, ಒಂದೆರಡು ಚಮಚ ಎಣ್ಣೆ ಸೇರಿಸಿ. ನೀರು ನೋಡಿಕೊಂಡು ಹಾಕಿ, ಗಂಟಿಲ್ಲದಂತೆ ಕಲಸಿ. ತುಂಬಾ ದಪ್ಪಗೆ ಬೇಡ. ಈಗ ಎರಡು ತುಣುಕು ಬ್ರೆಡ್ಡಿಗೆ ಒಂದಕ್ಕೆ ಸಾಸ್ ಮತ್ತೊಂದಕ್ಕೆ ಪುದಿನ ಚಟ್ನಿ ಸವರಿ. ಆಲೂಗಡ್ಡೆ ಮಿಶ್ರಣ ತೆಳುವಾಗಿ ಹರಡಿ. ಇನ್ನೊಂದು ಬ್ರೆಡ್ಡಿಂದ ಮುಚ್ಚಿ ನಾಲ್ಕು ಭಾಗವಾಗಿ ಕತ್ತರಿಸಿ ಹೊಂಬಣ್ಣಕ್ಕೆ ಕರಿಯಿರಿ.

Uma Library

ಹರಾ ಭರಾ ಕಬಾಬ್

ಏನೇನು ಬೇಕು?

- ಹಸಿ ಬಟಾಣಿ ಎರಡು ಲೋಟ
- ಬೇಯಿಸಿದ ಆಲೂಗಡ್ಡೆ ಒಂದು ದೊಡ್ಡದು
- ಪಾಲಕ್ ಒಂದು ಕಟ್ಟು
- ಅರ್ಧ ಇಂಚು ಶುಂಠಿ, ಐದಾರು ಬೆಳ್ಳುಳ್ಳಿ, ಹಸಿ ಮೆಣಸಿನಕಾಯಿ ನಾಲ್ಕೈದು, ಒಂದು ಹಿಡಿ ಕೊತ್ತಂಬರಿ ಸೊಪ್ಪು
- ಪನ್ನೀರುತುರಿ ಕಾಲು ಲೋಟ
- ಹುರಿದ ಕಡಲೆಹಿಟ್ಟು ಎರಡು ಟೇಬಲ್ ಚಮಚ
- ಚಾಟ್ ಮಸಾಲೆ, ಗರಂ ಮಸಾಲೆ, ಜೀರಿಗೆ ಪುಡಿ, ಅಚ್ಚ ಖಾರದ ಪುಡಿ ಅರ್ಧರ್ಧ ಚಮಚ

ಮಾಡೋದು ಹೇಗೆ?

ನೀರು ಕುದಿಸಿ, ಸ್ವಚ್ಛಗೊಳಿಸಿದ ಪಾಲಕ್ ಹಾಗೂ ಹಸಿ ಬಟಾಣಿ ಸೇರಿಸಿ. ಒಂದು ನಿಮಿಷದ ನಂತರ ಸೋಸಿ. ಆರಿದ್ದಕ್ಕೆ ಶುಂಠಿ, ಹಸಿಮೆಣಸು, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು ಸೇರಿಸಿ. ಚೆನ್ನಾಗಿ ರುಬ್ಬಿ ಪಾತ್ರೆಗೆ ಹಾಕಿ. ಇದಕ್ಕೆ ಬೆಂದ ಆಲೂಗಡ್ಡೆ ತುರಿದು ಸೇರಿಸಿ. ಉಳಿದದ್ದೆಲ್ಲವನ್ನು ರುಬ್ಬಿಗೆ ತಕ್ಕಷ್ಟು ಹಾಕಿ. ಉಪ್ಪಿನೊಡನೆ ಕಲಸಿ. ಟಿಕ್ಕಿ ಮಾಡಿ ಶ್ಯಾಲೋ ಫ್ರೈ ಮಾಡಿ.



ಮೈಸೂರು ಬೋಂಡಾ

ಏನೇನು ಬೇಕು?

- ಮೈದಾ ಹಿಟ್ಟು ಒಂದೂವರೆ ಲೋಟ
- ಮೊಸರು ಒಂದು ಲೋಟ
- ಅಕ್ಕಿಹಿಟ್ಟು ಒಂದು ಚಮಚ
- ಜೀರಿಗೆ, ಅಜವಾನ ಅರ್ಧ ಚಮಚ
- ಸಕ್ಕರೆ ಕಾಲು ಚಮಚ
- ಸಣ್ಣಗೆ ಹೆಚ್ಚಿದ ಹಸಿಮೆಣಸು, ಶುಂಠಿ, ಕರಿಬೇವು, ಕೊತ್ತಂಬರಿ ಸೊಪ್ಪು
- ತೆಂಗಿನಕಾಯಿಯ ಚಿಕ್ಕ ಚೂರುಗಳು

ಮಾಡೋದು ಹೇಗೆ?

ಪಾತ್ರೆಯಲ್ಲಿ ಮೊಸರಿಗೆ ಜೀರಿಗೆ, ಅಜವಾನ, ಒಂದು ಟೇಬಲ್ ಚಮಚ ಎಣ್ಣೆ, ಕಾಲು ಚಮಚ ಸೋಡಾ ಮತ್ತು ಉಪ್ಪು ಸೇರಿಸಿ. ಚೆನ್ನಾಗಿ ಕಲಕಿ. ಇದಕ್ಕೆ ಹೆಚ್ಚಿದ ಹಸಿಮೆಣಸು ಮುಂತಾದವನ್ನು ಬೆರೆಸಿ. ಕೈಯಿಂದ ಚೆನ್ನಾಗಿ ಪುಡಿ ಮಾಡಿ. ನೋಡಿಕೊಂಡು ನೀರು ಬೆರೆಸಿ. ಇಡ್ಲಿ ಹಿಟ್ಟಿನ ಹದಕ್ಕೆ ಕಲಸಿ. ಅರ್ಧಗಂಟೆ ಬಿಟ್ಟು ಒದ್ದೆ ಕೈಯಿಂದ ಕಾದ ಎಣ್ಣೆಯಲ್ಲಿ ಬಿಟ್ಟು ಮಧ್ಯಮ ಉರಿಯಲ್ಲಿ ತಿರುವುತ್ತಾ ಕರಿಯಿರಿ. ಕಾಯಿಚಟ್ನಿಯೊಡನೆ ಸವಿದರೆ ರುಚಿ.



ಹಲಸಿನ ಬೀಜದ ಬಜ್ಜಿ

ಏನೇನು ಬೇಕು?

- ಬೇಯಿಸಿದ ಹಲಸಿನ ಬೀಜದ ತುರಿ ಒಂದು ಲೋಟ
- ಉದ್ದುದ್ದ ಹೆಚ್ಚಿದ ಈರುಳ್ಳಿ ಎರಡು
- ಹೆಚ್ಚಿದ ಕೊತ್ತಂಬರಿ ಸೊಪ್ಪು ಒಂದು ಲೋಟ
- ಹಸಿಮೆಣಸು, ಶುಂಠಿ ತರಿ ಎರಡು ಚಮಚ
- ಹೆಚ್ಚಿದ ಕರಿಬೇವು, ರುಚಿಗೆ ಉಪ್ಪು ಒಂದು ಚಮಚ ಜೀರಿಗೆ, ಕಾಲು ಚಮಚ ಅಜವಾನ
- ಅಕ್ಕಿಹಿಟ್ಟು ಮೂರು ಚಮಚ. ಜೋಳದ ಹಿಟ್ಟು ಮತ್ತು ಕಡಲೆ ಹಿಟ್ಟು ಎರಡೆರಡು ಚಮಚ
- ಇಂಗು ಕಾಲು ಚಮಚ, ಅಚ್ಚ ಖಾರದಪುಡಿ ಅರ್ಧ ಚಮಚ, ಗರಂ ಮಸಾಲೆ ಪುಡಿ ಕಾಲು ಚಮಚ

ಮಾಡೋದು ಹೇಗೆ?

ಬೇಕಾದ ಎಲ್ಲ ಪದಾರ್ಥಗಳನ್ನು ಹಾಕಿ ಮಿಶ್ರಣ ಮಾಡಿಕೊಳ್ಳಿ. ಸ್ವಲ್ಪ ನೀರು ಚಿಮುಕಿಸಿ ಕಲಸಿ. ಪಕೋಡ ಮಾಡಲು ಬೇಕಾದಷ್ಟು ದಪ್ಪಗೆ ಹಿಟ್ಟನ್ನು ಕಲಸಿ. ಕಾದ ಎಣ್ಣೆಯಲ್ಲಿ ಪಕೋಡಗಳನ್ನು ಹೊಂಬಣ್ಣಕ್ಕೆ ಕರಿಯಿರಿ. ಹಲಸಿನ ಬೀಜದ ಬದಲು ಎಲೆಕೋಸು, ಗಜರಿ, ಆಲೂಗಡ್ಡೆ ತುರಿ ಬಳಸಬಹುದು.



UAS Library

ಸುಧಾ
20 ಆಗಸ್ಟ್ 2026 ಬೆಲೆ: ₹ 25

- ಮುಕ್ಕಾಗುವುದೇ ಮರಕತ ದ್ವೀಪ
- ಪಂಚಮಿ ಉಂಡಿ ವಿಶೇಷ

ಕವಿತಾಳದ ಕೃಷಿ ಕವಿತೆ



UAS Library



ಐಟಿ ಉದ್ಯೋಗ ಬಿಟ್ಟು ಕೃಷಿ ಕ್ಷೇತ್ರ ಆಯ್ದುಕೊಂಡ ದಿಟ್ಟೆ

ಕವಿತಾಳದ ಕೃಷಿ ಕವಿತೆ

ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ, ಕಂಪ್ಯೂಟರ್ ಸೈನ್ಸ್ ಡಿಪ್ಲೊಮಾ, ಕೈಬೀಸಿ ಕರೆಯುತ್ತಿದ್ದ ಕಾರ್ಪೊರೇಟ್ ಉದ್ಯೋಗ... ಇವೆಲ್ಲವನ್ನೂ ಬದಿಗಿಟ್ಟು ಆಕೆ ಮೆಟ್ಟಿದ್ದು ಒಣಭೂಮಿಯನ್ನು. ಅದನ್ನೇ ಬದುಕಿನ ಕಣವಾಗಿಸಿಕೊಂಡ ಕೃಷಿ ಮಹಿಳೆಯೇ ಕವಿತಾ ಮಿಶ್ರಾ. ಹೇಳಿ ಕೇಳಿ ರಾಯಚೂರು 45 ಡಿಗ್ರಿ ಸೆಲ್ಸಿಯಸ್‌ನ ಸುಡುವ ಬಿಸಿಲಿಗೆ ಹೆಸರು. ಇದ್ದ ಒಂದಿಂಚು ನೀರಿನ ಆಸರೆಯಲ್ಲೇ ಶ್ರೀಗಂಧ ಬೆಳೆಯ ಕ್ರಾಂತಿ ಮಾಡಿದವರು. ಆರಂಭದ ಲಕ್ಷಾಂತರ ರೂಪಾಯಿ ನಷ್ಟ, ನೀರಿನ ಅಭಾವ ಮತ್ತು ಸಾಮಾಜಿಕ ಸವಾಲುಗಳನ್ನೇ ಮೆಟ್ಟಿಲಾಗಿಸಿಕೊಂಡ, ದೇಶವಿದೇಶಗಳ ಕೃಷಿ ವಿಜ್ಞಾನಿಗಳೇ ಬೆರಗಾಗುವಂತಹ 'ಸಮಗ್ರ ಕೃಷಿ ಪ್ರಯೋಗಶಾಲೆ' ಸೃಷ್ಟಿಸಿದ ಈ ಯಶೋಗಾಥೆ ನಿಜಕ್ಕೂ ಪ್ರತಿಯೊಬ್ಬ ರೈತನಿಗೆ ದಾರಿದೀಪ. ಓದಿ, ಇದು 'ಕವಿತಾಳದ ಕೃಷಿ ಕವಿತೆ'.



ತೆಂಗಿನ ಗಿಡಗಳೊಂದಿಗೆ ಕವಿತಾ ಮಿಶ್ರಾ
ಚಿತ್ರ ಲೇಖಕರದ್ದು

■ ಮಂಜುನಾಥ ಎನ್. ಬಳ್ಳಾರಿ

ಬರಗಾಲ ಮತ್ತು ಬಿರು ಬಿಸಿಲಿಗೆ ರಾಯಚೂರು ಪ್ರಸಿದ್ಧಿ. ಬಿಸಿಲ ನಗರಿ ಎಂದು ಕರೆಸಿಕೊಳ್ಳುವ ಜಿಲ್ಲೆಯಲ್ಲಿ ಶ್ರೀಗಂಧವನ್ನು ಬೆಳೆಯುವ ಮೂಲಕ ರಾಜ್ಯದ ರೈತರ ಗಮನಸೆಳೆದವರು ಕವಿತಾಳದ ಕವಿತಾ ಉಮಾಶಂಕರ ಮಿಶ್ರಾ. ಕೃಷಿ ವರ್ಗದ ಅಚ್ಚುಮೆಚ್ಚಿನ ಕೃಷಿಕ ಮಹಿಳೆ ಎನಿಸಿದ ಅವರು ಸುಸ್ಥಿರ, ಸುಧಾರಿತ ಕೃಷಿಗೆ ಆದ್ಯತೆ. ವ್ಯವಸಾಯದಲ್ಲಿ ನೂತನ ತಂತ್ರಜ್ಞಾನ ಅಳವಡಿಕೆ, ಸದಾ ಹೊಸತನದ ಪ್ರಯೋಗ ಮತ್ತು ರೈತರಿಗೆ ತೋಟಗಾರಿಕೆ ಬೆಳೆಗಳ ಕುರಿತು ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ಇದೀಗ ಅವರು ಸಾಮಾಜಿಕ ಜಾಲ ತಾಣಗಳಲ್ಲೂ ಸಕ್ರಿಯರಾಗಿದ್ದಾರೆ.

ಕವಿತಾ ಮಿಶ್ರಾ ಅವರು 18 ವರ್ಷಗಳ ತಮ್ಮ ಕೃಷಿ ಪಯಣದಲ್ಲಿನ ಅನುಭವಗಳನ್ನು ವೇದಿಕೆಗಳಲ್ಲಿ ಹಂಚಿಕೊಳ್ಳುವ ಹಲವು ವಿಡಿಯೊಗಳಿಗೆ ಜಾಲತಾಣಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅವರ ಈ ಯಶೋಗಾಥೆಯ ಹಿಂದೆ ಹಲವು ನೋವಿನ ಕಥೆಗಳಿವೆ ಎಂದು ಅವರು ಹೇಳಿಕೊಂಡಿರುವುದು ಉಂಟು.

ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ ಪದವಿ ಪಡೆದಿರುವ ಕವಿತಾ ಅವರಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಾವಕಾಶ ಒದಗಿ ಬಂದರೂ ಅದನ್ನು ತಿರಸ್ಕರಿಸಿ ವ್ಯವಸಾಯದಲ್ಲಿ ಬದುಕು ಕಟ್ಟಿಕೊಂಡಿದ್ದಾರೆ.

ತಮ್ಮ ಕೃಷಿಯಾನದ ಬಗ್ಗೆ ಅವರು ಹೇಳುವುದು ಹೀಗೆ...

ಗಂಡನದ್ದು ಸಂಪ್ರದಾಯಸ್ಥ ಕುಟುಂಬ. ಯಜಮಾನರದ್ದು ಸರ್ಕಾರಿ ಕೆಲಸ. ನಾನು ದೂರದ ಬೆಂಗಳೂರು, ಮೈಸೂರಿನಲ್ಲಿದ್ದುಕೊಂಡು ಕೆಲಸ ಮಾಡುವುದು ಮನೆಯವರಿಗೆ ಬೇಡವಾಗಿತ್ತು. ಅನಿವಾರ್ಯವಾಗಿ ಒದಗಿ

ತೋಟದ ರಕ್ಷಣೆಗೆ ಹಲವು ಕ್ರಮ

ಶ್ರೀಗಂಧದ ಮರಗಳು ಸೇರಿದಂತೆ ತೋಟದ ರಕ್ಷಣೆಗೆ ಹಲವು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದ್ದು 20ಕ್ಕೂ ಹೆಚ್ಚಿನ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ ಮತ್ತು 20ಕ್ಕೂ ಅಧಿಕ ಬೃಹತ್ ಎಲ್‌ಇಡಿ ದೀಪ ಅಳವಡಿಸಿ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ವಿಶೇಷವಾಗಿ ವಿವಿಧ ತಳಿಯ 18 ನಾಯಿಗಳನ್ನು ಸಾಕಲಾಗಿದ್ದು, ಅವು ದಿನದ 24 ಗಂಟೆಯೂ ತೋಟವನ್ನು ಕಾವಲು ಕಾಯುತ್ತವೆ.



JASRI Library



ಕೃಷಿ ಕಾರ್ಮಿಕರೊಂದಿಗೆ ತಾನೂ ಕೆಲಸ ಮಾಡುತ್ತಿರುವ ಕವಿತಾ ಮಿಶ್ರಾ



ಮಹಿಳೆಯರ ಸ್ವಾವಲಂಬನೆಗೆ ವಿಪುಲ ಅವಕಾಶ

ಕೃಷಿ ಕ್ಷೇತ್ರದಲ್ಲಿ ಮಹಿಳಾ ಸ್ವಾವಲಂಬನೆಗೆ ವಿಪುಲ ಅವಕಾಶಗಳಿವೆ. ಅವುಗಳನ್ನು ಕಡೆಗಣಿಸಿದ ಗ್ರಾಮೀಣ ಭಾಗದ ಮಹಿಳೆಯರು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸಗಳಿಗೆ ತೆರಳುತ್ತಾರೆ. ತಮ್ಮದೇ ಜಮೀನಿನಲ್ಲಿ ಕೃಷಿಯ ಜೊತೆಗೆ ಹಸು, ಎಮ್ಮೆ ಸಾಕಾಣಿಕೆ ಮಾಡಿದಲ್ಲಿ ಉಪ ಉತ್ಪನ್ನಗಳ ಮೂಲಕ ಆದಾಯ ಗಳಿಸಬಹುದು. ಆರೋಗ್ಯ ರಕ್ಷಣೆ ವಿಚಾರದಲ್ಲಿ ಜನರು ಇತ್ತೀಚೆಗೆ ಜಾಗೃತರಾಗುತ್ತಿದ್ದು, ಉತ್ತಮ ಕೃಷಿ ಉತ್ಪನ್ನ ಹಾಗೂ ಸಾವಯವ ಉತ್ಪನ್ನಗಳಿಗೆ ಆದ್ಯತೆ ನೀಡುತ್ತಿದ್ದಾರೆ. ತುಪ್ಪ ಸೇವನೆ ಆರೋಗ್ಯಕ್ಕೆ ಉತ್ತಮ ಎನ್ನುವುದು ಗೊತ್ತು, 1 ಕೆ.ಜಿ. ತುಪ್ಪಕ್ಕೆ 1 ಸಾವಿರ ರೂಪಾಯಿ ಕೊಟ್ಟು ಖರೀದಿಸುವ ನಾವು ಮಾರುಕಟ್ಟೆಯಲ್ಲಿ ತುಪ್ಪಕ್ಕಿರುವ ಬೇಡಿಕೆ ಅರಿತುಕೊಳ್ಳದೆ ಅಲ್ಪ ಸ್ವಲ್ಪ ಹಣಕ್ಕೆ ಹಾಲು, ಮೊಸರು ಮಾರಾಟ ಮಾಡಿ ತಾತ್ಕಾಲಿಕ ಆದಾಯಕ್ಕೆ ಮೊರೆ ಹೋಗುತ್ತೇವೆ. ಈ ತರಹದ ಮನೋಭಾವ ಬದಲಾಗಬೇಕು. ದೀರ್ಘಕಾಲದ ಆರ್ಥಿಕ ಸದೃಢತೆಗೆ ಯೋಚಿಸಬೇಕು. ಬೇಡಿಕೆ ಆಧರಿಸಿ ಬೆಳೆ ಬೆಳೆಯುವುದು ಮತ್ತು ಉಪ ಉತ್ಪನ್ನಗಳ ಮೂಲಕ ಲಾಭ ಗಳಿಸುವತ್ತ ಮುಂದಾಗಬೇಕು.



ಮಹಿಳೆಯರಿಗೆ ಕೃಷಿ ಪಾಠ

ಸಣ್ಣ ಹಿಡುವಳಿದಾರರಿಗೆ ಕಿವಿಮಾತು

ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಕೃಷಿ ಪದ್ಧತಿ ಅನುಸರಿಸುವ ಮೂಲಕ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಲ್ಲಿ ಸಣ್ಣ ಹಿಡುವಳಿದಾರರು ಆರ್ಥಿಕವಾಗಿ ಸದೃಢರಾಗಲು ಸಾಧ್ಯ. ಏಕ ಬೆಳೆ ಪದ್ಧತಿಯಿಂದ ಅನೇಕ ಸಲ ನಷ್ಟ ಅನುಭವಿಸುವಂತಾಗುತ್ತದೆ. ಸಮಗ್ರ ಕೃಷಿ ಪದ್ಧತಿಯಿಂದ ನಷ್ಟದ ಪ್ರಮಾಣ ಕಡಿಮೆಯಾಗುತ್ತದೆ. ನಿರಂತರ ಆದಾಯಕ್ಕೆ ಸಾಮಾನ್ಯ ಕೃಷಿ, ವರ್ಷದ ಆದಾಯಕ್ಕೆ ತೋಟಗಾರಿಕೆ ಹಾಗೂ ಭವಿಷ್ಯದ ಆರ್ಥಿಕತೆಗೆ ಅರಣ್ಯ ಕೃಷಿ ಅಳವಡಿಸಿಕೊಳ್ಳುವುದು ಸೂಕ್ತ ಎನ್ನುತ್ತಾರೆ ಕವಿತಾ.



ಜೇನು ಸಾಕಾಣಿಕೆಯಲ್ಲಿ...

ಬಂದ ಅವಕಾಶವನ್ನು ಬಿಡಬೇಕಾಯಿತು. ಪಿತ್ರಾರ್ಜಿತವಾಗಿ ಬಂದಿದ್ದ 8 ಎಕರೆ ಜಮೀನಿನಲ್ಲಿ ಪತಿ ಸಾಂಪ್ರದಾಯಿಕ ಬೆಳೆ ಬೆಳೆಯುತ್ತಿದ್ದರು, ಮನೆಯಲ್ಲಿ ಕುಳಿತು ಸಮಯ ಕಳೆಯುವುದು ಕಷ್ಟ ಎನಿಸಿದಾಗ ವ್ಯವಸಾಯ ಮಾಡುವ ಬಗ್ಗೆ ಯೋಚಿಸಿ ಜಮೀನಿನಲ್ಲಿ ಕೊಳವೆಬಾವಿ ಕೊರೆಯಿಸಿದೆ. ನಂತರ ದಾಳಿಂಬೆ ಮತ್ತು ಮಲ್ಲಿಗೆ ಹೂವಿನ ಕೃಷಿ ಕೈಗೊಂಡೆ. ನೀರಿನ ಕೊರತೆ, ಅನುಭವದ ಕೊರತೆ ಮತ್ತಿತರ ಕಾರಣಗಳಿಂದ ದಾಳಿಂಬೆ ಬೆಳೆಯಲ್ಲಿ ಲಕ್ಷಗಟ್ಟಲೆ ನಷ್ಟ ಅನುಭವಿಸುವಂತಾಯಿತು. ವ್ಯವಸಾಯ ಮುಂದುವರೆಸುವುದೋ, ಬೇಡವೋ ಎನ್ನುವ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀಗಂಧ ಬೆಳೆಯುವ ಪ್ರಯತ್ನಕ್ಕೆ ಕೈ ಹಾಕಿದೆ.

ಶ್ರೀಗಂಧ 25–30 ವರ್ಷಗಳ ದೀರ್ಘ ಕಾಲದ ನಂತರ ಫಲ ನೀಡುವ ವೃಕ್ಷ. ಹೀಗಾಗಿ ಅದರ ನಡುವೆ ತೋಟಗಾರಿಕೆ ಬೆಳೆ ಬೆಳೆದು ಆರ್ಥಿಕ ಸ್ಥಿರತೆಗೆ ಗಮನಹರಿಸಿ ತೋಟದಲ್ಲಿ ಒಂದಿನಿತು ಜಾಗವನ್ನೂ ವ್ಯರ್ಥವಾಗಲು ಬಿಡಬಾರದು ಎಂದು ತೀರ್ಮಾನಿಸಿ ರಕ್ತ ಚಂದನ, ದಾಳಿಂಬೆ, ಮೂಸಂಬಿ, ಪೇರಲ, ನೇರಳೆ, ತೆಂಗು, ಬಾರೆ, ಹಲಸು, ಸೀತಾಫಲ, ನಿಂಬೆಹಣ್ಣು, ರಾಮಫಲ, ಸಾಗವಾನಿ, ಸಾಂಬಾರು ಚಿಕ್ಕೆ, ನುಗ್ಗೆ, ನೆಲ್ಲಿ ಮರಗಳನ್ನು ಬೆಳೆಸಿದೆ. ಅವುಗಳಲ್ಲದೆ ಜೋಳ, ಸಜ್ಜೆ, ಶೇಂಗಾ, ತೊಗರಿ, ಹೆಸರು, ಗೋವಿನ ಜೋಳ ಬೆಳೆದು ಸಮಗ್ರ ಕೃಷಿ ಪದ್ಧತಿಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡೆ.

ನಿರಂತರ ಮತ್ತು ಹೆಚ್ಚುವರಿ ಆದಾಯಕ್ಕಾಗಿ ಹಸು, ಕುರಿ, ಕೋಳಿ, ಜೇನು ಸಾಕಾಣಿಕೆ ಮಾಡಲಾಯಿತು. ಪಶು ಸಂಗೋಪನೆಯಿಂದ ಸಾವಯವ ಗೊಬ್ಬರದಲ್ಲೂ ಸ್ವಾವಲಂಬಿಯಾಗುವ ಅವಕಾಶ ಒದಗಿಬಂತು. 20–30 ಡ್ರ್ಯಾಗನ್ ಫ್ರೈಟರ್ ತಳಿಯ ಹುಂಜಗಳನ್ನು ಸಾಕಿದ್ದು, ಅವುಗಳ ಮಾರಾಟದಿಂದ ವರ್ಷಕ್ಕೆ ಕನಿಷ್ಠ ₹1 ಲಕ್ಷ ಆದಾಯ ಗಳಿಸುತ್ತಿದ್ದೇನೆ.

ಸದಾ ಹೊಸತನದ ಪ್ರಯೋಗ

ಮಲೆನಾಡಿನಲ್ಲಿ ಬೆಳೆಯುವಂತಹ ತಳಿಗಳನ್ನು ಇಲ್ಲಿ

UAS Library



ಕೃಷಿ ಕವಿತೆ ಕೇಳಲು ಬಂದ ವಿದೇಶಿಗರು



ವಿದೇಶಿ ಕೃಷಿಕರೊಂದಿಗೆ ಕವಿತಾ ಮಿಶ್ರಾ

ವಿದೇಶಿ ಪ್ರವಾಸಿಗ ಭೇಟಿ

ರೈತರ ಸ್ಥಿತಿಗತಿಗಳು ಮತ್ತು ರೈತರ ಸಮಸ್ಯೆಗಳ ಕುರಿತು ಭಾರತದಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿದ್ದ ಗ್ರೀಕ್ ದೇಶದ ಅಥೆನ್ಸ್‌ನ ಪ್ರಜೆ ಕಾನ್ಸ್ ಟಂಟಿನೀಯಸ್ ಅವರು ಕವಿತಾ ಮಿಶ್ರಾ ಅವರ ತೋಟಕ್ಕೆ ಕೆಲ ವರ್ಷಗಳ ಹಿಂದೆ ಭೇಟಿ ನೀಡಿದ್ದರು.

ಕನ್ಯಾಕುಮಾರಿಯಿಂದ ಪ್ರವಾಸ ಕೈಗೊಂಡಿದ್ದ ಅವರು ಗೋವಾ ಮೂಲಕ ಜೆಲ್ಲೆಯ ಕವಿತಾಳ ಪಟ್ಟಣಕ್ಕೆ ಆಗಮಿಸಿದ್ದರು. ಕೃಷಿ ಇಲಾಖೆ ಮತ್ತು ವಿವಿಧ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಕವಿತಾ ಅವರ ಕುರಿತು ಮಾಹಿತಿ ಪಡೆದಿದ್ದಾಗಿ ತಿಳಿಸಿದರು. ಕೃಷಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅವರು ಸ್ವಯಂ ಸೇವಾ ಸಂಸ್ಥೆಯ ಸದಸ್ಯರಾಗಿದ್ದಾರೆ. ಭಾರತದಲ್ಲಿನ ದೊಡ್ಡ ಮತ್ತು ಸಣ್ಣ ಹಿಡುವಳಿದಾರರ ಕೃಷಿ ಪದ್ಧತಿ, ಕೂಲಿಕಾರ್ಮಿಕರ ಬಳಕೆ ಹಾಗೂ ಅವರಿಗೆ ನೀಡುತ್ತಿರುವ ಸೌಲಭ್ಯಗಳು, ಕೃಷಿ ಕ್ಷೇತ್ರದಲ್ಲಿ ಯಂತ್ರಗಳು ಮತ್ತು ಮಾನವರ ಬಳಕೆ ಸೇರಿದಂತೆ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು, ಕೊಳವೆಬಾವಿ ನೀರು ಬಳಕೆ ಇತರ ಸಮಸ್ಯೆ ಕುರಿತು ಅಧ್ಯಯನ ಕೈಗೊಂಡಿದ್ದರು.



ಮಹಿಳೆಯರಿಗೆ ಉದ್ಯೋಗ ಸೃಷ್ಟಿ

ಮಲ್ಲಿಗೆ, ಸೂಜಿ ಮಲ್ಲಿಗೆ, ಕನಕಾಂಬರಿ ಬೆಳೆಯಲಾಗಿದ್ದು, ಅದರಿಂದ ಮಹಿಳೆಯರಿಗೆ ಉದ್ಯೋಗ ಸೃಷ್ಟಿಸಲಾಗಿದೆ. ಹೂವುಗಳನ್ನು ಬಿಡಿಸಲು ಮಹಿಳಾ ಕೂಲಿಕಾರರನ್ನು ನೇಮಕ ಮಾಡಲಾಗಿದೆ. ಅವುಗಳ ಮಾರಾಟದ ನಂತರ ಮನೆಯಲ್ಲಿ ಅನೇಕ ಮಹಿಳೆಯರು ಹಾರಗಳನ್ನು ಕಟ್ಟಿ ಮಾರಾಟ ಮಾಡುತ್ತಾರೆ. ಹೀಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಸೃಷ್ಟಿಗೆ ಹೂವಿನ ಕೃಷಿ ನೆರವಾಗಿದೆ.

ಪ್ರಶಸ್ತಿ ಪುರಸ್ಕಾರಗಳು

ರೈತ ಮಹಿಳೆ ಕವಿತಾ ಮಿಶ್ರಾ ಅವರಿಗೆ ರಾಜ್ಯ ಮಟ್ಟದ ಹಲವು ಪ್ರಶಸ್ತಿಗಳು, ವಿವಿಧ ಸಂಘ ಸಂಸ್ಥೆಗಳು ಮತ್ತು ಕೃಷಿ, ತೋಟಗಾರಿಕೆ ವಿಶ್ವ ವಿದ್ಯಾಲಯಗಳು ವಿವಿಧ ಪ್ರಶಸ್ತಿ ನೀಡಿ ಗೌರವಿಸಿವೆ. ಇತ್ತೀಚೆಗೆ ಲಭಿಸಿದ ಪ್ರಮುಖ ಪುರಸ್ಕಾರಗಳ ಪಟ್ಟಿ ಹೀಗಿದೆ.

- ಕೇಂದ್ರ ಸರ್ಕಾರದ ಇನ್ನೋವೇಶನ್ ಫಾರ್ಮರ್ ಪ್ರಶಸ್ತಿ
- ಕೇಂದ್ರ ಸರ್ಕಾರದ ಹಾನರ್ ಆಫ್ ಎಕ್ಸೆಲೆನ್ಸಿ ಪುರಸ್ಕಾರ
- ಮಹೀಂದ್ರಾ ಆಂಡ್ ಮಹೀಂದ್ರಾ ಕಂಪನಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಫೈಡ್ ಪಾರ್ಲಿಮೆಂಟ್ ಔಟ್‌ರೀಚ್ ಮಿಲೇನಿಯರ್ ಫಾರ್ಮರ್
- ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಪ್ರೇರಣಾ ದೀಪ್ ಪ್ರಶಸ್ತಿ ನೀಡಿದೆ.



ಬೆಳೆದು ನಷ್ಟ ಅನುಭವಿಸುವುದಕ್ಕಿಂತ, ಇಲ್ಲಿನ 45 ಡಿಗ್ರಿ ಸೆಲ್ಸಿಯಸ್ ತಾಪಮಾನಕ್ಕೆ ಹೊಂದಿಕೊಳ್ಳುವಂತಹ, ವಿಶೇಷವಾಗಿ ಕಡಿಮೆ ಪ್ರಮಾಣದ ನೀರು ಬಳಸಿ ಬೆಳೆಯಬಹುದಾದ, 2ರಿಂದ 3 ವರ್ಷಗಳಲ್ಲಿ ಫಸಲು ನೀಡುವ ನೇರಳೆ, ಬೆಣ್ಣೆ ಹಣ್ಣು, ಅಣ್ಣಾ ಡೋರ್ ಸೆಟ್ ತಳಿ ಸೇಬು, ಹುಣಸೆ, ಪೇರಲ, ಸೀತಾಫಲ, ಮಾವು ಬೆಳೆದು ನಿರಂತರ ಆದಾಯಕ್ಕೆ ಕೊರತೆಯಿಲ್ಲದಂತೆ ಕಾಳಜಿವಹಿಸಿದೆ ಎಂದು ಕವಿತಾ ಹೇಳುತ್ತಾರೆ.

ಕೊರತೆ ನೀಗಿಸಲು ಸಾವಯವ ಪದ್ಧತಿ

ಮಳೆಕೊರತೆ, ತಾಪಮಾನ ಏರಿಕೆ, ಹವಾಮಾನ ವೈಪರೀತ್ಯ ಸೇರಿದಂತೆ ಇತರೆ ಸಮಸ್ಯೆಗಳಿಂದ ಕೊಳವೆಬಾವಿಗಳಲ್ಲಿ

NABL Library

ಸಂಪನ್ಮೂಲ ವ್ಯಕ್ತಿಯಾಗಿ ಕವಿತಾ

ಅಂತರರಾಷ್ಟ್ರೀಯ ಕೃಷಿ ಸಂಸ್ಥೆ 'ಇಕ್ರಿಸ್ಯಾಟ್ ಗೋಲ್ಡ್ ಅವಾರ್ಡ್' ನೀಡಿ ಗೌರವಿಸಿದೆ. ರಾಯಚೂರು ಕೃಷಿ ವಿಶ್ವ ವಿದ್ಯಾಲಯ 'ಶ್ರೇಷ್ಠ ಕೃಷಿಕ ಮಹಿಳೆ' ಪ್ರಶಸ್ತಿ ನೀಡಿದೆ. ಬೀದರ್‌ನ ಕೃಷಿ ವಿಜ್ಞಾನ ಕೇಂದ್ರ ನೇರಿದಂತೆ ತೋಟಗಾರಿಕೆ ಮತ್ತು ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಮತ್ತು ಕೃಷಿ, ತೋಟಗಾರಿಕೆ ಮೇಳಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಗಮನಸೆಳೆದಿದ್ದಾರೆ. ವಿದೇಶ ಪ್ರವಾಸಿಗರು, ನಬಾರ್ಡ್ ಅಧಿಕಾರಿಗಳು, ಈ ಹಿಂದಿನ ರಾಜ್ಯ ಕೃಷಿ ಸಚಿವರು, ಕರ್ನಾಟಕ ಮತ್ತು ತೆಲಂಗಾಣದ ಹಲವು ಬ್ಯಾಂಕ್ ಅಧಿಕಾರಿಗಳು, ತೋಟಗಾರಿಕೆ ಮತ್ತು ಕೃಷಿ ವಿಶ್ವ ವಿದ್ಯಾಲಯದ ಕುಲಪತಿಗಳು, ತರಬೇತಿ ಪಡೆಯುತ್ತಿರುವ ಡಿಪ್ಲೊಮಾ ವಿದ್ಯಾರ್ಥಿಗಳು, ಕೃಷಿ ವಿಜ್ಞಾನಿಗಳು, ತೋಟಕ್ಕೆ ನಿರಂತರ ಭೇಟಿ ನೀಡುತ್ತಾ ಅದೊಂದು ಕೃಷಿ ಪ್ರಯೋಗ ಶಾಲೆಯಾಗಿದೆ.



ಮಗುವಂತೆ ಸಲುಹಿದ ಸೀತಾಫಲ ಗಿಡದೊಂದಿಗೆ...

ಹಸಿರನ್ನೇ ಉಸಿರಾಗಿಸಿಕೊಂಡ ಕವಿತಾ ಮಿಶ್ರಾ

ಕೃಷಿಗೂ ಸೈ...
ಕುರಿ ಸಾಕಾಣಿಗೂ ಸೈ...
ಇದು ಕವಿತಾ ಕಟ್ಟಕೊಂಡ ಬದುಕಿನ ಭಾಗ



ಅಂತರ್ಜಲ ಮಟ್ಟ ಕುಸಿದಿದೆ. 8 ಎಕರೆ ಪ್ರದೇಶದಲ್ಲಿನ ವಿವಿಧ ಬೆಳೆಗಳಿಗೆ ಒಂದು ಕೊಳವೆಬಾವಿಯ 1 ಇಂಚು ನೀರು ಸಾಕಾಗುವುದಿಲ್ಲ. ನೀರಿನ ಕೊರತೆ ಸರಿದೂಗಿಸಲು ಪ್ರತಿಯೊಂದು ಗಿಡದ ಬಳಿ ಮೂರು ಅಡಿ ಅಂತರದಲ್ಲಿ ಗುಂಡಿಗಳನ್ನು ಅಗೆದು ಅದಕ್ಕೆ ಕೊಡಗಳಿಂದ ನೀರುಣಿಸುವ ಪ್ರಯತ್ನ ಮಾಡಲಾಗುತ್ತಿದೆ. ಯೂರಿಯಾ ಮತ್ತಿತರ ರಸಗೊಬ್ಬರ ಮತ್ತು ರಾಸಾಯನಿಕ ಬಳಕೆ ಮಾಡಿದಲ್ಲಿ ಗಿಡಗಳಿಗೆ ಹೆಚ್ಚಿನ ಪ್ರಮಾಣದ ನೀರು ಬೇಕಾಗುತ್ತದೆ. ಸಂಪೂರ್ಣ ಸಾವಯವ ಪದ್ಧತಿ ಅಳವಡಿಸಿಕೊಳ್ಳಲಾಗಿದೆ. ಹಸು, ಎಮ್ಮೆ, ಕುರಿ, ಕೋಳಿ ತ್ಯಾಜ್ಯವು ನೇರವಾಗಿ ಗಿಡಗಳಿಗೆ ತಲುಪುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ನೀರಿನ ಸದ್ಬಳಕೆಗೆ ಆದ್ಯತೆ ನೀಡಲಾಗಿದೆ. ಸಮಗ್ರ ಕೃಷಿ ಮತ್ತು ಅರಣ್ಯೀಕರಣದ ಮೂಲಕ ಜಾಗತಿಕ ತಾಪಮಾನ ಕಡಿಮೆ ಮಾಡುವುದು ಪ್ರಮುಖ ಉದ್ದೇಶ. ಋತುಮಾನ ಆಧರಿಸಿ ವರ್ಷ ಪೂರ್ತಿ ಒಂದಿಲ್ಲೊಂದು ಹಣ್ಣು ಬೆಳೆಯುವುದರ ಜೊತೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಯಥೇಚ್ಛವಾಗಿ ಮತ್ತು ಉತ್ತಮ ರೀತಿಯಲ್ಲಿ ಬಳಸಿಕೊಂಡು ಆಧುನಿಕ ಮತ್ತು ವೈಜ್ಞಾನಿಕ ವಿಧಾನಗಳಿಗೆ ಒತ್ತು ನೀಡಲಾಗಿದೆ ಎನ್ನುತ್ತಾರೆ ಕವಿತಾ ಮಿಶ್ರಾ.

ತಜ್ಞರ ಪ್ರಶಂಸೆ

ಇಂಡೋನೇಷ್ಯಾ ಮೂಲದ ಬೀಜರಹಿತ ನೇರಳೆ ಹಣ್ಣು ಬೆಳೆದ ಕವಿತಾ ಮಿಶ್ರಾ ಅವರ ಪರಿಶ್ರಮದ ಬಗ್ಗೆ ಕೃಷಿ ವಿಜ್ಞಾನಿಗಳಿಗೆ ಮೆಚ್ಚುಗೆ ಇದೆ. ಶ್ರೀಗಂಧ ಮತ್ತು ಮಾವಿನ ಮರಗಳಿಗೆ ಪ್ರೂನಿಂಗ್, ಜೀನುಸಾಕಣೆ ಮತ್ತು ಕೀಟಗಳ ನಿಯಂತ್ರಣಕ್ಕೆ ಸೋಲಾರ್ ಸಿಸ್ಟಮ್ ಅಳವಡಿಸಿಕೊಂಡಿರುವುದು, ಕೀಟ ಭಾದೆ ಮತ್ತು ರೋಗ ನಿಯಂತ್ರಣಕ್ಕೆ ಪಂಚಗವ್ಯ, ದಶಪರಣ, ಜೀವಾಮೃತ, ಸೆಗಣಿ ಮತ್ತು ಎರೆಹುಳು ಗೊಬ್ಬರದ ಬಳಕೆಯಿಂದ ರೋಗ ತಡೆಗಟ್ಟಲು ಅನುಸರಿಸಿದ ಯಶಸ್ವಿ ಕ್ರಮಗಳ ಬಗ್ಗೆ, ಶ್ರೀಗಂಧದ ಬೀಜಗಳನ್ನು ರಾಜಸ್ಥಾನದ ಮಾರುಕಟ್ಟೆಗೆ ಕಳುಹಿಸಿ ಮಾರಾಟ ಮಾಡುವುದರ ಬಗ್ಗೆ, ಸಸಿ ಬೆಳೆಸಿ ಮಾರುಕಟ್ಟೆ ದರಕ್ಕಿಂತ ಕಡಿಮೆ ಮೊತ್ತಕ್ಕೆ ಸ್ಥಳೀಯ ರೈತರಿಗೆ ಮಾರುವ ಬಗ್ಗೆ ಕೃಷಿ ತಜ್ಞರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

UASB Library

ಅಪರೂಪದ ಬುಡಕಟ್ಟು ಜನಾಂಗಗಳ ಆಶ್ರಯತಾಣ ಹಾಗೂ ಜಗತ್ತಿನ ವಿರಳ ಜೈವಿಕ ವೈವಿಧ್ಯದ ಭಂಡಾರವಾದ 'ಗ್ರೇಟ್ ನಿಕೋಬಾರ್ ದ್ವೀಪ' ಇಂದು ದೇಶದ ಅತಿ ದೊಡ್ಡ ಆರ್ಥಿಕ ಮತ್ತು ಮಿಲಿಟರಿ ಆಯಾಮದ ಚರ್ಚಾಕೇಂದ್ರವಾಗಿದೆ. ಚೀನಾದ ವ್ಯೂಹಾತ್ಮಕ 'ಮುತ್ತಿನ ಹಾರ' ನೀತಿಗೆ ಪ್ರತ್ಯುತ್ತರ ನೀಡಲು ಹಾಗೂ ಭಾರತವನ್ನು ಜಾಗತಿಕ ಸರಕು ಸಾಗಣೆಯ ಪ್ರಮುಖ ಕೇಂದ್ರವಾಗಿಸಲು ಕೇಂದ್ರ ಸರ್ಕಾರ ಈ ಯೋಜನೆಗೆ ಚಾಲನೆ ನೀಡಿದೆ. ಯೋಜನೆಗಾಗಿ ಲಕ್ಷಾಂತರ ಮರಗಳ ಮಾರಣಹೋಮ, ಅಪರೂಪದ ಕಡಲಾಮೆಗಳ ಸಂತಾನೋತ್ಪತ್ತಿ ತಾಣಗಳ ನಾಶ ಹಾಗೂ ಸಹಸ್ರಾರು ವರ್ಷಗಳಿಂದ ಹೊರಜಗತ್ತಿನ ಸಂಪರ್ಕವಿಲ್ಲದೆ ಬದುಕುತ್ತಿರುವ ಬುಡಕಟ್ಟುಗಳ ಅಸ್ತಿತ್ವಕ್ಕೆ ಧಕ್ಕೆಯಾಗುವ ಆತಂಕ ಎದುರಾಗಿದೆ. ದೇಶದ ಭದ್ರತೆ ಮತ್ತು ಆರ್ಥಿಕ ಪ್ರಗತಿ ಅನಿವಾರ್ಯತೆಯ ನಡುವೆ ನಾವು ತೆರುತ್ತಿರುವ ಪರಿಸರ ಹಾಗೂ ಮಾನವೀಯತೆಯ ಬೆಲೆ ಸಮರ್ಥನೀಯವೇ ಎಂಬ ಗಂಭೀರ ಪ್ರಶ್ನೆಯನ್ನು ಎತ್ತುತ್ತಾ, ಪರ-ವಿರೋಧದ ಒಳನೋಟಗಳನ್ನು ಈ ಲೇಖನ ವಿಶ್ಲೇಷಿಸುತ್ತದೆ.



ಮುಕ್ಕಾಗುವುದೇ ಮರಕತ ದ್ವೀಪ

ಅಭಿವೃದ್ಧಿಯ ಹೆದ್ದಾರಿಯೋ, ವಿನಾಶದ ಹಾದಿಯೋ?

ಎಚ್.ಆರ್. ಕೃಷ್ಣಮೂರ್ತಿ

ಪ್ರೀತಿಯಿಂದ 'ಮರಕತ ದ್ವೀಪ' ಎಂದು ಕರೆಸಿಕೊಳ್ಳುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹಗಳು ನಮ್ಮ ದೇಶದ ಜನಪ್ರಿಯ ಪ್ರವಾಸಿ ತಾಣಗಳಲ್ಲಿ ಒಂದು. ಪೋರ್ಟ್ ಬ್ಲೇರ್‌ನಲ್ಲಿರುವ ಸೆಲ್ಯುಲಾರ್ ಕಾರಾಗೃಹ, ಮಾನವ ವಿಜ್ಞಾನ ಮತ್ತು ನೌಕಾ ವಸ್ತು ಸಂಗ್ರಹಾಲಯಗಳು, ನೇತಾಜಿ ಸುಭಾಷ್ ದ್ವೀಪ, ಸಾಗರ ರಾಷ್ಟ್ರೀಯ ಉದ್ಯಾನವನ, ಹ್ಯಾವ್ ಲಾಕ್ ದ್ವೀಪ, ಸ್ಕೂಬಾ ಡೈವಿಂಗ್ ಮುಂತಾದವುಗಳಿಂದ ಆಕರ್ಷಿತರಾದ 10 ಲಕ್ಷ ಪ್ರವಾಸಿಗರು ಇಲ್ಲಿಗೆ ಪ್ರತಿ ವರ್ಷ ಭೇಟಿ ನೀಡುತ್ತಾರೆ. ಆದರೆ ಈ ಪ್ರವಾಸಿಗರಲ್ಲಿ ಯಾರೂ 'ಗ್ರೇಟ್ ನಿಕೋಬಾರ್ ದ್ವೀಪ'ಕ್ಕೇ ಭೇಟಿ ನೀಡುವುದಿಲ್ಲ. ಈ ವಿಚಿತ್ರ ಪರಿಸ್ಥಿತಿಗೆ ಹಲವಾರು ಕಾರಣಗಳಿವೆ.

ಗ್ರೇಟ್ ನಿಕೋಬಾರ್ ದ್ವೀಪ, ಪೋರ್ಟ್ ಬ್ಲೇರ್‌ನಿಂದ ವಾಯುಮಾರ್ಗವಾಗಿ 540 ಕಿ.ಮೀ. ಗಳ ದೂರದಲ್ಲಿದೆ. ಆದರೆ ಅಲ್ಲಿಗೆ ವಿಮಾನ ಸಂಚಾರ ವ್ಯವಸ್ಥೆಯಿಲ್ಲ. ಹೆಲಿಕಾಪ್ಟರ್ ಸೌಲಭ್ಯ ರಕ್ಷಣಾ ಸಿಬ್ಬಂದಿಗೆ ಮಾತ್ರ ಮೀಸಲು. ಸಾಗರ ಮಾರ್ಗದ ದೂರ 980 ಕಿಮೀಗಳು. ಈ ದೂರ ಕ್ರಮಿಸಲು ನೌಕೆಗಳಿಗೆ 30 ಗಂಟೆಗಳು ಬೇಕು. ವಾರದಲ್ಲಿ ಎರಡು ದಿನಗಳು ಮಾತ್ರ ಈ ಸೌಲಭ್ಯವಿದ್ದು ಮಾನ್ಸೂನ್ ಸಮಯದ ಮೇ-ಸೆಪ್ಟೆಂಬರ್ ಅವಧಿಯಲ್ಲಿ ನೌಕಾ ಸಂಚಾರ ರದ್ದಾಗುತ್ತದೆ.

ಮುಖ್ಯಪುಟ



ಗ್ರೇಟ್ ನಿಕೋಬಾರ್‌ನ ಮುಖ್ಯ ಪ್ರದೇಶವಾದ 'ಕ್ಯಾಂಪ್‌ಬೆಲ್ ಕೊಲ್ಲಿ' ಪ್ರದೇಶದಲ್ಲಿ, ಅತಿ ಕನಿಷ್ಠ ಸೌಲಭ್ಯವಿರುವ ಎರಡು ಪ್ರವಾಸಿ ಮಂದಿರಗಳನ್ನು ಬಿಟ್ಟರೆ ಉಳಿದಂತೆ ಅಲ್ಲಿ ಯಾವುದೇ ಹೋಟೆಲ್, ರೆಸಾರ್ಟ್, ಹೋಂ ಸ್ಟೇಗಳಿಲ್ಲ. ಇಂಟರ್‌ನೆಟ್ ಆಗಾಗ ಸಿಕ್ಕರೂ ಬಿಎಸ್‌ಎನ್‌ಎಲ್‌ಗೆ ಮಾತ್ರ ಸೀಮಿತ. ಇರುವ ಏಕಮಾತ್ರ ವೈದ್ಯಕೀಯ ವ್ಯವಸ್ಥೆಯೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರ. ಗ್ರೇಟ್ ನಿಕೋಬಾರ್ ದ್ವೀಪದ ಶೇ. 85ರಷ್ಟು ಭಾಗ ದಟ್ಟವಾದ, ಉಷ್ಣವಲಯದ ಮಳೆಯ ಅರಣ್ಯದಿಂದ ಕೂಡಿದ್ದು, ಶೋಂಪೇನ್ ಮತ್ತು ನಿಕೋಬಾರೀಸ್ ಬುಡಕಟ್ಟು ಜನರ ಪಾರಂಪರಿಕ ನೆಲೆಯಾಗಿರುವುದರಿಂದ, ಗ್ರೇಟ್ ನಿಕೋಬಾರ್ ದ್ವೀಪಕ್ಕೆ ಹೋಗಲು ವಿಶೇಷ ಪರವಾನಗಿ ಬೇಕು. ಸಂಶೋಧಕರಿಗೆ, ಭಾರತೀಯ ವೈಮಾನಿಕ, ನೌಕಾ ಸಿಬ್ಬಂದಿಗೆ ಮಾತ್ರ ಅಲ್ಲಿಗೆ ಪ್ರವೇಶಾವಕಾಶವಿದೆ.

ಗ್ರೇಟ್ ನಿಕೋಬಾರ್ ದ್ವೀಪದ ಈ 'ಇಲ್ಲ'ಗಳ ಸರಮಾಲೆಯ ಪರಿಸ್ಥಿತಿ ಮುಂದಿನ 25 ವರ್ಷಗಳ ಅವಧಿಯಲ್ಲಿ ಸಂಪೂರ್ಣವಾಗಿ ಬದಲಾಗಲಿದ್ದು, ಅದು ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿದ ಪ್ರವಾಸಿತಾಣ ಹಾಗೂ ಹಿಂದೂ ಮಹಾಸಾಗರದ ಪ್ರಮುಖ ಸಾಗರ ವಾಣಿಜ್ಯೋದ್ಯಮ ಕೇಂದ್ರವಾಗಿ ರೂಪುಗೊಳ್ಳಲಿದೆ. ಕೇಂದ್ರ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷೆಯ ಈ ಯೋಜನೆಯ ಅಂದಾಜು ವೆಚ್ಚ 81 ಸಾವಿರ ಕೋಟಿ ರೂಪಾಯಿ. ಆದರೆ ಈ ಯೋಜನೆಗೆ ವಿರೋಧ ಪಕ್ಷಗಳು, ಪರಿಸರ ವಿಜ್ಞಾನಿಗಳು, ನಾಗರಿಕ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ನ್ಯಾಯಾಲಯದಲ್ಲಿ ಅನೇಕ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ದಾಖಲಾಗಿ ಕಾನೂನಾತ್ಮಕ ಹೋರಾಟಗಳು ನಡೆಯುತ್ತಿವೆ. ಹಾಗಾದರೆ ಈ ವಿರೋಧ, ವಿವಾದಗಳಿಗೆ ಕಾರಣಗಳಾದರೂ ಏನು?

'ಹೊಲಿಸ್ಟಿಕ್ ಡೆವಲೆಪ್‌ಮೆಂಟ್ ಆಫ್ ಗ್ರೇಟ್ ನಿಕೋಬಾರ್ ಐಲ್ಯಾಂಡ್' ಹೆಸರಿನ ಈ ಯೋಜನೆಗೆ ವಿದ್ಯುಕ್ತವಾಗಿ ಕೇಂದ್ರ ಸರ್ಕಾರ 2021ರಲ್ಲಿ ಅನುಮೋದನೆ ನೀಡಿದೆ. 910 ಚದರ ಕಿ.ಮೀ. ವಿಸ್ತೀರ್ಣದ ಗ್ರೇಟ್ ನಿಕೋಬಾರ್ ದ್ವೀಪದ 166 ಚದರ ಕಿ.ಮೀ. ಪ್ರದೇಶದಲ್ಲಿ ಕಾರ್ಯಗತವಾಗಲಿರುವ ಈ ಯೋಜನೆಯಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳಿವೆ.

- ಮೊದಲನೆಯದಾಗಿ, ಗ್ಯಾಲತಿ ಕೊಲ್ಲಿ (ನೆಲದೊಳಗೆ ನುಗ್ಗಿರುವ ಕಡಲಿನ ವಿಶಾಲ ಚಾಚು) ಪ್ರದೇಶದಲ್ಲಿ ವಾರ್ಷಿಕವಾಗಿ 14.5 ದಶಲಕ್ಷ ಕಂಟೈನರ್‌ಗಳನ್ನು ನಿಭಾಯಿಸಬಲ್ಲ ಅಂತರರಾಷ್ಟ್ರೀಯ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್ ಬಂದರನ್ನು ನಿರ್ಮಿಸಲಾಗುತ್ತಿದೆ. 9.9 ಚದರ ಕಿ.ಮೀ. ಪ್ರದೇಶದಲ್ಲಿ, 44 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಬರಲಿರುವ ಈ ಟ್ರಾನ್ಸ್‌ಶಿಪ್‌ಮೆಂಟ್ ಅಥವಾ ಸರಕು ವರ್ಗಾವಣೆಯ ಬಂದರಿನಲ್ಲಿ ಅಲ್ಲಿಗೆ ಬರುವ ಬೃಹದಾಕಾರದ ಹಡಗುಗಳಿಂದ ಕಂಟೈನರ್‌ಗಳನ್ನು ಇಳಿಸಿ, ಅವುಗಳ ಸರಕು, ಸರಂಜಾಮುಗಳನ್ನು ವಿಂಗಡಿಸಿ, ನಂತರ ಅವುಗಳನ್ನು ಬೇರೆ ನೌಕೆಗಳಿಗೆ ವರ್ಗಾಯಿಸಿ ಮುಂದಿನ ನಿಗದಿತ ಗುರಿಯತ್ತ ಸಾಗಲು ಅನುವು ಮಾಡಿ ಕೊಡಲಾಗುತ್ತದೆ. 20 ಅಡಿ ಉದ್ದ, 8 ಅಡಿ ಅಗಲ ಮತ್ತು 8.5 ಅಡಿ ಎತ್ತರದ, (ಟಿಇಯು / ಟ್ವೆಂಟಿ ಫೂಟ್ ಈಕ್ವಿವಲೆಂಟ್ ಯೂನಿಟ್) 14.5 ದಶಲಕ್ಷ ಕಂಟೈನರ್‌ಗಳನ್ನು ಈ ಸರಕು ವರ್ಗಾವಣೆಯ ಬಂದರು ನಿರ್ವಹಿಸಲಿದೆ. ಸದ್ಯದಲ್ಲಿ ನಮ್ಮ ದೇಶಕ್ಕೆ ಬೃಹತ್ ಕಂಟೈನರ್‌ಗಳ ಮೂಲಕ ಬರುವ ಸರಕುಗಳಿಗಾಗಿ ನಾವು ಕೊಲೊಂಬೊ, ಸಿಂಗಪುರ ಮತ್ತು ಮಲೇಷಿಯಾದ ಕ್ಲಾಂಟ್ ಬಂದರುಗಳ ಮೇಲೆ ಅವಲಂಬಿತರಾಗಿದ್ದೇವೆ.

ಭಾರತಕ್ಕೆ ಬರುವ ಸರಕುಗಳ ಶೇ. 85ರಷ್ಟು ಭಾಗ ಮೊದಲು ಬೃಹತ್ ಕಂಟೈನರ್‌ಗಳಲ್ಲಿ ಈ ಬಂದರುಗಳಿಗೆ ಆಗಮಿಸಿ ಅಲ್ಲಿಂದ ಭಾರತಕ್ಕೆ ಬರುತ್ತಿದೆ ಎಂದು ಕೇಂದ್ರ ಸರ್ಕಾರದ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಮೂಲಗಳು ತಿಳಿಸಿವೆ. ಜಾಗತಿಕ ಮಟ್ಟದ ಸರಕು ಸಾಗಣೆಯ ಶೇ. 25ರಷ್ಟು ಭಾಗ ಸಾಗುವ ಮಲಕ್ಕಾ ಜಲಸಂಧಿಯಿಂದ ಕೇವಲ 70–80 ಕಿಲೋ ಮೀಟರ್‌ಗಳ ದೂರದಲ್ಲಿರುವ ಗ್ಯಾಲತಿ ಕೊಲ್ಲಿಗೆ ಈ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಹೀಗಾಗಿ ಗ್ಯಾಲತಿ ಕೊಲ್ಲಿಯಲ್ಲಿ ಅಂತರರಾಷ್ಟ್ರೀಯ ಸರಕು ವರ್ಗಾವಣೆಯ ಬಂದರನ್ನು ಸ್ಥಾಪಿಸಿ, ಅದನ್ನು ಸಿಂಗಪುರ, ಕ್ಲಾಂಟ್ ಬಂದರುಗಳ ಮಟ್ಟಕ್ಕೆ ಏರಿಸಿ, ಅಲ್ಲಿನ ಸರಕು ಸಾಗಣೆ ವ್ಯವಹಾರದ ಶೇ. 30ರಷ್ಟನ್ನು ಗ್ಯಾಲತಿ ಕೊಲ್ಲಿಯತ್ತ ತಿರುಗಿಸುವುದು ಈ ಯೋಜನೆಯ ಉದ್ದೇಶ. ಅದರೊಂದಿಗೆ ಸಿಂಗಪುರ, ಮಲೇಷಿಯಾ, ಇಂಡೊನೇಷಿಯಾ ಮತ್ತು ಅಲ್ಲಿಂದ ಮುಂದೆ ಜಪಾನ್ ಮತ್ತು ಕೊರಿಯಾ ದೇಶದ ಮಾರುಕಟ್ಟೆಗಳನ್ನು ತ್ವರಿತವಾಗಿ ಮುಟ್ಟಲೂ ಈ ಯೋಜನೆ ನೆರವಾಗಲಿದೆ.



ನಿಕೋಬಾರ್ ಪಿಜನ್

Archive Library



ಸ್ಟ್ರಿಂಗ್ ಆಫ್ ಪರ್ಲ್ಸ್ ಎಂದರೆ?

ಸ್ಟ್ರಿಂಗ್ ಆಫ್ ಪೆರಲ್ಸ್ ಅಥವಾ ಮುತ್ತಿನ ಹಾರ, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಪ್ರಬಲವಾಗುತ್ತಿರುವ ಚೀನಾ ದೇಶದ ಬಂದರುಗಳು, ಮೂಲ ಸೌಕರ್ಯಗಳು ಹಾಗೂ ರಾಜ ತಾಂತ್ರಿಕ ಸಂಬಂಧಗಳ ಜಾಲಕ್ಕೆ ಅಮೆರಿಕದ ವಿಶ್ಲೇಷಕರು ನೀಡಿರುವ ಹೆಸರು. ಈ ಹೆಸರನ್ನು ಚೀನಾ ಅಧಿಕೃತವಾಗಿ ಎಲ್ಲಿಯೂ ಬಳಸುವುದಿಲ್ಲ.

ಮುತ್ತಿನ ಹಾರದಲ್ಲಿರುವ ಮುತ್ತುಗಳೆಂದರೆ ಚೀನಾ ತನ್ನ ಅನುಕೂಲಕ್ಕಾಗಿ ವಿದೇಶಗಳ ಆಯಕಟ್ಟಿನ ಜಾಗಗಳಲ್ಲಿ ನಿರ್ಮಿಸಿರುವ ಬಂದರುಗಳು, ಮಿಲಿಟರಿ ನೆಲೆಗಳು ಹಾಗೂ ಮೂಲಸೌಕರ್ಯ ಯೋಜನೆಗಳು. ಸ್ಟ್ರಿಂಗ್ ಅಥವಾ ತಂತಿ, ಚೀನಾದಿಂದ ಮಧ್ಯ ಪ್ರಾಚ್ಯದವರೆಗೂ ಹಬ್ಬಿರುವ ಈ ಮುತ್ತುಗಳನ್ನು ಜೋಡಿಸಿರುವ ಸಾಗರ ಮಾರ್ಗಗಳ ಸೂಚಕ.

ಈ ಮುತ್ತಿನ ಹಾರದಲ್ಲಿ ಮುಖ್ಯವಾದ ಮುತ್ತುಗಳೆಂದರೆ ಪಾಕಿಸ್ತಾನದ ಗ್ವಾದರ್, ಶ್ರೀಲಂಕಾದಲ್ಲಿರುವ ಹಂಬನ್ ಟೋಟಾ, ಬಾಂಗ್ಲಾ ದೇಶದ ಚಿತ್ತಗಾಂಗ್ ಬಂದರುಗಳು, ಮ್ಯಾನ್‌ಮಾರ್‌ನಲ್ಲಿರುವ ಕ್ಯಾಉಕ್‌ಪ್ಯೆಯು ಮತ್ತು ಸಿಟ್ವೇ ಪೈಪ್ ಲೈನ್ ಯೋಜನೆಗಳು, ಕೆಂಪು ಸಮುದ್ರಕ್ಕೆ ಸಂಚಾರ ಸೌಲಭ್ಯ ಕಲ್ಪಿಸುವ ಸೂಡಾನ್ ಬಂದರಿನಲ್ಲಿರುವ ಮಿಲಿಟರಿ ನೆಲೆ, ದಕ್ಷಿಣ ಚೀನಾ ಸಾಗರದ ಹೈನಾನ್ ಪ್ರದೇಶದಲ್ಲಿರುವ ವುಡೀ ಐಲ್ಯಾಂಡ್, ಮಾಲ್ಡೀವ್ಸ್, ಕೆನ್ಯಾ ಮತ್ತು ಸೋಮಾಲಿಯಾಗಳಲ್ಲಿರುವ ಮುಖ್ಯ ಮೂಲಸೌಕರ್ಯ ಯೋಜನೆಗಳು.

ಈ ಮುತ್ತಿನ ಹಾರದ ಅಂತಿಮ ಉದ್ದೇಶ ಭಾರತವನ್ನು ಎಲ್ಲ ದಿಕ್ಕುಗಳಿಂದ ಸುತ್ತುವರೆದು ಅದರ ಮಹತ್ವಾಕಾಂಕ್ಷೆಯ ಯೋಜನೆಗಳಿಗೆ ಕಡಿವಾಣ ಹಾಕುವುದು ಮತ್ತು ಯುದ್ಧದ ಸಂದರ್ಭದಲ್ಲಿ ಈ ಎಲ್ಲ ಮುತ್ತುಗಳನ್ನೂ ಭಾರತದ ವಿರುದ್ಧದ ಕಾರ್ಯಾಚರಣೆಗೆ ಬಳಸಿಕೊಳ್ಳುವುದು ಎನ್ನಲಾಗಿದೆ. ಚೀನಾದ ಈ ವ್ಯೂಹ ರಚನೆಯ ಅರಿವಿರುವ ಭಾರತ, ಅದಕ್ಕೆ ಪ್ರತ್ಯುತ್ತರವೋ ಎಂಬಂತೆ ಇರಾನ್‌ನಲ್ಲಿ ಛಬ್ಬರ್ ಬಂದರು ನಿರ್ಮಾಣ, ಪೂರ್ವ ದೇಶಗಳ ನಡುವೆ ವಿಶೇಷ ಸಂಬಂಧದ ನೀತಿ (ಆಕ್ಟ್ ಈಸ್ಟ್ ಪಾಲಿಸಿ), ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ಜೊತೆಗೆ 'ಕ್ವಾಡ್' ಸಂಘಟನೆ, ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ, ಓಮಾನ್ ಮತ್ತು ಸೈಶಿಲಿಸ್‌ಗಳ ಜೊತೆಗೆ ವಿವಿಧ ಒಪ್ಪಂದಗಳು ಮುಂತಾದ ಕ್ರಮಗಳನ್ನು ಕೈಗೊಂಡಿದೆ.

- ಯೋಜನೆಯ ಎರಡನೆಯ ಭಾಗವೆಂದರೆ 3300 ಮೀಟರ್‌ಗಳ ಉದ್ದದ ರನ್‌ವೇ ಹೊಂದಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ. ವಿಮಾನ ಸಂಚಾರಕ್ಕೆ ಸಂಬಂಧಿಸಿದ ಯಾವ ಸೌಲಭ್ಯವೂ ಇಲ್ಲದ ಈ ಪ್ರದೇಶದಲ್ಲಿ, ಹೊಸದಾಗಿ ನಿಲ್ದಾಣದ ಕೆಲಸ ಆರಂಭವಾಗಬೇಕಿದೆ. ಅದಕ್ಕಾಗಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಯೋಜನೆಯೆಂಬ ಹೆಸರಿಡಲಾಗಿದೆ. 10.4 ಚದರ ಕಿ.ಮೀ. ಪ್ರದೇಶದಲ್ಲಿ ನಿರ್ಮಾಣವಾಗಲಿರುವ ಈ ವಿಮಾನ ನಿಲ್ದಾಣ, ವಾರ್ಷಿಕ ಒಂದು ಕೋಟಿ ಪ್ರವಾಸಿಗರಿಗೆ ಸಂಚಾರ ಸೌಲಭ್ಯ ಕಲ್ಪಿಸಲಿದೆ.
- ಯೋಜನೆಯ ಮೂರನೆಯ ಮುಖ್ಯ ಭಾಗವೆಂದರೆ, 16,700 ಹೆಕ್ಟೇರ್ ಪ್ರದೇಶದಲ್ಲಿ ಎಲ್ಲ ಅತ್ಯಾಧುನಿಕ ಸೌಲಭ್ಯಗಳನ್ನೂ ಒಳಗೊಂಡಿದ್ದು, 6,50,000 ಸ್ಥಳೀಯರು, ಕೆಲಸಗಾರರು ಹಾಗೂ ಪ್ರವಾಸಿಗರಿಗೆ ಆಶ್ರಯ ನೀಡಬಲ್ಲ ನಗರವೊಂದರ ನಿರ್ಮಾಣ.
- ನಾಲ್ಕನೆಯದಾಗಿ ಈ ಎಲ್ಲ ಕೆಲಸ ಕಾರ್ಯಗಳಿಗೆ ಬೇಕಾದ ಶಕ್ತಿಯ ಅಗತ್ಯವನ್ನು ಪೂರೈಸಲು 450 ಮೆಗಾವ್ಯಾಟ್ ಸಾಮರ್ಥ್ಯದ ಅನಿಲ ಹಾಗೂ ಸೌರವಿದ್ಯುತ್ ಆಧಾರಿತ ಮಿಶ್ರ ಶಕ್ತಿ ಸ್ಥಾವರದ ಸ್ಥಾಪನೆ ಆಗಲಿದೆ.

ಕೇಂದ್ರ ಸರ್ಕಾರದ 'ಸಾಗರ ಮಾತಾ ಯೋಜನೆ'ಗೆ ಅನುಸಾರವಾಗಿ ಅಭಿವೃದ್ಧಿ ಕಾರ್ಯ, ಭರದಿಂದ ಸಾಗುತ್ತಿರುವ ಈ ಯೋಜನೆ 2040ರ ವೇಳೆಗೆ 50000 ಉದ್ಯೋಗಗಳನ್ನು ಸೃಷ್ಟಿಸಿ, 30000 ಕೋಟಿ ರೂಪಾಯಿ ಆದಾಯ ತರುವ ನಿರೀಕ್ಷೆಯಿದೆ. 2028ರ ಅಂತ್ಯದ ವೇಳೆಗೆ ಈ ಯೋಜನೆಯ ಹಲವಾರು ಸೌಲಭ್ಯಗಳು ಬಳಕೆಗೆ ಮುಕ್ತವಾಗಲಿವೆ.

ಗ್ರೇಟ್ ನಿಕೋಬಾರ್ ಯೋಜನೆಯ ಅತ್ಯಂತ ಮುಖ್ಯವಾದ ಮತ್ತೊಂದು ಆಯಾಮವನ್ನು ಇಲ್ಲಿ ಕಾಣಬಹುದು. ಉದ್ದೇಶಿತ ಪ್ರದೇಶವು ಮಿಲಿಟರಿ ದೃಷ್ಟಿಯಿಂದ ಗ್ರೇಟ್ ನಿಕೋಬಾರ್ ದ್ವೀಪವಿರುವ ಅತ್ಯಂತ ಆಯಕಟ್ಟಿನ ಜಾಗ. ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ದಿಕ್ಕಿನಿಂದ ಬರಬಹುದಾದ ಎಲ್ಲ ಅಪಾಯಗಳನ್ನೂ ಸಮರ್ಥವಾಗಿ ಎದುರಿಸಲು ಈ ಜಾಗ ಹೇಳಿ ಮಾಡಿಸಿದಂತಿದೆ. ಈ ಎರಡು ಸಾಗರಗಳನ್ನು ಜೋಡಿಸುವ ಇಕ್ಕಟ್ಟಾದ 'ಚೋಕ್ ಪಾಯಿಂಟ್'ಗಳಿಂದೇ ಹೆಸರಾದ ಲೋಂಬೋಕ್, ಒಂಬೈ ಮತ್ತು ಸುಂಡಾ ಜಲಸಂಧಿಗಳ ಮೇಲೆ ಕಣ್ಣಿಟ್ಟು, ಅವುಗಳ ಮೂಲಕ ಸಾಗುವ ಹಡಗುಗಳ ಚಲನವಲನ ಗಮನಿಸುವ ಸಾಮರ್ಥ್ಯ ಈ ಯೋಜನೆಯಿಂದ ದೇಶಕ್ಕೆ ಲಭಿಸಲಿದೆ. ಇದರೊಂದಿಗೆ , ಅಗತ್ಯದ ಸಂದರ್ಭಗಳಲ್ಲಿ ವೈಮಾನಿಕ ಮತ್ತು ನೌಕಾ ಸೇನೆಗಳ ತುರ್ತು ಕಾರ್ಯಾಚರಣೆಯನ್ನು ನಡೆಸುವ ಮುಂಚೂಣಿ ನೆಲೆಯಾಗಿ ಗ್ರೇಟ್ ನಿಕೋಬಾರ್ ದ್ವೀಪ ರೂಪುಗೊಳ್ಳಲಿದೆ. ಭಾರತವನ್ನು ಎಲ್ಲ ದಿಕ್ಕುಗಳಿಂದ ಸುತ್ತುವರೆಯುತ್ತಿರುವ ಚೀನಾ ದೇಶದ 'ಸ್ಟ್ರಿಂಗ್ ಆಫ್ ಪರ್ಲ್ಸ್' ಮಿಲಿಟರಿ ಸಿದ್ಧಾಂತಕ್ಕೆ ಗ್ರೇಟ್ ನಿಕೋಬಾರ್ ಯೋಜನೆ ಪ್ರತ್ಯುತ್ತರವಾಗಲಿದೆ ಎಂಬುದು ಮಿಲಿಟರಿ ತಜ್ಞರ ಅಭಿಮತ.

ಆರ್ಥಿಕ ಅಭಿವೃದ್ಧಿ, ಮೂಲ ಸೌಕರ್ಯ ನಿರ್ಮಾಣ, ಉದ್ಯೋಗ ಸೃಷ್ಟಿ, ರಾಷ್ಟ್ರೀಯ ಭದ್ರತೆ ಮತ್ತು ಹಿಂದೂ ಮಹಾಸಾಗರದಲ್ಲಿ ಭಾರತದ ದೀರ್ಘಾವಧಿಯ ಪ್ರಭಾವಶಾಲಿ ವಾಣಿಜ್ಯೋದ್ಯಮ ಮತ್ತು ಮಿಲಿಟರಿ ಉಪಸ್ಥಿತಿಯನ್ನು ಸಾಧಿಸುವ ದಿಕ್ಕಿನಲ್ಲಿ ಗ್ರೇಟ್ ನಿಕೋಬಾರ್ ಯೋಜನೆ ರೂಪುಗೊಂಡು ಕಾರ್ಯಗತವಾಗಲಿದೆಯೆಂಬುದು ಕೇಂದ್ರ ಸರ್ಕಾರದ ಪ್ರಬಲ ಸಮರ್ಥನೆ. ಕೇಂದ್ರ ಸರ್ಕಾರದ ಈ ಬಹು ಮಹತ್ವಾಕಾಂಕ್ಷೆಯ ಯೋಜನೆಗೆ ವ್ಯಕ್ತವಾಗುತ್ತಿರುವ ವಿರೋಧಕ್ಕೆ ಕಾರಣಗಳನ್ನು ತಿಳಿಯುವ ಮೊದಲು ಗ್ರೇಟ್ ನಿಕೋಬಾರ್ ದ್ವೀಪದ ಬಗ್ಗೆ ಕೆಲವು ಮಾಹಿತಿಗಳ ಪರಿಚಯ ಅಗತ್ಯವಾಗುತ್ತದೆ.

ಗ್ರೇಟ್ ನಿಕೋಬಾರ್ ದ್ವೀಪದ ಒಟ್ಟು ವಿಸ್ತೀರ್ಣ 910 ಚದರ ಕಿ.ಮೀ. ಈ ದ್ವೀಪದ ಶೇ. 85ರಷ್ಟು ಭಾಗದಲ್ಲಿ, ಅಂದರೆ ಸುಮಾರು 770 ಚದರ ಕಿ.ಮೀ. ಪ್ರದೇಶದಲ್ಲಿ ದಟ್ಟವಾದ ಉಷ್ಣವಲಯದ ಮಳೆಯ ಅರಣ್ಯವಿದೆ. ಈ ಅರಣ್ಯದಲ್ಲಿ 2 ರಾಷ್ಟ್ರೀಯ ಉದ್ಯಾನವನಗಳು ಮತ್ತು ಒಂದು ಜೀವ ವಲಯ ಸಂರಕ್ಷಿತ ಪ್ರದೇಶವಿದ್ದು (ಗ್ರೇಟ್ ನಿಕೋಬಾರ್ ಬಯೋ ಸ್ಫಿಯರ್ ರಿಸರ್ವ್), ಅದಕ್ಕೆ ಯುನೆಸ್ಕೊ ಮಾನ್ಯತೆ ದೊರೆತಿದೆ. ಈ ದ್ವೀಪದ ದಕ್ಷಿಣದ ತುತ್ತ ತುದಿಯಲ್ಲಿ ಅತ್ಯಂತ ಅಪರೂಪವಾದ ಹವಳದಿಣ್ಣೆಗಳಿವೆ (ಕೋರಲ್ ರೀಫ್). ಅತ್ಯಪರೂಪದ ನಿಕೋಬಾರ್ ಮೆಗಾಪೋಡ್, ನಿಕೋಬಾರ್ ಫಿಜನ್ ಸೇರಿದಂತೆ ಸುಮಾರು

UKCR Library

200 ಪಕ್ಷಿ ಪ್ರಬೇಧಗಳಿವೆ. ಅವುಗಳಲ್ಲಿ ಅನೇಕವು ಈ ದ್ವೀಪದಲ್ಲಿ ಮಾತ್ರ ಕಾಣಸಿಗುವಂತಹವು. ಸುನಾಮಿಯ ವಿರುದ್ಧ ನೈಸರ್ಗಿಕ ರಕ್ಷಣೆಯನ್ನು ಒದಗಿಸುವ ಕಾಂಡ್ಲಾ ಕಾಡುಗಳನ್ನು (ಮ್ಯಾಂಗ್ರೂವ್ ಫಾರೆಸ್ಟ್) ಒಳಗೊಂಡಿರುವ ಈ ಪ್ರದೇಶ 'ರಾಮ್ಸರ್ ವೆಟ್ ಲ್ಯಾಂಡ್' ಮಾನ್ಯತೆ ಮತ್ತು ಗೌರವಕ್ಕೆ ಪಾತ್ರವಾಗಿದೆ.

ಪ್ರಪಂಚದ ಅತಿ ದೊಡ್ಡದಾದ 'ಜಯಂಟ್ ಲೆದರ್ ಬ್ಯಾಕ್ ಕಡಲಾಮೆ'ಗಳ ಮುಖ್ಯವಾದ ಸಂತಾನೋತ್ಪಾದನೆಯ ತಾಣ ಗ್ಯಾಲತಿ 'ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ' (ಹಂಟರ್‌ಗ್ಯಾದರರ್) ಗುಂಪಿಗೆ ಸೇರಿದ ಶೋಂಪೇನ್ ಬುಡಕಟ್ಟು ಜನ. ಸುಮಾರು 30,000 ವರ್ಷಗಳಿಂದ ಈ ದ್ವೀಪದ ಮೂಲ ನಿವಾಸಿಗಳಾಗಿದ್ದು, ಅವರ ಸಂಖ್ಯೆ 2011ರ ಜನಗಣತಿಯಂತೆ 229ಕ್ಕೆ ಇಳಿದಿದ್ದು, ಇತ್ತೀಚಿನ ಅಂದಾಜಿನಂತೆ 300ಕ್ಕಿಂತ ಕಡಿಮೆಯಿದೆ. ಈ



ದ್ವೀಪದ 130 ಚದರ ಕಿ.ಮೀ. ಪ್ರದೇಶದಲ್ಲಿ ಅವರು ಹರಡಿದ್ದು, ಅವರ ಪೂರ್ವಜರು ಬಾಳಿ ಬದುಕಿದ್ದ ಅನೇಕ ಪವಿತ್ರ ತಾಣಗಳಿವೆ. ಅವರೊಡನೆ ನಿಕೋಬಾರೀಸ್ ಗುಂಪಿಗೆ ಸೇರಿದ ಸುಮಾರು 1300 ಮೂಲ ಬುಡಕಟ್ಟು ಜನರೂ ಈ ದ್ವೀಪದಲ್ಲಿದ್ದಾರೆ. ಹೊರ ಜಗತ್ತಿನ ಜನರೊಡನೆ ಯಾವುದೇ ಸಂಪರ್ಕವಿರದ ಈ ಸಮುದಾಯಗಳಿಗೆ ನಾಗರಿಕ ಪ್ರಪಂಚದ ಮಾರಕ ರೋಗಗಳ ವಿರುದ್ಧ ಯಾವುದೇ ರೋಗ ಪ್ರತಿರೋಧಕ ಶಕ್ತಿಯೂ ಇಲ್ಲ.

ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಕಾರ್ಯಗತವಾಗಲಿರುವ ಅಭಿವೃದ್ಧಿ ಯೋಜನೆಗಳಿಂದ ದ್ವೀಪದ ಅನನ್ಯ ಜೀವ ವೈವಿಧ್ಯ, ಸೂಕ್ಷ್ಮ ಪರಿಸರ ಹೇಳ ಹೆಸರಿಲ್ಲದಂತೆ ನಾಶವಾಗಿ ಹೋಗಲಿದೆಯೆಂಬುದೇ ಜೀವ ವಿಜ್ಞಾನಿಗಳ, ಪರಿಸರ ವಿಜ್ಞಾನಿಗಳ, ಪರಿಸರ ಸಂಘಟನೆಗಳ,

'ಗ್ರೇಟ್ ನಿಕೋಬಾರ್ ಸರ್ಪ ಹದ್ದು'; ನಿಕೋಬಾರ್ ದ್ವೀಪದಲ್ಲಿ ಮಾತ್ರ ಕಂಡುಬರುವ, ಅತ್ಯಂತ ಅಪರೂಪದ ಹಾಗೂ ವಿಶ್ವದಲ್ಲೇ ಅತಿ ಕಡಿಮೆ ಗಾತ್ರದ ಹದ್ದುಗಳಲ್ಲಿ ಒಂದಾದ ಪರಭಕ್ಷಕ ಪಕ್ಷಿ.

ಚಿತ್ರಕೃಪೆ: ವಿಕಿಕಾಮನ್ಸ್

ಭಾರತದಲ್ಲಿ ಅಂತರರಾಷ್ಟ್ರೀಯ ಟ್ರಾನ್ಸ್‌ಶಿಪ್‌ಮೆಂಟ್ ಬಂದರು!

ತಿರುವನಂತಪುರ ಸಮೀಪದ 'ವಿಳಿಂಜಂ ಬಂದರು' ಭಾರತದ ಮೊತ್ತ ಮೊದಲ ಅಂತರರಾಷ್ಟ್ರೀಯ ಸರಕು ವರ್ಗಾವಣೆಯ ಬಂದರು ಆಗಿ 2024ರ ಡಿಸೆಂಬರ್‌ನಿಂದ ಕಾರ್ಯನಿರ್ವಹಿಸುತ್ತಿದೆ. ಅಮೆರಿಕ, ಯೂರೋಪ್, ಪೂರ್ವ ಮತ್ತು ಆಗ್ನೇಯ ಏಷ್ಯಾದ ಅನೇಕ ದೇಶಗಳೊಂದಿಗೆ ಸಂಪರ್ಕ ಸಾಧಿಸಿರುವ ವಿಳಿಂಜಂ, 2026ರ ಜೂನ್ ಅಂತ್ಯದವರೆಗಿನ ಅವಧಿಯಲ್ಲಿ 1.43 ದಶಲಕ್ಷ ಕಂಟೈನರ್‌ಗಳನ್ನು ನಿಭಾಯಿಸಿ ದಾಖಲೆ ಸ್ಥಾಪಿಸಿದೆ. ಇಲ್ಲಿ ನಿಭಾಯಿಸಿದ ಪ್ರತಿಯೊಂದು ಕಂಟೈನರ್ ಗಾತ್ರ 20 ಅಡಿ ಉದ್ದ, 8 ಅಡಿ ಅಗಲ ಮತ್ತು 8.5 ಅಡಿ ಎತ್ತರದಿಂದ ಕೂಡಿರುತ್ತದೆ. ಎರಡನೆಯ ಹಂತದಲ್ಲಿ 2029ರ ವೇಳೆಗೆ 'ವಿಳಿಂಜಂ'ನ ಸಾಮರ್ಥ್ಯ 5.7 ದಶಲಕ್ಷ ಕಂಟೈನರ್‌ಗಳಿಗೆ ಏರಲಿದೆ. 2028ರ ಅಂತ್ಯದ ವೇಳೆಗೆ ಗ್ಯಾಲತಿ ಕೊಲ್ಲಿಯಲ್ಲಿ ಬರಲಿರುವ ಸರಕು ವರ್ಗಾವಣೆಯ ಬಂದರು ಪ್ರಾರಂಭದಲ್ಲಿ 4 ದಶಲಕ್ಷ ಕಂಟೈನರ್‌ಗಳನ್ನು ಮತ್ತು ಅಂತಿಮವಾಗಿ 16 ದಶಲಕ್ಷ ಕಂಟೈನರ್‌ಗಳನ್ನು ನಿರ್ವಹಿಸಲಿದೆ. ಈ ಕ್ರಮಗಳ ಫಲವಾಗಿ ಕೊಲೊಂಬೋ, ಸಿಂಗಪುರ, ಕ್ಲಾಂಗ್ ಮತ್ತು ದುಬೈನ ಸಲಾಲ್ಹಾ ಸರಕು ವರ್ಗಾವಣೆಯ ಬಂದರುಗಳ ಮೇಲಿನ ಭಾರತದ ಅವಲಂಬನೆ ಗಮನಾರ್ಹವಾಗಿ ಇಳಿಯಲಿದೆ.



'ಟುಚೇಯಾ ನಿಕೋಬಾರಿಕಾ' ಎಂದು ಕರೆಯುವ ಈ ಜೇವಿ, ನಿಕೋಬಾರ್ ದ್ವೀಪಗಳ ಮಳೆಕಾಡುಗಳಲ್ಲಿ ಕಂಡುಬರುವ ಅಳಿಲನ್ನು ಹೋಲುವ ಅಪರೂಪದ ಸಸ್ತನಿ ಪ್ರಭೇದ.

ಚಿತ್ರಕೃಪೆ: ವಿಕಿಕಾಮನ್ಸ್

ವಿಪಕ್ಷಗಳ ತೀವ್ರ ವಿರೋಧಕ್ಕೆ ಕಾರಣ. ದ್ವೀಪದ ಮಳೆಯ ಅರಣ್ಯದಲ್ಲಿ ಇನ್ನೂ ಬೆಳಕಿಗೆ ಬಾರದ ಅನೇಕ ಪ್ರಾಣಿ, ಸಸ್ಯ ಜೀವಿಗಳಿರುವ ಸಾಧ್ಯತೆಗಳಿರುವಾಗ ಅಂತಹ ಅಮೂಲ್ಯ ಜೀವ ವೈವಿಧ್ಯದ ಭಂಡಾರವನ್ನು ಕಳೆದುಕೊಳ್ಳುವ ಯೋಜನೆಗಳು ಬೇಕೇ ಎಂಬುದು ಅವರ ಪ್ರಶ್ನೆ.

ಅದರೊಡನೆ ಭೂಕಂಪನ, ಸುನಾಮಿಗಳ ಅವಘಡಗಳಿಗೆ ಒಳಗಾಗುವ ಸಾಧ್ಯತೆಯಿರುವ ಪ್ರದೇಶದಲ್ಲಿ ಈ ಯೋಜನೆಗಳು ಅನಗತ್ಯವೆಂಬ ವಾದವೂ ಇದೆ. ಯೋಜನೆಯನ್ನು ಕಾರ್ಯಗತಗೊಳಿಸುವ ಭರದಲ್ಲಿ ಮಳೆಯ ಅರಣ್ಯದ ಸುಮಾರು 15 ಲಕ್ಷ ಮರಗಳನ್ನು ಕತ್ತರಿಸಿ, ಅವುಗಳ ಬದಲಿಗೆ ಅರಣ್ಯದ 97.3 ಚದರ ಕಿ.ಮೀ. ಪ್ರದೇಶದಲ್ಲಿ ನೆಡುತೋಪಿನ ಸಸಿಗಳನ್ನು ಬೆಳೆಸುವುದು ನಗೆಪಾಟಲಿನ ಸಂಗತಿಯೆಂಬುದಂತೂ ನಿಜ. ಆದರೆ ಕೇಂದ್ರ ಸರ್ಕಾರ ಈ ಯಾವುದನ್ನೂ ಒಪ್ಪದೇ ತನ್ನದೇ ಆದ ವಾದವನ್ನು ಮುಂದಿಡುತ್ತಿದೆ. ಅವುಗಳ ಮುಖ್ಯಾಂಶಗಳು ಹೀಗಿವೆ.

- ಯೋಜನೆಗಾಗಿ ಬಳಕೆಯಾಗುತ್ತಿರುವುದು ಗ್ರೇಟ್ ನಿಕೋಬಾರ್ ಪ್ರದೇಶದ ಒಟ್ಟು ಅರಣ್ಯದ ಶೇ. 18.2ರಷ್ಟು ಭಾಗ ಮಾತ್ರ.
- ಯೋಜನೆ ಪ್ರಾರಂಭವಾಗುವ ಮೊದಲು ಅವುಗಳಿಗೆ ಸಂಬಂಧಿಸಿದಂತೆ ವಿಶದವಾದ ಪರಿಸರ ಪರಿಣಾಮ ಮೌಲ್ಯ ಮಾಪನವನ್ನು ನಡೆಸಿ ಅಗತ್ಯವಾದ ಸುರಕ್ಷತಾ ಕ್ರಮಗಳನ್ನು ಯೋಜನೆಯಲ್ಲಿ ಅಳವಡಿಸಲಾಗಿದೆ.
- ಯಾವುದೇ ಸಂದರ್ಭದಲ್ಲಿ ಶೋಂಪೇನ್ ಮತ್ತು ನಿಕೋಬಾರೀಸ್ ಮೂಲ ನಿವಾಸಿಗಳನ್ನು ಅವರ ಪರಂಪರಾನುಗತವಾದ ನೆಲೆಗಳಿಂದ ಹೊರಗೆ ಎತ್ತಂಗಡಿ ಮಾಡುವುದಿಲ್ಲ. ಬುಡಕಟ್ಟು ಜನರ ಸಂರಕ್ಷಿತ ಪ್ರದೇಶದ ಬೇರೊಂದು ಭಾಗದಲ್ಲಿ ಅವರಿಗೆ ವಸತಿ ಕಲ್ಪಿಸಲಾಗುವುದು.
- ಮಾನವ ವಿಜ್ಞಾನ ಸರ್ವೇಕ್ಷಣ ಸಂಸ್ಥೆ (ಆಂತ್ರೋಪಾಲಜಿಕಲ್ ಸರ್ವೆ ಆಫ್

UAGI Library



ಇಂಡಿಯಾ) ಮತ್ತು ಬುಡಕಟ್ಟು ಜನಾಂಗದ ವ್ಯವಹಾರಗಳಿಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ಸಚಿವಾಲಯದೊಡನೆ ಈ ಯೋಜನೆಗಳ ವಿಷಯವಾಗಿ ವ್ಯಾಪಕವಾಗಿ ಚರ್ಚಿಸಿ ಒಪ್ಪಿಗೆ ಪಡೆಯಲಾಗಿದೆ.

- ಯೋಜನೆಗೆ ಅಗತ್ಯವಾದ ಕರಾವಳಿ ಆರ್ಥಿಕ ವಲಯದ ಅನುಮೋದನೆಯನ್ನು ಪಡೆಯಲಾಗಿದೆ.
- ಸುನಾಮಿ, ಭೂಕಂಪನ ಹಾಗೂ ಇನ್ನಿತರ ಅಪಾಯದ ಸಾಧ್ಯತೆಗಳ ಮೌಲ್ಯಮಾಪನವನ್ನು ಪರಿಣತರಿಂದ ನಡೆಸಲಾಗಿದ್ದು, ಅವರು ಸೂಚಿಸಿರುವ ಎಲ್ಲ ಮುಂಜಾಗ್ರತಾ ಕ್ರಮಗಳನ್ನೂ ಯೋಜನೆಯಲ್ಲಿ ಅಳವಡಿಸಲಾಗಿದೆ.
- ಯೋಜನೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ತನ್ನ ಅನುಮೋದನೆಯನ್ನು ನೀಡಿದೆ.

ಆದರೆ ಈ ಯಾವ ಕ್ರಮಗಳೂ ವಿಜ್ಞಾನಿಗಳು, ವಿರೋಧ ಪಕ್ಷಗಳು ಹಾಗೂ ಪರಿಸರ ಸಂಘಟನೆಗಳ ಅನುಮಾನವನ್ನು ದೂರಗೊಳಿಸಿಲ್ಲ. ಯೋಜನೆಗೆ ಸಂಬಂಧಿಸಿದಂತೆ ಪರಿಸರ ಪರಿಣಾಮ ಮೌಲ್ಯಮಾಪನ ನಡೆದಿರುವುದು ನಿಜ. ಆದರೆ ಅದು ಕ್ರಮಬದ್ಧ ರೀತಿಯಲ್ಲಿ ನಡೆದಿಲ್ಲ. ಬಂದರುಗಳ ನಿರ್ಮಾಣದ ಯೋಜನೆಗೆ ಸಂಬಂಧಿಸಿದಂತೆ ನಡೆಯುವ ಈ ಪ್ರಕ್ರಿಯೆಯಲ್ಲಿ ಮಳೆಗಾಲದ ಮುಂಚೆ, ಮಳೆಗಾಲ ಮತ್ತು ಮಳೆಗಾಲದ ನಂತರದ ಕನಿಷ್ಠ ಎರಡು ವರ್ಷಗಳಿಗೆ ಸಂಬಂಧಿಸಿದ ಮೂಲ ದತ್ತಾಂಶಗಳು ಲಭ್ಯವಿರಬೇಕು. ಆದರೆ ನಡೆದಿರುವ ಮೌಲ್ಯಮಾಪನದಲ್ಲಿ ಕೇವಲ ಕೆಲವೇ ತಿಂಗಳ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ವಿವರವಾದ ಮೌಲ್ಯಮಾಪನದ ಬದಲಿಗೆ 'ತ್ವರಿತ ಗತಿಯ ಪರಿಸರ ಪರಿಣಾಮ ಮೌಲ್ಯಮಾಪನ'ವನ್ನು ನಡೆಸಲಾಗಿದೆ. ಇದನ್ನು ರ್‍ಯಾಪಿಡ್ ಎನ್ವೈರನ್‌ಮೆಂಟಲ್ ಇಂಪ್ಯಾಕ್ಟ್ ಅಸೆಸ್ಮೆಂಟ್) ಎನ್ನಬಹುದು.

ಈ ರೀತಿಯ ತ್ವರಿತಗತಿಯ ಮೌಲ್ಯಮಾಪನ ನಡೆಯಿತು ಎಂಬ ಏಕಮಾತ್ರ ಕಾರಣದಿಂದ ಗುಜರಾತ್ ರಾಜ್ಯದ ಮುಂದ್ರಾ ಪಶ್ಚಿಮ ಬಂದರು ನಿರ್ಮಾಣ ಯೋಜನೆಗೆ ಕೇಂದ್ರ ಸರ್ಕಾರ 2015ರಲ್ಲಿ ಅನುಮತಿಯನ್ನು ನಿರಾಕರಿಸಿ ಆ ನಿರ್ಧಾರವನ್ನು ಲೋಕಸಭೆಯಲ್ಲಿ ಸಮರ್ಥಿಸಿಕೊಂಡಿತ್ತು. ಆದರೆ ಅದೇ ಪರಿಸರ ಸಚಿವಾಲಯ ಈಗ ನಿಕೋಬಾರ್ ಯೋಜನೆಗೆ ಅನುಮತಿ ನೀಡಿದೆ. 2023ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ನೇಮಿಸಿದ ಪರಿಣತರ ಸಮಿತಿ, ಗ್ರೇಟ್ ನಿಕೋಬಾರ್ ಯೋಜನೆಗೆ ಸಂಬಂಧಿಸಿದಂತೆ ನೀಡಿದ ವರದಿಯನ್ನು ಪರಿಸರ ಸಚಿವಾಲಯ, ಮಿಲಿಟರಿ, ದೇಶದ ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಕಾರಣ ನೀಡಿ, ಇಂದಿನವರೆಗೂ ಬಿಡುಗಡೆ ಮಾಡದಿರುವುದು ಅನುಮಾನಗಳಿಗೆ ಕಾರಣವಾಗಿದೆ. ಯೋಜನೆಯ ಮರು ಪರೀಕ್ಷೆಗೆ ಎಲ್ಲ ಆಸಕ್ತರೂ ಒತ್ತಾಯಿಸುತ್ತಿದ್ದಾರೆ.

ಆದರೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಈಗಾಗಲೇ ಈ ಯೋಜನೆಗೆ ಹಸಿರು ನಿಶಾನೆ ತೋರಿಸಿರುವುದರಿಂದ ಮರು ಪರಿಶೀಲನೆ ಅನಗತ್ಯವೆಂಬುದು ಸರ್ಕಾರದ ವಾದ. ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಕೋಲ್ಕತ್ತಾ ಉಚ್ಚ ನ್ಯಾಯಾಲಯ ಸರ್ಕಾರದ ವಾದವನ್ನು ತಳ್ಳಿಹಾಕಿ ವಿಚಾರಣೆಯನ್ನು ಮುಂದುವರೆಸಿದೆ.

ಗ್ರೇಟ್ ನಿಕೋಬಾರ್ ಯೋಜನೆಯನ್ನು ವಿರೋಧಿಸುತ್ತಿರುವವರಿಗೆ ರಾಷ್ಟ್ರೀಯ ಭದ್ರತೆ ಮತ್ತು ದೇಶದ ಸುರಕ್ಷೆಯ ಬಗ್ಗೆ ಕಾಳಜಿ ಇಲ್ಲ ಎನ್ನುವಂತಿಲ್ಲ. ರಾಷ್ಟ್ರೀಯ ಭದ್ರತೆ ಮತ್ತು ಪರಿಸರ ಸಂರಕ್ಷಣೆಯಂತಹ ಸೂಕ್ಷ್ಮ ವಿಷಯಗಳಲ್ಲಿ ಸಂಘರ್ಷ ಉಂಟಾದಾಗ ಯಾವುದಕ್ಕೆ ಆದ್ಯತೆ ನೀಡಬೇಕು? ರಾಷ್ಟ್ರೀಯ ಭದ್ರತೆ ಎಂದಾಗ ಅದು ಕೇವಲ ಮಿಲಿಟರಿ ದೃಷ್ಟಿಯ ಭದ್ರತೆಯೇ? ದೇಶದ ಪ್ರಜೆಗಳಿಗೆ ಸರ್ಕಾರ ನೀಡುವ ಆಹಾರದ ಭದ್ರತೆ, ಶುದ್ಧ ಕುಡಿಯುವ ನೀರಿನ ಭದ್ರತೆ, ಪರಿಸರ, ಶಿಕ್ಷಣ, ಉದ್ಯೋಗಗಳ ಭದ್ರತೆಗಳು ರಾಷ್ಟ್ರೀಯ ಭದ್ರತೆಗಳಲ್ಲವೇ ಎಂಬುದು ಯೋಜನೆಯ ವಿರೋಧಿಗಳ ಪ್ರಶ್ನೆ.

'ಶತ್ರುಗಳಿಂದ ದೇಶವನ್ನು ಕಾಪಾಡಲು ಅಗತ್ಯವಾದ ಎಲ್ಲ ರೀತಿಯ ಅಭಿವೃದ್ಧಿ ಯೋಜನೆಗಳನ್ನೂ ಸರ್ಕಾರ ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಕೈಗೊಳ್ಳಲಿ. ಆದರೆ ಅದನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಮಾಡಿ, ಹೋಟೆಲ್‌ಗಳು, ರೆಸಾರ್ಟ್‌ಗಳು, ಕ್ಯಾಸಿನೋಗಳಿಂದ ತುಂಬಿ ತುಳುಕುವಂತೆ ಮಾಡಿ, ಪ್ರಪಂಚದ ಅತಿ ವಿರಳ ಜೈವಿಕ ವೈವಿಧ್ಯ ಸಂಪನ್ಮೂಲವನ್ನು ಮತ್ತೆ ಸರಿಪಡಿಸಲು ಆಗದಂತಹ ದುಸ್ಥಿತಿಗೆ ತಳ್ಳುವುದು ಬೇಡ' ಎಂಬ ಕಳಕಳಿಯೂ ಯೋಜನೆಯನ್ನು ವಿರೋಧಿಸುತ್ತಿರುವವರ ನಿಲುವಿನಲ್ಲಿ ಕಂಡುಬರುತ್ತಿದೆ.

ಕೇವಲ 9000 ಜನರಿರುವ ಜಗತ್ತಿನ ಅತಿ ಸೂಕ್ಷ್ಮ ಪರಿಸರದ, ಮಹಾನ್ ಜೈವಿಕ ವೈವಿಧ್ಯದ ಭಂಡಾರ 6,50,000 ಜನಸಂಖ್ಯೆಯ ಅತ್ಯಾಧುನಿಕ ನಗರವಾಗಿ ಬದಲಾಗಬೇಕೇ? ದೇಶದ ಭದ್ರತೆಯ ಆದ್ಯತೆ ಮತ್ತು ಆರ್ಥಿಕ ಬೆಳವಣಿಗೆಗಳ ಭರವಸೆ ಆಕರ್ಷಕವಾಗಿದೆ ನಿಜ. ಆದರೆ ಅದಕ್ಕಾಗಿ ನಾವು ತೆರಬೇಕಾದ ಬೆಲೆ ಸಮರ್ಥನೀಯವೇ? ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಂಬರುವ ವರ್ಷಗಳಲ್ಲಿ ಗ್ರೇಟ್ ನಿಕೋಬಾರ್ ಯೋಜನೆಯ ಸ್ವರೂಪದಲ್ಲಿ ಬದಲಾವಣೆಗಳಾಗಲಿವೆಯೇ ಎಂಬುದು ಸದ್ಯದಲ್ಲಿ ನಡೆಯುತ್ತಿರುವ ರಾಜಕೀಯ ಹಾಗೂ ಕಾನೂನಾತ್ಮಕ ಹೋರಾಟಗಳ ಫಲಶ್ರುತಿ ನಿರ್ಧರಿಸಲಿದೆ.

ಪ್ರತಿಕ್ರಿಯಿಸಿ: feedback@sudha.co.in

ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ಪಿಐಎಲ್

2026ರ ಅರಣ್ಯ ಹಕ್ಕುಗಳ ಅಧಿನಿಯಮದಂತೆ, ಗ್ರೇಟ್ ನಿಕೋಬಾರ್ ದ್ವೀಪದ ಅರಣ್ಯಗಳಲ್ಲಿ ಮೊದಲಿನಿಂದಲೂ ವಾಸಿಸುತ್ತಿರುವ ಶೋಂಪೇನ್ ಮತ್ತು ನಿಕೋಬಾರೀಸ್ ಬುಡಕಟ್ಟು ನಿವಾಸಿಗಳಿಗೆ ಅಲ್ಲಿನ ಅರಣ್ಯಗಳ ಮೇಲೆ ಹಕ್ಕಿದೆ. ಅವರು ವಾಸಿಸುತ್ತಿರುವ ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಯೋಜನೆಗಳಿಗೆ ಬಳಸಿಕೊಳ್ಳುವ ಮುನ್ನ, ಆ ಸಮುದಾಯದ ಒಪ್ಪಿಗೆ ಬಹುಮುಖ್ಯ. ಅಂತಹ ಒಪ್ಪಿಗೆ ಪಡೆಯಲು 2022ರ ಆಗಸ್ಟ್ 12 ರಂದು ಕ್ಯಾಂಪ್‌ಬೆಲ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದವರು ಹೊರಗಿನಿಂದ ಹೋಗಿ ಅಲ್ಲಿ ನೆಲಸಿರುವ ಜನರೇ ಹೊರತಾಗಿ ಶೋಂಪೇನ್ ಮತ್ತು ನಿಕೋಬಾರೀಸ್ ಸಮುದಾಯಗಳ ಜನರಲ್ಲ ಎಂಬ ಆರೋಪವಿದೆ.

ಶೋಂಪೇನ್ ಸಮುದಾಯವನ್ನು 'ಪರ್ಟಿಕ್ಯುಲರ್‌ಲಿ ವರ್ಲನರಬಲ್ ಟ್ರೈಬಲ್ ಗ್ರೂಪ್' ಎಂದು ವರ್ಗೀಕರಿಸಲಾಗಿದ್ದು, ಅವರ ಭಾಷೆ ಹೊರಗಿನವರಿಗೆ ಅರ್ಥವಾಗುವುದಿಲ್ಲ. ಅವರನ್ನು ಸಂಪರ್ಕಿಸುವುದು ಅತ್ಯಂತ ಕಷ್ಟಸಾಧ್ಯ. ಹೀಗಿರುವಾಗ ಅವರ ಒಪ್ಪಿಗೆಯನ್ನು ಹೇಗೆ ಪಡೆಯಲಾಯಿತು ಎಂಬ ಬಗ್ಗೆ ಅನುಮಾನಗಳಿವೆ. ಅಂಡಮಾನ್ ಜನಜಾತಿ ವಿಕಾಸ್ ಸಮಿತಿಯಿಂದ ಒಪ್ಪಿಗೆ ಸಾಕು ಎಂಬುದು ಸರ್ಕಾರದ ವಾದ. ಆದರೆ ಹೀಗೆ ಪಡೆದ ಒಪ್ಪಿಗೆಯ ಸಿಂಧುತ್ವವನ್ನು, ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್ – ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್) ಮೂಲಕ ಕೋಲ್ಕತ್ತಾ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಈ ನಡುವೆ ನಿಕೋಬಾರೀಸ್ ಜನರ ಪರವಾಗಿ ಯೋಜನೆಗೆ ನೀಡಿದ್ದ ಒಪ್ಪಿಗೆಯನ್ನು, ಅಲ್ಲಿನ 'ಟ್ರೈಬಲ್ ಕೌನ್ಸಿಲ್' ಅಧ್ಯಕ್ಷರು ಹಿಂದಕ್ಕೆ ಪಡೆದಿದ್ದಾರೆ. ಶೋಂಪೇನ್ ಮತ್ತು ನಿಕೋಬಾರೀಸ್ ಸಮುದಾಯಗಳಿಂದ ಪಡೆದಿರುವ ಒಪ್ಪಿಗೆ 2006ರ ಅರಣ್ಯ ಹಕ್ಕು ಅಧಿನಿಯಮದಡಿಯಲ್ಲಿ ಕಾನೂನು ಬದ್ಧವಾಗಿಲ್ಲವೆಂದು ನ್ಯಾಯಾಲಯ ತೀರ್ಪು ನೀಡಿದರೆ ಗ್ರೇಟ್ ನಿಕೋಬಾರ್ ಯೋಜನೆಗೆ ಹಿನ್ನಡೆಯಾಗಲಿದೆ.

UASB Library

ತೆರೆಗೆ ಮರದ 'ಓಡ ಮರಾಯಿ'

ಕರಾವಳಿಯ ತುಳುವರು 'ಓಡ ಮರಾಯಿ' (ದೋಣಿ ಪೇಪಾಯಿ) ಎಂದು ಕರೆಯುವ ಈ ಸಾಧನ, ಮರೆತು ಹೋಗುತ್ತಿರುವ ಅಲ್ಲಿನ ಪುರಾತನ ಅಡುಗೆ ಮನೆಯ ಮರದ ಪರಿಕರವಾಗಿದೆ. ಮೂರು ನಾಲ್ಕು ದಶಕಗಳ ಹಿಂದೆ, ಮಣ್ಣಿನ ಅಥವಾ ಅಲ್ಯೂಮಿನಿಯಂ ಪಾತ್ರೆಯಲ್ಲಿ ಬೇಯಿಸಿದ ಗಂಜಿಯನ್ನು ಬಸಿಯಲು ಈ ಸಾಧನವನ್ನು ಬಳಸುತ್ತಿದ್ದರು. ಗಂಜಿಯ ಪಾತ್ರೆಯ ಬಾಯಿಯನ್ನು ಮರದ 'ಕೈಸೆಟ್ಟೆ' (ಹಿಡಿಯಿರುವ ಮರದ ತಟ್ಟೆಯಂತಹ ಸಾಧನ) ಅಥವಾ 'ತಟ್ಪೆ'ಯಿಂದ (ತಟ್ಪೆ= ಬಿಳಲ ನೈಸರ್ಗಿಕ ಜರಡಿ) ಮುಚ್ಚಿ ಓಡ ಮರಾಯಿಯ ಮೇಲೆ ಒಂದು ತುದಿಯಲ್ಲಿ ತಲೆಕೆಳಗಾಗಿಸಿ ಇಟ್ಟು ಗಂಜಿಯ ನೀರನ್ನು ಅದರೊಳಗೆ ಸುರಿಸುತ್ತಿದ್ದರು.

ಅನ್ನದ ಪಾತ್ರೆ ಬೀಳದಂತೆ ಹಿಂದಿನಿಂದ ಮರದ ಹಲಗೆ ಅಥವಾ 'ತೆರಿಯ' ಎನ್ನುವ ಬಿಳಲ ಅಥವಾ ಭತ್ತದ ಹುಲ್ಲಿನ ಹಗ್ಗದ ಚಕ್ರಾಕಾರದ ಆಸರೆಯನ್ನು ಆಧಾರವಾಗಿ ಓಡ ಮರಾಯಿಯ ನಡುಭಾಗದ ಮೇಲೆ ಇಡುತ್ತಿದ್ದರು. ಹೀಗೆ ಬಸಿದ ಗಂಜಿ ನೀರು ಓಡ ಮರಾಯಿಯ ಒಳಗೆ ಸಂಗ್ರಹವಾಗುತ್ತಿತ್ತು. ಮತ್ತದನ್ನು ಆಕಳುಗಳಿಗೆ ಅಕ್ಕಚ್ಚು ಆಹಾರವಾಗಿ ಬಳಸುತ್ತಿದ್ದರು. ಇತ್ತೀಚೆಗೆ ಇದನ್ನು ಮಂಗಳೂರಿನ ಪಿಲಿಕುಳದ ಗುತ್ತಿನ ಮನೆಯಲ್ಲಿ ವೀಕ್ಷಿಸುವ ಅವಕಾಶ ಲಭಿಸಿತು.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ





ಕೊಳಗೆಕಾಯಿ; ಸಂಪ್ರದಾಯದ ನೆನಪು

ಇದು ಬಲು ಅಪರೂಪದ ಕೊಳಗೆಕಾಯಿ ಅಥವಾ ಉಣ್ಣೆ ಹಣ್ಣು. ಹಬ್ಬಗಳ ಸಂದರ್ಭದಲ್ಲಿ ನಡೆಯುವ ಗೋಪೂಜೆಯ ವೇಳೆ ಇದನ್ನು ಹಸುಗಳ ಕುತ್ತಿಗೆಗೆ ಮಾಲೆಯಾಗಿ ಅಲಂಕರಿಸುವ ಸಂಪ್ರದಾಯವಿದೆ. ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಇದು ಸುಲಭವಾಗಿ ದೊರೆಯುತ್ತಿತ್ತು. ಆದರೆ ಇಂದು ಈ ಸಸ್ಯ ಬಹಳ ವಿರಳವಾಗಿದ್ದು, ಹೊಸ ತಲೆಮಾರಿಗೆ ಇದರ ಪರಿಚಯವೂ ಇರುವುದಿಲ್ಲ. ನಮ್ಮ ಸಂಪ್ರದಾಯದೊಂದಿಗೆ ನಂಟು ಹೊಂದಿರುವ ಇಂತಹ ಸಸ್ಯಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

–ಗಾಯತ್ರಿ ಎಸ್.ಎನ್., ಶಿವಮೊಗ್ಗ



ಕೋಳಿ ಕಾಲಿಗೆ ಲಾಕ್

ಚಿತ್ರದಲ್ಲಿನ ಕೋಳಿಗಳ ಕಾಲಿಗೆ ಹಾಕಿರುವ ವಸ್ತು ಅವುಗಳ ಸೌಂದರ್ಯ ಹೆಚ್ಚಿಸೋಕೆ ಅಲ್ಲ. ಬದಲಾಗಿ ಕೋಳಿಗಳು ತೋಟದಲ್ಲಿ ಕಾಲಿನಿಂದ ಮನಬಂದಂತೆ ಪರಚಾಡದಂತೆ ತಡೆಯಲು. ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ತೋಟತ್ತಾಡಿಯ ದಯಾನಂದರವರು ಕಂಡುಕೊಂಡ ಸರಳ ಉಪಾಯವಿದು. ತಾನು ಸಾಕಿದ ಕೋಳಿಗಳ ಕಾಲಿಗೆ ಸರಿಹೊಂದುವಂತೆ ಚಪ್ಪಲಿಯನ್ನು ಚಕ್ರವಾಗಿ ಕತ್ತರಿಸಿ ಅದನ್ನು ಎರಡು ಕಾಲುಗಳಿಗೆ ಜೋಡಿಸಿದ್ದಾರೆ. ಇದರಿಂದಾಗಿ ಕೋಳಿಗಳು ಕೃಷಿ ಬೆಳೆ, ತರಕಾರಿ ಗಿಡಗಳನ್ನು ಹಾಳುಗೆಡುವುದು ತಪ್ಪಿದೆ. ಕೋಳಿಗಳಿಗೆ ಹಾಕಿರುವ ಕಡಗಗಳು ಹಗುರವಾಗಿದ್ದು, ನಡೆದಾಡಲು ಕಷ್ಟವಾಗದು.

–ಚಂದ್ರಹಾಸ್ ಚಾರ್ಮಾಡಿ, ಬೆಳ್ತಂಗಡಿ



SBI library

ಇದು ಬಾಳೆಎಲೆಯ ದೊನ್ನೆ

ಬಾಳೆಎಲೆಯನ್ನು ಬೆಂಕಿಯಲ್ಲಿ ಬಾಡಿಸಿ, ಸಣ್ಣ ಪಾತ್ರೆಯ ಆಕಾರ ಬರುವ ರೀತಿಯಲ್ಲಿ ಕತ್ತರಿಸಿ, ಮಡಚಿ ತಯಾರಿಸುವ ಈ ಬಟ್ಟಲಿಗೆ 'ಬಾಳೆಎಲೆ ದೊನ್ನೆ' ಎಂದು ಹೆಸರು. ಪರಿಸರಸ್ನೇಹಿಯಾದ ಈ ದೊನ್ನೆಯಲ್ಲಿ ಶ್ರಾದ್ಧದ ದಿನ ಮಾಡಿದ ಅಡುಗೆಗಳನ್ನು ತುಂಬಿಸಿ ದೇವರಿಗೆ ನೈವೇದ್ಯ ಇಡಲು ಬಳಸುತ್ತಾರೆ. ಮೊದಲು ದೇವರ ಮುಂದೆ ಒಂದು ಬಾಳೆಎಲೆ ಇಟ್ಟು ಅದಕ್ಕೆ ಒಬ್ಬ ವ್ಯಕ್ತಿ ಉಣ್ಣುವಷ್ಟು ಅನ್ನ ಬಡಿಸಿ, ಆ ಎಲೆಯ ಸುತ್ತ ಇವುಗಳನ್ನು ಮನೆಯ ಸೊಸೆಯಂದಿರು ಅಥವಾ ಹೆಣ್ಣುಮಕ್ಕಳು ಇಡುತ್ತಾರೆ. ನಂತರ ಅದನ್ನು ಯಾರ ಶ್ರಾದ್ಧ ಮಾಡುತ್ತಾರೋ ಅವರ ಮನೆಯವರಿಗೆ, ರಕ್ತಸಂಬಂಧಿಗಳಿಗೆ ಊಟದ ಪಂಕ್ತಿಯಲ್ಲಿ ತಿನ್ನಲು ಇಡುತ್ತಾರೆ. ಉಳಿದವರಿಗೆ ಅದನ್ನು ತಿನ್ನಲು ಕೊಡುವಂತಿಲ್ಲ. ಶ್ರಾದ್ಧಕ್ಕೆ ಮಾತ್ರ ಈ ದೊನ್ನೆಯನ್ನು ಬಳಸುವಂಥದ್ದು.



ಉಳಿದಂತೆ ಮದುವೆ, ಉಪನಯನ, ಪೂಜೆ ಇತ್ಯಾದಿ ಯಾವ ಕಾರ್ಯಕ್ರಮಗಳಲ್ಲೂ ಇದನ್ನು ಬಳಸುವುದಿಲ್ಲ. ಇದು ಬ್ರಾಹ್ಮಣ ಸಮಾಜದಲ್ಲಿ ಹಿಂದಿನಿಂದಲೂ ನಡೆದು ಬಂದ ಆಚರಣೆ. ಆದರೆ ಈಗಿನವರಿಗೆ ಈ ದೊನ್ನೆಯನ್ನು ತಯಾರಿಸಲು ಬರುವುದಿಲ್ಲ. ಬಂದರೂ ತಯಾರಿಸಲು ಸಮಯ ಇರುವುದಿಲ್ಲ. ಹಾಗಾಗಿ ಈಗ ದೊನ್ನೆಯ ಬದಲಿಗೆ ಸ್ಟೀಲಿನ ಬಟ್ಟಲನ್ನು ಬಳಸುತ್ತಾರೆ. ಸಂಬಂಧಿಕರ ಮನೆಯಲ್ಲಿ ಅಪರೂಪಕ್ಕೆ ಎಂಬಂತೆ ಇದು ಕಂಡಿತು.

–ಸಹನಾ ಕಾಂತಬೈಲು, ಮಡಿಕೇರಿ







UASB Library

ಸವಿದಿರಾ ಪಂಚಮಿ ಉಂಡಿ?



ಉತ್ತರ ಕರ್ನಾಟಕ ಭಾಗದಲ್ಲಿ ನಾಗರ ಪಂಚಮಿ ಹಬ್ಬ ಬಲು ಜೋರು. ಪಂಚಮಿ ಹಬ್ಬಕ್ಕೆಂದೇ ಐದು ಬಗೆಯ ಉಂಡಿಗಳನ್ನು ತಯಾರಿಸಲಾಗುತ್ತದೆ. ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ತಯಾರಿಸುವುದು ಅಷ್ಟು ಸುಲಭವಲ್ಲ. ಹಬ್ಬದ 15 ದಿನಗಳ ಮುಂಚಿತವಾಗಿಯೇ ಉಂಡಿ ತಯಾರಿಗೆ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಅಂಥ ಒಂದಿಷ್ಟು ಉಂಡೆಗಳ ಸವಿರುಚಿ ಇಲ್ಲಿದೆ.

■ ಪೂರ್ಣಿಮಾ ಗೊಂದೆನಾಯ್ಕರ



ಶೇಂಗಾ ಉಂಡೆ

ಏನೇನು ಬೇಕು?

● ಶೇಂಗಾ (1 ಕೆ.ಜಿ) ● ಒಣಕೊಬ್ಬರಿ (1 ಕೊಬ್ಬರಿ ಬಟ್ಟಲು) ● ಬಿಳಿ ಎಳ್ಳು (ಅರ್ಧ ಲೋಟ) ● ಒಣಶುಂಠಿ (ಒಂದು ಟೇಬಲ್ ಚಮಚ) ● ಏಲಕ್ಕಿ (ಎರಡು) ● ಬೆಲ್ಲ (ಅರ್ಧ ಕೆ.ಜಿ) ● ಪುಟಾಣಿ ಹಿಟ್ಟು (ಒಂದು ಬಟ್ಟಲು)

ಮಾಡೋದು ಹೇಗೆ?

ಮೊದಲು ಕಾದ ಬಾಣಲೆಯಲ್ಲಿ ಶೇಂಗಾ ಕಾಳನ್ನು ಹುರಿದುಕೊಳ್ಳಬೇಕು. ಅರ್ಧ ಲೋಟದಷ್ಟು ಬಿಳಿ ಎಳ್ಳು ಹುರಿದುಕೊಳ್ಳಬೇಕು. ನಂತರ ತುರಿದಿಟ್ಟುಕೊಂಡ ಒಂದು ಒಣಕೊಬ್ಬರಿ ಪೌಡರ್ ಹುರಿದುಕೊಳ್ಳಬೇಕು. ಹುರಿದಿಟ್ಟುಕೊಂಡ ಶೇಂಗಾ ಕಾಳಿನ ಮೇಲಿನ ಸಿಪ್ಪೆ ಸ್ವಚ್ಛ ಮಾಡಿಕೊಂಡು ಒಂದು ಸುತ್ತು ಮಿಕ್ಸಿ ಜಾರ್‌ನಲ್ಲಿ ಹಾಕಿ ಪೌಡರ್ ಮಾಡಿಕೊಳ್ಳಬೇಕು. ನಂತರದಲ್ಲಿ ಒಂದು ಬಾಣಲೆಯಲ್ಲಿ ಉಂಡಿ ಕಟ್ಟಲು ಬೇಕಾಗುವಷ್ಟು ಬೆಲ್ಲವನ್ನು ಉಂಡೆ ಕಟ್ಟಲು ಬರುವಷ್ಟು ಗಟ್ಟಿ ಪಾಕ ಮಾಡಿಕೊಳ್ಳಬೇಕು. ಪಾಕ ಬಂದಮೇಲೆ ಅದಕ್ಕೆ ಮಿಶ್ರಣ ಮಾಡಿಟ್ಟುಕೊಂಡ ಶೇಂಗಾ ಪೌಡರ್‌ಗೆ ಕೊಬ್ಬರಿ ಪುಡಿ, ಶುಂಠಿ, ಏಲಕ್ಕಿ ಮಿಶ್ರಣ, ಪುಟಾಣಿ ಹಿಟ್ಟು, ಬಿಳಿ ಎಳ್ಳನ್ನು ಪಾಕದಲ್ಲಿ ಹಾಕಿ ಮಿಶ್ರಣ ಮಾಡಿ ಉಂಡಿ ಕಟ್ಟಬಹುದು.

ಹೆಸರು ಹಿಟ್ಟಿನ ಉಂಡೆ

ಏನೇನು ಬೇಕು?

● ಹೆಸರು ಹಿಟ್ಟು (1 ಕೆ.ಜಿ) ● ತುಪ್ಪ (ಅರ್ಧ ಕೆ.ಜಿ) ● ಸಕ್ಕರೆ (ಅರ್ಧ ಕೆ.ಜಿ) ● ಏಲಕ್ಕಿ (ಎರಡು) ● ದ್ರಾಕ್ಷಿ, ಬಾದಾಮಿ, ಗೋಡಂಬಿ (10 ಗ್ರಾಂ)

ಮಾಡೋದು ಹೇಗೆ?

ಹೆಸರು ಹಿಟ್ಟನ್ನು ಹಸಿ ವಾಸನೆ ಹೋಗುವವರೆಗೂ ತುಪ್ಪ ಹಾಕಿ ಚೆನ್ನಾಗಿ ಹುರಿದುಕೊಳ್ಳಬೇಕು.(ತುಪ್ಪ ಹೆಚ್ಚು ಬಳಸಿದಷ್ಟು ಒಳ್ಳೆಯದು), ಹಸಿ ವಾಸನೆ ಹೋದ ನಂತರ ಅದಕ್ಕೆ ಸಕ್ಕರೆ ಪೌಡರ್ ಹಾಕಿ ಮಿಶ್ರಣ ಮಾಡಬೇಕು. ನಂತರ ತುಪ್ಪದಲ್ಲಿ ಹುರಿದಿಟ್ಟುಕೊಂಡ ಗೋಡಂಬಿ, ದ್ರಾಕ್ಷಿ, ಬಾದಾಮಿ ಹಾಕಬೇಕು. ಹುರಿದುಕೊಂಡ ಮಿಶ್ರಣಕ್ಕೆ ಏಲಕ್ಕಿ ಪೌಡರ್ ಹಾಕಿ ಮಿಶ್ರಣ ಮಾಡಿ ಉಂಡೆ ಕಟ್ಟಬಹುದು. ಹೆಸರು ಹಿಟ್ಟಿನ ಉಂಡೆ ಬೇಸನ್ ಉಂಡೆ ರುಚಿಕೊಡುತ್ತದೆ.



VTU SB Library

ಗೋಧಿ ಹಿಟ್ಟಿನ ಉಂಡೆ

ಏನೇನು ಬೇಕು?

- ಗೋಧಿ ಹಿಟ್ಟು (ನಾಲ್ಕು ಲೋಟ)
- ತುಪ್ಪ (ಒಂದು ಲೋಟ)
- ಸಕ್ಕರೆ (ನಾಲ್ಕು ಲೋಟ)
- ಏಲಕ್ಕಿ (ಎರಡು)
- ಗೋಡಂಬಿ, ದ್ರಾಕ್ಷಿ (10 ಗ್ರಾಂ)

ಮಾಡೋದು ಹೇಗೆ?

ಒಂದು ಬಾಣಲೆಗೆ ಒಂದು ಲೋಟ ಕರಗಿಸಿದ ತುಪ್ಪ ಹಾಕಿ ಕಾಯಿಸಿಕೊಳ್ಳಬೇಕು. ಕಾದ ತುಪ್ಪಕ್ಕೆ ಗೋಡಂಬಿ ಹಾಕಿ ಸ್ವಲ್ಪ ಹುರಿದುಕೊಳ್ಳಬೇಕು. ನಂತರ ನಾಲ್ಕು ಲೋಟ ಗೋಧಿ ಹಿಟ್ಟು ಹಾಕಿಕೊಂಡು ಸಣ್ಣ ಪ್ರಮಾಣದ ಉರಿಯಲ್ಲಿ ಹುರಿದುಕೊಳ್ಳಬೇಕು. ನಂತರ ಕಾಲು ಲೋಟದಷ್ಟು ತುಪ್ಪ ಹಾಕಿ ಹುರಿದುಕೊಳ್ಳಬೇಕು. ಹುರಿದುಕೊಂಡ ನಂತರ ಒಲೆ ಆರಿಸಿ ಬಾಣಲೆ ಕೆಳಗಿಟ್ಟುಕೊಂಡು ಹುರಿದುಕೊಂಡ ಗೋಧಿ ಹಿಟ್ಟಿನ ಮಿಶ್ರಣಕ್ಕೆ ಏಲಕ್ಕಿ ಪುಡಿ, ಸ್ವಲ್ಪ ಸ್ವಲ್ಪ ಸಕ್ಕರೆ ಪುಡಿ ಹಾಕಿ ಮಿಶ್ರಣ ಮಾಡಬೇಕು. (ನಾಲ್ಕು ಲೋಟ ಗೋಧಿ ಹಿಟ್ಟಿಗೆ ನಾಲ್ಕು ಲೋಟ ಸಕ್ಕರೆ ಬಳಬೇಕು). ಉಂಡೆ ಕಟ್ಟಲು ಬರುವ ಹಾಗೆ ಮಿಶ್ರಣ ಮಾಡಬೇಕು. ಮಿಶ್ರಣ ಮಾಡಿದ ನಂತರ ದ್ರಾಕ್ಷಿ ಹಾಕಿ ಉಂಡೆಗಳನ್ನು ತಯಾರಿಸಿಕೊಳ್ಳಬಹುದು.



ಅಳ್ಳಿಟ್ಟು ಉಂಡೆ

ಏನೇನು ಬೇಕು?

- ಗೋಧಿ (500 ಗ್ರಾಂ)
- ಕಡ್ಲೆಕಾಳು (150 ಗ್ರಾಂ)
- ಬೆಲ್ಲ (250 ಗ್ರಾಂ)
- ಒಣಶುಂಠಿ (ಒಂದು ಸಣ್ಣ ಚೂರು)
- ಏಲಕ್ಕಿ (ಎರಡು)

ಮಾಡೋದು ಹೇಗೆ?

ಮೊದಲು ನಮಗೆ ಬೇಕಾಗುವಷ್ಟು ಗೋಧಿ, ಕಡಲೆಕಾಳುಗಳನ್ನು ಹೊಂಬಣ್ಣಕ್ಕೆ ಬರುವ ಹಾಗೇ ಹುರಿದುಕೊಳ್ಳಬೇಕು. ನಂತರ ಮಿಶ್ರಣ ಮಾಡಿಕೊಂಡು, ಗಿರಣಿ ಅಥವಾ ಬೀಸು ಕಲ್ಲಿನಲ್ಲಿ ಬೀಸಿ ಹಿಟ್ಟು ತಯಾರಿಸಿಕೊಳ್ಳಬೇಕು. ತಯಾರಿಸಿಕೊಂಡ ನಂತರ ನಾಲ್ಕು ಲೋಟ ಹಿಟ್ಟಿಗೆ ಎರಡು ಏಲಕ್ಕಿ, ಒಂದು ಟೀಬಲ್ ಚಮಚ ಒಣಶುಂಠಿ ಮಿಶ್ರಣವನ್ನು ಹಾಕಿ ಇಟ್ಟುಕೊಳ್ಳಬೇಕು. ಒಂದು ಬಾಣಲೆಯಲ್ಲಿ ಉಂಡಿ ಕಟ್ಟಲು ಅರ್ಧ ಕೆಜಿ ಬೆಲ್ಲವನ್ನು ಪಾಕ ಮಾಡಿಕೊಳ್ಳಬೇಕು. ಗಟ್ಟಿ ಪಾಕ ಬರುವವರೆಗೂ ಕುದಿಸಿ. ಪಾಕ ಬಂದಮೇಲೆ ಪಾಕಕ್ಕೆ ಬೇಕಾಗುವಷ್ಟು ಹಿಟ್ಟನ್ನು ಹಾಕಿ ಮಿಶ್ರಣಮಾಡಿ ಉಂಡೆಗಳನ್ನು ತಯಾರಿಸಬಹುದು.



ಅಳ್ಳು ಉಂಡೆ

ಏನೇನು ಬೇಕು?

- ಅಳ್ಳು (ನಾಲ್ಕು ಲೋಟ)
- ಬೆಲ್ಲ (250 ಗ್ರಾಂ)
- ಶುಂಠಿ (ಒಂದು ಟೀಬಲ್ ಚಮಚ)
- ಪುಟಾಣಿ ಹಿಟ್ಟು (ಒಂದು ಲೋಟ)

ಮಾಡೋದು ಹೇಗೆ?

ಮೊದಲು ಒಂದು ಬಾಣಲೆಗೆ ಬೆಲ್ಲ, ಸ್ವಲ್ಪ ನೀರು ಹಾಕಿ ಉಂಡೆ ಕಟ್ಟುವಷ್ಟು ಗಟ್ಟಿಯಾಗಿ ಪಾಕ ಬರುವವರೆಗೂ ಕುದಿಸಿ. ಪಾಕ ಬಂದ ಮೇಲೆ ಪುಟಾಣಿ ಹಿಟ್ಟಿನಲ್ಲಿ ಮಿಶ್ರಣ ಮಾಡಿಟ್ಟುಕೊಂಡ, (ಪುಟಾಣಿ ಹಿಟ್ಟು ಬಳಸದಿದ್ದರು ನಡೆಯುತ್ತದೆ) ಅಳ್ಳಿಗೆ ರುಚಿಗೆ ಬೇಕಾಗುವಷ್ಟು ಶುಂಠಿ, ಏಲಕ್ಕಿ ಪೌಡರ್ ಹಾಕಿ ಪಾಕದಲ್ಲಿ ಮಿಶ್ರಣ ಮಾಡಿ ಉಂಡೆಗಳನ್ನು ಕಟ್ಟಬಹುದು. ಪಾಕ ತಣ್ಣಗಾಗುವಷ್ಟರಲ್ಲಿ ಉಂಡೆಗಳನ್ನು ತಯಾರಿಸಿಕೊಳ್ಳಬೇಕು. ಬೆಲ್ಲದ ಬದಲು ಸಕ್ಕರೆಯನ್ನೂ ಬಳಸಬಹುದು.





UASB Library



ಅಡಿಕೆ ಮರದ ಕಾಲುಸಂಕ

ಅಡಿಕೆ ಬೆಳೆಯುವ ಪ್ರದೇಶಗಳ ಹಳ್ಳಿಗಳಲ್ಲಿ ಸಂಚರಿಸುವಾಗ, ಅಡಿಕೆ ಮರಗಳಿಂದ ಮಾಡಿದ ಅನೇಕ ಕೌಶಲಗಳ 'ಕಾಲುಸಂಕ'ಗಳು ಕ್ಷಣಕ್ಷಣಕ್ಕೂ ಕಣ್ಣಿಗೆ ಕಾಣುತ್ತವೆ. ಇವು ಅಲ್ಲಿ ನಿತ್ಯ ಓಡಾಡುವ ಜನರೇ ನಿರ್ಮಿಸಿಕೊಂಡ ತುರ್ತು ಅನುಕೂಲದ ಕಿರುದಾರಿಗಳು. ಮೆಟ್ಟಿಲಾಗಿ, ಕಿರುಸೇತುವೆಯಾಗಿ ಜನರಿಗೆ ಉಪಯುಕ್ತವಾದ ಇಂತಹ ಕಾಲುಸಂಕಗಳು ಯಾವುದೇ ಹೆಚ್ಚಿನ ಖರ್ಚು ಇಲ್ಲದೆ ಪ್ರತಿವರ್ಷವೂ ಹೊಸದಾಗಿ ಸಿದ್ಧಗೊಂಡು ಸಂಚಾರಕ್ಕೆ ಮುಕ್ತವಾಗುತ್ತವೆ.

ಮಳೆಗಾಲ ಶುರುವಾದಾಗ ಈ ಭಾಗದ ಸಣ್ಣಪುಟ್ಟ ಝರಿ, ಹಳ್ಳಗಳು ತುಂಬಿ ಹರಿಯುತ್ತವೆ. ಹೊಲಗದ್ದೆಗಳಿಗೆ ಅದೇ ದಾರಿಯಲ್ಲಿ ಓಡಾಡುವ ಜನರು ತುಂಬಿ ಹರಿಯುವ ಹಳ್ಳ ದಾಟಲು ಸರ್ಕಸ್ ಮಾಡಬೇಕು. ಅಂತಹ ಸಂದರ್ಭದಲ್ಲಿ ಕಾಂಕ್ರೀಟ್ ಸೇತುವೆ ವ್ಯವಸ್ಥೆ ಅಸಾಧ್ಯ. ಬದಲಿಗೆ ಸ್ಥಳೀಯ ಜನರೇ ಹಳ್ಳ ದಾಟಲು ಕಾಲುಸಂಕದ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಹೆಚ್ಚೆಂದರೆ ಒಂದು ವರ್ಷವಷ್ಟೇ ಬಾಳಿಕೆ ಬರಬಹುದಾದ ಇಂತಹ ತುರ್ತು ಸಂಕಗಳ ನಿರ್ಮಾಣಕ್ಕೆ ಕುಶಲತೆ ಬೇಕು. ಸುರಕ್ಷಿತ ಮತ್ತು ಸುಭದ್ರ ಸಂಕ ಕಟ್ಟಲು ಅನುಭವವೂ ಬೇಕು.

ಕೆಲವೊಮ್ಮೆ ಶಾಲೆಗೆ ಹೋಗುವ ಹಳ್ಳಿಯ ಮಕ್ಕಳೂ ಇದೇ ಕಾಲುಸಂಕದ ಮೇಲೆ ನಿತ್ಯವೂ ಓಡಾಡುತ್ತಾರೆ. ಸ್ಥಳೀಯವಾಗಿ ಸಿಗುವ ಅಡಿಕೆ ಮರ, ಅಡಿಕೆದಬ್ಬೆಯೇ ಇದಕ್ಕೆ ಕಚ್ಚಾವಸ್ತು. ಮಕ್ಕಳು, ವಯಸ್ಕಾದವರು ನಿರ್ಭಯವಾಗಿ ಓಡಾಡಲು ಅನುಕೂಲವಾಗುವ, ಹಾಗೆ ಮೆಟ್ಟಿಲು ಹೊಂದಿದ ಸುಂದರ ಮತ್ತು ಸುಭದ್ರ ಕಾಲುಸಂಕಗಳ ನಿರ್ಮಾಣದ ಹಿಂದಿರುವ ಕೌಶಲವನ್ನು ಮೆಚ್ಚಲೇಬೇಕು.

–ಜೆ.ಎಂ. ಬೊಮ್ಮಳ್ಳಿ



150 ವರ್ಷಗಳ ಪಾತಾಳ ಗರಡಿ



ಚಿತ್ರದಲ್ಲಿ ಕಾಣುತ್ತಿರುವ ವೃತ್ತಾಕಾರದ ಪಾತಾಳ ಗರಡಿಗೆ ಸುಮಾರು 150 ವರ್ಷಗಳ ಇತಿಹಾಸವಿದೆ. ಇದರ ಕೆಳಭಾಗದಲ್ಲಿ ಸುಮಾರು ನಾಲ್ಕು ಇಂಚು ಉದ್ದದ ಎಂಟು ಕೊಕ್ಕೆಗಳ ಸರಪಳಿಗಳಿದ್ದು, ಅವುಗಳನ್ನು ಮೂರು ಇಂಚು ಅಂತರದಲ್ಲಿ ಬೆಸುಗೆ ಹಾಕಲಾಗಿದೆ. ಹಿಂದೆಲ್ಲ ಮನೆಗಳ ಅಂಗಳದಲ್ಲಿ ಇರುತ್ತಿದ್ದ ಬಾವಿಗಳಲ್ಲಿ ನೀರು ಸೇದುವಾಗ ಆಕಸ್ಮಿಕವಾಗಿ ಬಿದ್ದ ಬಿಂದಿಗೆಗಳನ್ನು ತೆಗೆಯಲು ಈ ಪಾತಾಳ ಗರಡಿ ಬಳಸಲಾಗುತ್ತಿತ್ತು. ಪಾತಾಳ ಗರಡಿಯ ಮೇಲ್ಭಾಗದಲ್ಲಿನ ಉಂಗುರಕ್ಕೆ ಹಗ್ಗವನ್ನು ಕಟ್ಟಿ ಬಾವಿಗೆ ಅದನ್ನು ತಿರುಗಿಸಿದಾಗ ಕೊಕ್ಕೆಗಳಿಗೆ ಬಿಂದಿಗೆ ಸಿಲುಕಿಸಿ ಮೇಲಕ್ಕೆ ಎತ್ತಲಾಗುತ್ತಿತ್ತು.

ಬಾವಿಗಳ ನೀರಿನ ಬಳಕೆಯೇ ಅಪರೂಪ ಏನ್ನುವ ಇಂದಿನ ಪರಿಸ್ಥಿತಿಯು ಪಾತಾಳ ಗರಡಿಯ ಬಳಕೆಯನ್ನೂ ನಮ್ಮಿಂದ ದೂರವಾಗಿಸಿದೆ. ಹಿಂದೆ ಬಳಸುತ್ತಿದ್ದ ಪಾತಾಳ ಗರಡಿಯನ್ನು ಮಕ್ಕಳಿಗೆ ತೋರಿಸಲಷ್ಟೇ ಸೀಮಿತಗೊಳಿಸಲಾಗಿದೆ. ಶಿವಮೊಗ್ಗದ ನಮ್ಮ ತಾತನ ಮನೆಯಲ್ಲಿ ಕಳೆದ 40 ವರ್ಷಗಳಿಂದ ಬಾವಿ ಇದ್ದರೂ ಪಾತಾಳ ಗರಡಿಯ ಉಪಯೋಗದ ಸಂದರ್ಭ ಬಂದಿಲ್ಲ. ಈಚೆಗೆ ಮನೆ ಶುಚಿ ಮಾಡುವಾಗ ಇದು ಕಣ್ಣಿಗೆ ಬಿತ್ತು.

–ಶಿವಮೊಗ್ಗ ರಮೇಶ್, ಮೈಸೂರು



KABI Library

ನವಿಲಿನ ರೂಪದ ಐತಿಹಾಸಿಕ ಬಸದಿ



ಈ ಚಿತ್ರದಲ್ಲಿರುವುದು ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಟ್ಲ ಪೇಟೆಯ ಮಧ್ಯ ಭಾಗದಲ್ಲಿರುವ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿಯ ಬಸದಿ. ಇದು ಭಾರತದಲ್ಲೇ ಮೊದಲ ಬಾರಿಗೆ ನವಿಲಿನ ಆಕಾರದ ಸುಂದರ ವಿನ್ಯಾಸದಲ್ಲಿ ನಿರ್ಮಿಸಲಾದ ಜೈನ ಬಸದಿ. ದೇಶದ ಮೊದಲ ನವಿಲು ಬಸದಿ ಎಂದೇ ಪ್ರಖ್ಯಾತಿ ಪಡೆದಿದೆ. ಸುಮಾರು 800 ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಬಸದಿಯ ಗೋಪುರಗಳು ಮತ್ತು ಮುಂಭಾಗದ ವಿನ್ಯಾಸವನ್ನು, ನವಿಲು ಗರಿ ಬಿಚ್ಚಿ ಕುಳಿತಿರುವ ಆಕಾರವನ್ನು ಹೋಲುವಂತೆ ಪುನರ್ನಿರ್ಮಿಸಲಾಗಿದೆ. ನವಿಲಿನ ಬಣ್ಣವನ್ನೇ ಮೇಲ್ಛಾವಣಿಗೆ ಬಳಿಯಲಾಗಿದೆ. ಈ ಬಸದಿಯ ಸುತ್ತಲೂ ಕೆತ್ತನೆಗಳ ಜೊತೆಗೆ ಜೈನ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಅತ್ಯಂತ ಸರಳವಾಗಿ ನಿರೂಪಿಸಲಾಗಿದೆ. ಕಲ್ಲಿನಿಂದ ನಿರ್ಮಿಸಿದ ಸಿಂಹದ ಬಾಯೊಳಗೆ ತಿರುಗುವ ಚೆಂಡು ಹಾಗೂ ತಿರುಗುವ ಕಂಬ ಈ ಬಸದಿಯ ವಿಶೇಷಗಳಲ್ಲಿ ಪ್ರಮುಖವು.

—ಡಾ. ಮೈತ್ರಿ ಭಟ್, ವಿಟ್ಲ

ಚಿನ್ನದ ಹೊದಿಕೆ ಹೊದ್ದ ಕೀಟ



ಮನೆಯ ಜಗುಲಿ ಮೇಲೆ ಕುಳಿತಿದ್ದ ಸಮಯದಲ್ಲಿ ಥಟ್ಟನೆ ಫಳ ಫಳ ಹೊಳೆಯುತ್ತಿದ್ದ ಒಂದು ಕೀಟ ಕಣ್ಣಿಗೆ ಬಿತ್ತು. ಅದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಚಿನ್ನದ ಬಣ್ಣದ ಕವಚವನ್ನು ಮೈಮೇಲೆ ಹೊದ್ದುಕೊಂಡಂತೆ ಕಾಣುತ್ತಿತ್ತು. ಅದರ ಮೈ ಮೇಲೆ ಸೂರ್ಯನ ಬೆಳಕು ಬಿದ್ದಾಗ ಥಳ ಥಳ ಹೊಳೆದು ನಿಜವಾದ ಚಿನ್ನವನ್ನೇ ಧರಿಸಿದಂತೆ ಭಾಸವಾಗುತ್ತಿತ್ತು. ಚಿತ್ರದಲ್ಲಿರುವ ಕೀಟವು 'ಲೀಫ್ ಫೂಟೆಡ್ ಬಗ್' (Leaf footed Bug) ಜಾತಿಗೆ ಸೇರಿದೆ. ಇದರ ವೈಜ್ಞಾನಿಕ ಹೆಸರು 'ಹೋಮಿಯೋಸೆರೆಸ್' ಎಲೆಗಳನ್ನು ತಿನ್ನುವ ಕಾರಣ 'ಹಸಿರು ತಿಗಣೆ' ಎಂದು ಕರೆಯುತ್ತಾರೆ.

—ತನುಜಾ ಸೋಮಯಾಜಿ, ಬೆಂಗಳೂರು

ಅಣಬೆ ಹುಟ್ಟಿನ ಮೂಲ ನೋಡಿ...

ಸಸ್ಯಗಳು, ಪ್ರಾಣಿಗಳು ಹಾಗೂ ಬ್ಯಾಕ್ಟೀರಿಯಾಗಳಿಗಿಂತ ವಿಭಿನ್ನವಾಗಿರುವ ಶಿಲೀಂಧ್ರಗಳು 'ಯುಕಾರ್ಯೋಟಿಕ್' ಎಂಬ ದೊಡ್ಡ ಗುಂಪಿನ ಜೀವಿಗಳ ಸದಸ್ಯರು. ಅಣಬೆಗಳನ್ನು 'ಯಿಸ್ಟ್' ಹಾಗೂ 'ಬೂಸ್ಟ್' ಎಂಬ ವರ್ಗೀಕರಣದಿಂದ ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಕೊಳೆತ ಸಸ್ಯಜನ್ಯ ಅಥವಾ ಪ್ರಾಣಿಜನ್ಯ ವಸ್ತುಗಳ ಮೇಲೆ ಅಣಬೆ ಬೆಳೆಯುವುದನ್ನು ಕಾಣುತ್ತೇವೆ. ಈ ಪೈಕಿ ಆಹಾರವಾಗಿ ಬಳಸುವ ಮತ್ತು ವಿಷಕಾರಿಯಾದ ಅಣಬೆಗಳು ಇವೆ. ಚಿತ್ರದಲ್ಲಿ ಕಾಣಿಸುತ್ತಿರುವ ಅಪರೂಪದ ಅಣಬೆಯ ಮೂಲ ನೋಡಿದರೆ ಪ್ರಕೃತಿ ಎಷ್ಟು ವಿಸ್ಮಯ ಎಂದು ಅರಿವಾಗುತ್ತದೆ

—ಎಸ್.ಎನ್. ಚಂದ್ರಕಲಾ ಕೊಪ್ಪ





ಕಾಡುಹಣ್ಣು ಯಾರಿಗೆ?

ಹಣ್ಣೆಂದರೆ ಯಾರಿಗೆ ತಾನೇ ಇಷ್ಟವಿಲ್ಲ? ಎಲ್ಲ ವಯೋಮಾನದವರಿಗೂ ಹಣ್ಣುಗಳು ಅಚ್ಚುಮೆಚ್ಚಿನ ಆಹಾರ. ಮನುಷ್ಯ ತಾನು ತಿನ್ನುವ ಅನೇಕ ಹಣ್ಣುಗಳನ್ನು ತಾನೇ ಬೆಳೆಯುತ್ತಾನೆ ಮತ್ತು ಅದಕ್ಕಾಗಿ ವಿವಿಧ ರೀತಿಯ ಕೃಷಿ ಪದ್ಧತಿಗಳನ್ನು ಕೈಗೊಳ್ಳುತ್ತಾನೆ. ಹಣ್ಣಿನ ಗಿಡಗಳು ಸಮೃದ್ಧವಾಗಿ ಬೆಳೆಯಲು, ಬೆಳೆದ ಗಿಡಗಳು ಹೂ ಬಿಡಲು, ಹೂ ಬಿಟ್ಟ ಗಿಡಗಳು ಕಾಯಿಯಾಗಲು, ಕಾಯಿ ಹಣ್ಣಾಗಲೂ... ಹೀಗೆ ಪ್ರತಿ ಹಂತದಲ್ಲೂ ಒಂದಲ್ಲ ಒಂದು ರಾಸಾಯನಿಕಗಳನ್ನು ಬಳಕೆ ಮಾಡುತ್ತಾನೆ. ರಾಸಾಯನಿಕಗಳ ಮಜ್ಜನದೊಂದಿಗೆ ಹುಟ್ಟಿ ಬೆಳೆದ ಹಣ್ಣೊಂದು ಮಾರುಕಟ್ಟೆ ಪ್ರವೇಶಿಸುವ ಮೊದಲು ಮತ್ತೊಮ್ಮೆ ವಿವಿಧ ರೀತಿಯ ಬಣ್ಣಗಳಿಗೋ, ರಾಸಾಯನಿಕಗಳಿಗೋ ಒಡ್ಡಿಕೊಳ್ಳುತ್ತದೆ. ಇಂತಹ ಹಣ್ಣುಗಳನ್ನು ಹೆಚ್ಚು ಹಣ ಕೊಟ್ಟು ಖರೀದಿಸುವ ನಾವು ಅವುಗಳನ್ನು ತಿನ್ನುವುದರ ಮೂಲಕ ರೋಗಗಳನ್ನು ಆಹ್ವಾನಿಸುತ್ತಿದ್ದೇವೆ. ರಾಸಾಯನಿಕಗಳಿಲ್ಲದೇ ಕೃಷಿ ಸಾಧ್ಯವಿಲ್ಲ ಎಂಬಂತೆ ಮಾಡಿರುವ ಈ ಬಂಡವಾಳಶಾಹಿ ವ್ಯವಸ್ಥೆಯನ್ನು ಅಣಕಿಸುವಂತೆ ನಿಸರ್ಗವೂ ಅನೇಕ ಹಣ್ಣುಗಳನ್ನು ಬೆಳೆಯುತ್ತದೆ.

ಚಿತ್ರದಲ್ಲಿರುವ ಹಣ್ಣುಗಳು ನಿಸರ್ಗದ ಮಡಿಲಲ್ಲಿ ಯಾವುದೇ ರೀತಿಯ ಕೃಷಿ ಮತ್ತು ರಾಸಾಯನಿಕಗಳ ಸ್ಪರ್ಶವಿಲ್ಲದೇ ಸ್ವಾಭಾವಿಕವಾಗಿ ಬೆಳೆದಿರುವ ಕಾಡುಹಣ್ಣುಗಳು. ಕವಳೆ, ಕಾರೆ, ಬಿಕ್ಕೆ, ಸೀತಾಫಲ ಮುಂತಾದ ಕಾಡು ಹಣ್ಣುಗಳನ್ನು ಪೋಷಿಸುವ ಪ್ರಕೃತಿಯು, ಅವುಗಳಲ್ಲಿ ಉತ್ತಮ ಪೋಷಕಾಂಶಗಳನ್ನು ತುಂಬಿರುತ್ತದೆ. ಇಲ್ಲಿ ರಾಸಾಯನಿಕಗಳಿಗೆ ಆಸ್ಪದವಿಲ್ಲ. ಇಂತಿಪ್ಪ ಹಣ್ಣುಗಳು ಸಹಜವಾಗಿ ಸ್ವಾದಿಷ್ಟ ರುಚಿಯನ್ನು ಹೊಂದಿದ್ದು, ಋತುಮಾನಕ್ಕೆ ಅನುಗುಣವಾಗಿ ಮಾತ್ರ ಅವು ಲಭ್ಯ. ಮನುಷ್ಯ ಬೆಳೆದ ಹಣ್ಣುಗಳ ಬೆಲೆಗೆ ಹೋಲಿಸಿದರೆ ಕಾಡುಹಣ್ಣುಗಳ ಬೆಲೆ ಕಡಿಮೆ ಹಾಗೂ ಇವು ರಾಸಾಯನಿಕ ಮುಕ್ತವಾಗಿರುವುದರಿಂದ ಆರೋಗ್ಯಕರವೂ ಹೌದು.

ಈ ಹಣ್ಣುಗಳನ್ನು ಕಾಡಿನಿಂದ ನಾಡಿಗೆ ತರುವುದರಿಂದ, ಈ ಹಣ್ಣುಗಳನ್ನೆ ನೆಚ್ಚಿಕೊಂಡ ಅನೇಕ ಪ್ರಾಣಿಪಕ್ಷಿಗಳು ಉಪವಾಸ ಬೀಳುತ್ತವೆ. ಅದರಲ್ಲೂ ವಿಶೇಷವಾಗಿ ಕರಡಿಗಳು ಕಾಡಿನಲ್ಲಿ ದೊರೆಯುವ ಸೀತಾಫಲ ಹಣ್ಣುಗಳನ್ನು ಬಹುವಾಗಿ ಮೆಲ್ಲುತ್ತವೆ. ಕಾಡಿನಲ್ಲಿ ಆಹಾರದ ಅಭಾವ ಎದುರಾದರೆ ಕಾಡುಪ್ರಾಣಿಗಳು ನಾಡಿನತ್ತ ಮುಖಮಾಡುತ್ತವೆ. ಉತ್ತಮ ಗುಣಮಟ್ಟದ ಹಣ್ಣುಗಳು ಎಲ್ಲಾ ಜೀವಿಗಳಿಗೂ ಸುಲಭವಾಗಿ ಸಿಗುವಂತಾಗಬೇಕು ಮತ್ತು ಅದಕ್ಕಾಗಿ ಕಾಡುಗಳು ಉಳಿಯಬೇಕು, ಬೆಳೆಯಬೇಕು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

UASD Library

ಬಸಳೆಯಿಂದ ಬಗೆ ಬಗೆಯ ತಿನಿಸು

ಕರಾವಳಿ, ಮಲೆನಾಡು ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಬಸಳೆ ಸೊಪ್ಪಿನ ರುಚಿಯೇ ವಿಶಿಷ್ಟ. ತುಮಕೂರು, ಬೆಂಗಳೂರು ಭಾಗದಲ್ಲಿಯೂ ಬಳ್ಳಿ ಬಸಳೆ ಸಿಗದಿದ್ದರೂ ಗಿಡ ಬಸಳೆ ಸಾಕಷ್ಟಿದೆ. ಆದರೆ ಎಲ್ಲ ಕಡೆ ಹೆಚ್ಚಾಗಿ ಇದನ್ನು ಸಾಂಬಾರು ಮಾಡಲಿಕ್ಕೆ ಮಾತ್ರ ಬಳಸುತ್ತಾರೆ. ಅದರ ಹೊರತಾಗಿ ಬಸಳೆಯಿಂದ ಮಾಡಬಹುದಾದ ಹಲವು ರುಚಿಯುತ ಖಾದ್ಯಗಳ ವಿವರ ಇಲ್ಲಿದೆ..

■ ಹೀರಾ ರಮಾನಂದ್

ಬಸಳೆ ದೋಸೆ

ಏನೇನು ಬೇಕು?

- ಅಕ್ಕಿ 1/4 ಕೆಜಿ
- ಒಂದು ಹಿಡಿ ಬೆಲ್ಲ
- ಕಾಯಿ ತುರಿ 1/2 ಬಟ್ಟಲು
- ಬಸಳೆ ಸೊಪ್ಪು 2 ಹಿಡಿ

ಮಾಡೋದು ಹೇಗೆ?

ಮೊದಲು ಅಕ್ಕಿಯನ್ನು 2–3 ಗಂಟೆ ನೆನಸಿಡಿ. ನಂತರ ಕಾಯಿತುರಿ ಜೊತೆ ನೀರು ಹಾಕದೆ ಅದನ್ನು ರುಬ್ಬಿ. ನಂತರ ಬೆಲ್ಲ, ಬಸಳೆ ಸೊಪ್ಪು ಹಾಕಿ ರುಬ್ಬಿ. ದೋಸೆ ಹಿಟ್ಟಿನ ಹದಕ್ಕೆ ರುಬ್ಬಿಕೊಳ್ಳಿ. ನಂತರ ಸಾಮಾನ್ಯವಾಗಿ ಮಾಡುವ ದೋಸೆ ರೀತಿಯಲ್ಲಿಯೇ ಕಾವಲಿಯಲ್ಲಿ ಬೇಯಿಸಿ. ಚಟ್ನಿ, ಸಾಂಬಾರಿನೊಂದಿಗೆ ಸವಿದರೆ ಬಲುರುಚಿ.

ಬಸಳೆ ಬೋಂಡಾ

ಏನೇನು ಬೇಕು?

- 10 ಬಸಳೆ ಎಲೆ
- 1/2 ಬಟ್ಟಲು ಕಡಲೆ ಹಿಟ್ಟು
- ಸ್ವಲ್ಪ ಅಕ್ಕಿ ಹಿಟ್ಟು
- 1/2 ಚಮಚ ಅಚ್ಚ ಖಾರದ ಪುಡಿ
- ಚಿಕ್ಕ ಶುಂಠಿ ತುಂಡು
- ರುಚಿಗೆ ತಕ್ಕಷ್ಟು ಉಪ್ಪು
- ಕರಿಯಲು ಎಣ್ಣೆ

ಮಾಡೋದು ಹೇಗೆ?

ಶುಂಠಿಯನ್ನು ಚೆನ್ನಾಗಿ ಜಜ್ಜಿ. ಅಚ್ಚಖಾರದ ಪುಡಿ, ಕಡಲೆ ಹಿಟ್ಟು, ಅಕ್ಕಿ ಹಿಟ್ಟು, ಉಪ್ಪು ಎಲ್ಲಾ ಸೇರಿಸಿ ಬೋಂಡಾ ಹದಕ್ಕೆ ಕಲಸಿ. ನಂತರ ಬಸಳೆ ಎಲೆಯನ್ನು ಹಿಟ್ಟಿನಲ್ಲಿ ಅದ್ದಿ ಒಂದೊಂದಾಗಿ ಕಾದ ಎಣ್ಣೆಯಲ್ಲಿ ಕರಿಯಿರಿ. ಮೆಣಸಿನಕಾಯಿ ಬೋಂಡಾದ ರೀತಿಯಲ್ಲಿಯೇ ಗರಿಯಾದ ಬೋಂಡಾ ಸಿದ್ಧ. ಸಂಜೆ ಲಘು ಉಪಹಾರಕ್ಕೆ ಉತ್ತಮ ತಿಂಡಿ.

ಬಸಳೆ ತಂಬುಳಿ

ಏನೇನು ಬೇಕು?

- ಐದಾರು ಬಸಳೆ ಎಲೆ
- ಒಂದು ಚಮಚ ಜೀರಿಗೆ
- ಒಂದು ಹಸಿಮೆಣಸಿನಕಾಯಿ
- 1/4 ಲೋಟ ತೆಂಗಿನ ತುರಿ
- ಉಪ್ಪು ರುಚಿಗೆ ತಕ್ಕಷ್ಟು
- ಅರ್ಧ ಲೋಟ ಮೊಸರು

ಮಾಡೋದು ಹೇಗೆ?

ಬಸಳೆ ಎಲೆ ತೊಳೆದು ಸ್ವಲ್ಪ ಎಣ್ಣೆ ಹಾಕಿ ಬಾಣಲೆಯಲ್ಲಿ ಬಾಡಿಸಿ. ಜೀರಿಗೆ ಹಾಕಿ. ಹಸಿಮೆಣಸಿನಕಾಯಿ, ಉಪ್ಪು ಸೇರಿಸಿ ಮಿಕ್ಸಿಯಲ್ಲಿ ರುಬ್ಬಿ. ಅನ್ನದೊಂದಿಗೆ ಕಲಸಿಕೊಳ್ಳಲು ಬೇಕಾದಷ್ಟು ದಪ್ಪಕ್ಕೆ ಇದನ್ನು ರುಬ್ಬಿ. ನಂತರ ಮೊಸರು ಸೇರಿಸಿ. ಸಾಸಿವೆ ಕಾಳು, ಒಣ ಮೆಣಸಿನಕಾಯಿ ಒಗ್ಗರಣೆ ನೀಡಿ. ಇದನ್ನು ಅನ್ನಕ್ಕೆ ಕಲಸಿಕೊಳ್ಳಲು ಚೆನ್ನಾಗಿರುತ್ತದೆ. ಹಾಗೆಯೂ ಸೂಪ್ ರೂಪದಲ್ಲಿಯೂ ಕುಡಿಯಬಹುದು.

USB Library





ಬಸಳೆ ಸೊಪ್ಪಿನ ಪತ್ರೊಡೆ

ಏನೇನು ಬೇಕು?

- ಒಂದು ಲೋಟ ಅಕ್ಕಿ
- ಅರ್ಧ ಲೋಟ ತೊಗರಿಬೇಳೆ
- ನಿಂಬೆಹಣ್ಣು ಗಾತ್ರದಷ್ಟು ಹುಣಸೆಹಣ್ಣು
- ಸ್ವಲ್ಪ ಅರಿಶಿಣ
- 2–3 ಬ್ಯಾಡಗಿ ಮೆಣಸಿನಕಾಯಿ
- 8–10 ಬಸಳೆ ಎಲೆ

ಮಾಡೋದು ಹೇಗೆ?

ಅಕ್ಕಿ, ತೊಗರಿ ಬೇಳೆ ಒಂದೆರಡು ಗಂಟೆ ಕಾಲ ನೆನಸಿ. ನಂತರ ಹುಣಸೆಹಣ್ಣು, ಉಪ್ಪು, ಕೆಂಪು ಮೆಣಸಿನಕಾಯಿ ಹಾಕಿ ರುಬ್ಬಿರಿ. ಒಂದು ಮಣೆ ಮೇಲೆ ಬಸಳೆ ಎಳೆದು ತೊಳೆದು ಒಂದರ ಮೇಲೆ ಒಂದು ಇಟ್ಟು ಈ ಹಿಟ್ಟನ್ನು ಸವರಬೇಕು. ಆಮೇಲೆ ಚಾಪೆ ತರ ಎರಡು ಕಡೆನೂ ಮಡಚಿ ಸುತ್ತಬೇಕು. ಒಂದು ದಾರದಲ್ಲಿ ಕಟ್ಟಿ ಇಟ್ಟು, ಕುಕ್ಕರ್ ಪಾತ್ರೆಯಲ್ಲಿ ನೀರು ಹಾಕಿ. ಒಂದು ಖಾಲಿ ತಟ್ಟೆ ಇಟ್ಟು ಅದರಲ್ಲಿ ಎಣ್ಣೆ ಸವರಬೇಕು. ನಂತರ ಮಸಾಲೆಯೊಂದಿಗೆ ಕಟ್ಟಿ ಇಟ್ಟ ಬಸಳೆ ಎಲೆಯನ್ನು ತಟ್ಟೆಯಲ್ಲಿ ಇಡಿ. ಕುಕ್ಕರ್ ಮುಚ್ಚಳ ಮುಚ್ಚಿ ಒಲೆ ಮೇಲಿಡಿ. ಅರ್ಧ ಗಂಟೆ ನಂತರ ತೆಗೆಯಬೇಕು. ಕುಕ್ಕರ್‌ಗೆ ವಿಷಲ್ ಹಾಕಬಾರದು. ಆರಿದ ನಂತರ ಪತ್ರೊಡೆ ತುಂಡು ಮಾಡಿ ಸವಿಯಿರಿ.

ಕಾವಲಿ ಮೇಲೆ ಎಣ್ಣೆ ಹಚ್ಚಿ ಪತ್ರೊಡೆಯನ್ನು ಒಂದೊಂದು ಹೋಳು ಮಾಡಿ. ಎರಡು ಕಡೆನೂ ಕಾಯಿಸಿಕೊಳ್ಳಬೇಕು. ಸ್ವಲ್ಪ ಗರಿ ಆಗುವ ತನಕ ಮುಚ್ಚಬೇಕು. ಕಾವಲಿ ಪತ್ರೊಡೆಯಾಗಿಯೂ ಇದನ್ನು ಸೇವಿಸಬಹುದು.

ಪತ್ರೊಡೆ ಸಣ್ಣ ತುಂಡು ಮಾಡಿ. ಬಾಣಲಿಯಲ್ಲಿ ಎಣ್ಣೆ ಹಾಕಿ. ಸಾಸಿವೆ, ಉದ್ದಿನಬೇಳೆ, ಕೆಂಪು ಮೆಣಸಿನಕಾಯಿ ಹಾಕಿ ತುಂಡು ಮಾಡಿದ ಪತ್ರೊಡೆ ಸೇರಿಸಿ ಚೆನ್ನಾಗಿ ಬಾಡಿಸಿ. ಬಾಡಿಸಿದ್ದ ನಂತರ ಹಸಿ ಕೊಬ್ಬರಿ ಹಾಕಿದರೆ ಪತ್ರೋಡೆ ಪಲ್ಯ ಕೂಡ ಸಿದ್ಧ.

ಬಸಳೆ ಹುಳಿ

ಏನೇನು ಬೇಕು?

- ಎರಡು ಬಟ್ಟಲು ಬಸಳೆ (ಹೆಚ್ಚಿದ್ದು)
- 1 ಬಟ್ಟಲು ಕಾಯಿ ತುರಿ
- 2 ಚಮಚ ಹುರಿದ ಕೊತ್ತಂಬರಿ
- 1/4 ಚಮಚ ಮೆಂತೆ
- ಸ್ವಲ್ಪ ಹುಣಸೆ ಹಣ್ಣು
- 7–8 ಹುರಿದ ಬ್ಯಾಡಗಿ ಮೆಣಸಿನಕಾಯಿ
- ರುಚಿಗೆ ತಕ್ಕಷ್ಟು ಉಪ್ಪು
- 2 ಬಟ್ಟಲು ತೊಗರಿಬೇಳೆ
- ಒಗ್ಗರಣೆಗೆ ಸಾಸಿವೆ ಹಾಗೂ ಇಂಗು



ಮಾಡೋದು ಹೇಗೆ?

ಬಸಳೆ ಸೊಪ್ಪನ್ನು ದಂಟು ಸಮೇತ ಸಾಂಬಾರು ಹೋಳು ಗಾತ್ರಕ್ಕೆ ಹೆಚ್ಚಿಕೊಳ್ಳಿ. ಅದನ್ನು ನೀರಿನಿಂದ ತೊಳೆದು ತೊಗರಿಬೇಳೆಯೊಂದಿಗೆ ಕುಕ್ಕರ್‌ನಲ್ಲಿಟ್ಟು ಬೇಯಿಸಿ. ಮಿಕ್ಸರ್‌ನಲ್ಲಿ ಕಾಯಿತುರಿ, ಬ್ಯಾಡಿಗೆಮೆಣಸು, ಮೆಂತೆ, ಹುಣಸೆಹಣ್ಣು ಹಾಕಿ ಹದವಾಗಿ ರುಬ್ಬಬೇಕು. ಸ್ವಲ್ಪ ನೀರು ಹಾಕಿ ಮಸಾಲೆಗೆ ಸೇರಿಸಿ. ಒಂದು ಪಾತ್ರೆಯಲ್ಲಿ ಬೇಳೆ ಹಾಗೂ ಬಸಳೆ ಸೋಪು ಹಾಕಿ ರುಬ್ಬಿದ ಮಸಾಲೆ ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಐದು ನಿಮಿಷ ಕುದಿಯಬೇಕು. ನಂತರ ಸಾಸಿವೆ, ಇಂಗು ಒಗ್ಗರಣೆ ಕೊಡಿ. ರುಚಿಗೆ ಸ್ವಲ್ಪ ಬೆಲ್ಲ ಹಾಕಬಹುದು. ಇದರ ಜೊತೆ ಈರುಳ್ಳಿ ಹಾಗೂ ಬೆಳ್ಳುಳ್ಳಿ ಒಗ್ಗರಣೆಯನ್ನೂ ಕೊಡಬಹುದು.

UASB Library

ನೀವೂ ಬರೆಯಿರಿ

ನೀವು ಕಾಲ, ಕಾಲಕ್ಕೆ ಮಾಡುವ ವಿಶಿಷ್ಟ ತಿನಿಸುಗಳು, ಹಬ್ಬ ಹರಿದಿನಗಳಂದು ನಿಮ್ಮ ಸಮುದಾಯದಲ್ಲಿ ಅಥವಾ ಊರಿನಲ್ಲಿ ಮಾತ್ರವೇ ಮಾಡುವ ವಿಶಿಷ್ಟ ಖಾದ್ಯಗಳು, ನಿಮ್ಮ ಮನೆಗಾಗಿ ನೀವೇ ಕಂಡುಕೊಂಡ, ಕಲಿತುಕೊಂಡ ವೆಜ್/ನಾನ್‌ವೆಜ್ ಹೊಸ ರೆಸಿಪಿಗಳನ್ನು ನೀವೂ ಆಹಾರ ಪುಟದಲ್ಲಿ ಹಂಚಿಕೊಳ್ಳಬಹುದು. ಲೇಖನದ ಮಾದರಿ, ಎಷ್ಟು ರೆಸಿಪಿಗಳು ಬೇಕು ಎಂಬುದಕ್ಕೆ ಒಮ್ಮೆ ಆಹಾರ ಪುಟವನ್ನು ಗಮನಿಸಿ. ಲೇಖನವನ್ನು editorsu@sudha.co.in ವಿಳಾಸಕ್ಕೆ ಇಮೇಲ್ ಮೂಲಕ ಕಳುಹಿಸಿಕೊಡಿ. ಅಂದಹಾಗೆ ಲೇಖನದೊಂದಿಗೆ ಮಾಡಿದ ಅಡುಗೆಯ ಫೋಟೊ ಹಾಗೂ ನಿಮ್ಮ ಚಿತ್ರ ಕಳುಹಿಸಲು ಮರೆಯದಿರಿ.

ಕುಶಾಲ

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ

2026



ಬೆಲೆ
₹40

UASRL Library



ಜೀವ ವೈವಿಧ್ಯ

ಗಣೇಶ ಭಟ್ಟ, ಕುಮಟಾ

ಕೆಂಪು ಏಡಿಗಳ ಸಾಮೂಹಿಕ ವಾರ್ಷಿಕ ವಲಸೆ

ಪ್ರಪಂಚದಲ್ಲಿ ಹಲವಾರು ಪ್ರಾಣಿ, ಪಕ್ಷಿಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದು ಸಹಸ್ರಾರು ವರ್ಷಗಳಿಂದ ನಡೆದು ಬಂದಿದೆ. ಆಹಾರದ ಹುಡುಕಾಟದಲ್ಲಿಯೋ, ಹವಾಮಾನ ಬದಲಾವಣೆಗಾಗಿಯೋ ನಡೆಯುವ ವಲಸೆ ಅವುಗಳ ಸಾಮಾನ್ಯ ಗುಣಧರ್ಮ ಎಂದು ತಿಳಿಯಲಾಗಿದೆ. ಮನುಷ್ಯನೂ ಅದಕ್ಕೆ ಹೊರತಲ್ಲ. ಶತಮಾನಗಳಿಂದ ಅವು ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಪ್ರದೇಶಕ್ಕೆ ಹಿಂದಿನ ಬಾರಿ ಹೋದ ಹಾದಿಯಲ್ಲಿಯೇ ಹೋಗಿ ಬರುತ್ತಿರುವುದು ಅಚ್ಚರಿಯ ವಿಷಯವೇ ಸರಿ. ಕೆಲವೊಮ್ಮೆ ಅವುಗಳ ಪ್ರಯಾಣ ಸಾವಿರಾರು ಮೈಲಿಗಳ ದೂರದ್ದಾಗಿದ್ದರೆ ಇನ್ನು ಕೆಲವೊಮ್ಮೆ ಕೆಲವೇ ಮೈಲಿಗಳ ದೂರದ್ದೂ ಆಗಿರಬಹುದು. ಗ್ರೀನ್‌ಲ್ಯಾಂಡ್ ಪ್ರದೇಶದಿಂದ ಅಂಟಾರ್ಕ್ಟಿಕಾ ಪ್ರದೇಶಕ್ಕೆ ವಲಸೆ ಹೋಗುವ ಕಡಲು ಹಕ್ಕಿಗಳ See Gull – Arctic Tern ವಲಸೆಯ ಪ್ರಯಾಣ ಸುಮಾರು 25000 ಮೈಲಿಗಳಿಗೂ ಹೆಚ್ಚು. ಆಫ್ರಿಕಾದ ಜಾಂಬಿಯಾದ ಕಸಂಕಾ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಕೇವಲ ಎರಡು ಮೂರು ಚದರ ಕಿಲೋಮೀಟರು ವಿಸ್ತೀರ್ಣದ ಜೌಗು ಪ್ರದೇಶದ ಕಾಡು ಇದೆ. ಅಲ್ಲಿಗೆ ಬೇರೆಬೇರೆ ಕಡೆಗಳಿಂದ ಪ್ರತಿವರ್ಷ ಅಕ್ಟೋಬರದಿಂದ ಡಿಸೆಂಬರ ವರೆಗಿನ ಅವಧಿಯಲ್ಲಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ತಲೆಕೆಳಗಾಗಿ ನೇತಾಡುವ ಬಾವಲಿಗಳು [Fruit Bat] ವಲಸೆ ಬರುತ್ತವೆ. ರಷ್ಯಾದ ಬಳಿಯ ಕಡಲಿಗೆ ವಲಸೆ ಬಂದು ತಿರುಗಿ ಹೋಗುವ ಬೂದು ಬಣ್ಣದ ತಿಮಿಂಗಿಲಗಳ (Gray Whale) ಪ್ರಯಾಣ ಸುಮಾರು 12000 ಮೈಲಿಗಳಿಗೂ ಅಧಿಕ. ಪ್ರತಿ ವರ್ಷ ಕೀನ್ಯಾ ಮತ್ತು ತಾಂಜಾನಿಯಾ ಪ್ರದೇಶದಲ್ಲಿ ನಡೆಯುವ ವಿಲ್ಡ್ ಬೀಸ್ಟ್ [Wilde Beest] ಎಂಬ ಜಿಂಕೆಯ ಜಾತಿಯ ಹುಲ್ಲು ಮೇಯುವ ಪ್ರಾಣಿಯ ವಲಸೆ ಸಾವಿರಾರು ಮೈಲಿಗಳು. ಪ್ರತಿವರ್ಷ ನಡೆಯುವ ಸುಮಾರು 15 ರಿಂದ 20 ಲಕ್ಷ ವಿಲ್ಡ್‌ಬೀಸ್ಟ್‌ಗಳ ವಲಸೆ ಜಗತ್ಪ್ರಸಿದ್ಧವಾಗಿದೆ. ಅಂತೆಯೇ ಫ್ಲೆಮಿಂಗೋ ಹಕ್ಕಿಗಳು, ಸಾಲ್ಮನ್ ಮೀನುಗಳು, ವಲಸೆಯ ದಾರಿಯಲ್ಲಿಯೇ ಜನಿಸಿದ ಮುಂದಿನ ತಲೆಮಾರುಗಳೂ ಅದೇ ಪ್ರಯಾಣವನ್ನು ಮುಂದುವರೆಸುವ ಮೊನಾರ್ಕ್ ಚಿಟ್ಟೆಗಳೂ ತಮ್ಮ ವಲಸೆಯ ಕಾರಣಕ್ಕಾಗಿಯೇ ಹೆಸರಾಗಿವೆ. ಅವುಗಳ ಪ್ರಯಾಣ, ಸಮಯ, ದೂರ, ದಾರಿ ಮತ್ತು ಆ ಸಮಯದಲ್ಲಿ ಅವು ತೋರ್ಪಡಿಸುವ ಒಂದೇ ಬಗೆಯ ಗುಣಧರ್ಮಗಳಿಗಾಗಿ ವಿಶೇಷವೆನಿಸುತ್ತದೆ.

